Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 39 | ಸೆಪ್ಟೆಂಬರ್ 19–25, 2022 | ಪುಟ 16 | ರೂ.10/-

Volume: 16 Issue: 39 September 19-25, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಕೇರಳ
ಎಲ್.ಡಿ.ಎಫ್. ಸರ್ಕಾರ
ಅಡೆತಡೆಯಿಲ್ಲದ ಅಭಿವೃದ್ಧಿ

ಜನರ ಸಮಸ್ಯೆಗಳ ಪರಿಹಾರಕ್ಕೆ ಪರ್ಯಾಯ
ನೀತಿಗಳಿಗಾಗಿ
ಸೆಪ್ಟೆಂಬರ್ ಅಭಿಯಾನ

ದಿಲ್ಲಿಯಲ್ಲಿ "ಮಜ್ದೂರ್–ಕಿಸಾನ್ ಅಧಿಕಾರ ಮಹಾಧಿವೇಶನ"

2023ರ ಬಜೆಟ್ ಅಧಿವೇಶನದ ವೇಳೆಯಲ್ಲಿ "ಮಜ್ದೂರ್ ಸಂಘರ್ಷ ರ್‍ಯಾಲಿ 2.0"ಗೆ ಕರೆ

ಸೆಪ್ಟೆಂಬರ್ 5, ರಾಷ್ಟ್ರ ರಾಜಧಾನಿಯ ತಲ್ಕಟೋರಾ ಕ್ರೀಡಾಂಗಣದಲ್ಲಿ ರೈತರು, ಕಾರ್ಮಿಕರು ಮತ್ತು ಕೃಷಿ ಕೂಲಿಕಾರರ "ಮಜ್ದೂರ್–ಕಿಸಾನ್ ಅಧಿಕಾರ್ ಮಹಾಧಿವೇಶನ" ಎಂಬ ಬೃಹತ್ ಸಮಾವೇಶ ನಡೆಯಿತು. ಸಿಐಟಿಯು, ಎಐಕೆಎಸ್ (ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು(ಕೃಷಿ ಕೂಲಿಕಾರರ ಸಂಘ) 4 ವರ್ಷಗಳ ಹಿಂದೆ ಇದೇ ದಿನದಂದು(ಸಪ್ಟಂಬರ್ 5, 2018) ನಡೆದ ಐತಿಹಾಸಿಕ 'ಮಜ್ದೂರ್ ಕಿಸಾನ್ ಸಂಘರ್ಷ್ ರ್‍ಯಾಲಿ'ಯ ವಾರ್ಷಿಕೋತ್ಸವದಂದು ಈ ಸಮಾವೇಶಕ್ಕೆ ಕರೆ ನೀಡಿದ್ದವು. ದೇಶದ ಎಲ್ಲೆಡೆಗಳಿಂದ 5000ಕ್ಕೂ ಹೆಚ್ಚು ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಇದರಲ್ಲಿ ಭಾಗವಹಿಸಿದರು ಎಂದು ತಿಳಿದು ಬಂದಿದೆ.

ದೇಶದ ದುಡಿಯುವ ವರ್ಗದ ಈ ಮೂರು ವಿಭಾಗಗಳ ಸಂಘಟನೆಗಳ ಐಕ್ಯತೆಯನ್ನು ಬಲಪಡಿಸಲು ಮತ್ತು ಆಳುವ ಶಕ್ತಿಗಳು ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಜನವಿರೋಧಿ ನವ ಉದಾರವಾದಿ ನೀತಿಗಳ ವಿರುದ್ಧ ಜಂಟಿ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಈ ರಾಷ್ಟ್ರೀಯ ಸಮಾವೇಶ ಸರ್ವಾನುಮತದಿಂದ ನಿರ್ಧರಿಸಿತು. ದೇಶಾದ್ಯಂತ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಪರಸ್ಪರರ ಸ್ವತಂತ್ರ ಹೋರಾಟಗಳಿಗೆ ಸಾಧ್ಯವಿರುವ ಎಲ್ಲ ರೀತಿಯಲ್ಲಿ ಬೆಂಬಲ ಮತ್ತು ಸೌಹಾರ್ದವನ್ನು ನೀಡಬೇಕು ಮತ್ತು ಬಲಿಷ್ಠ ಜಂಟಿ ಕಾರ್ಯಾಚರಣೆಗಳನ್ನು ಕಟ್ಟಬೇಕು ಎಂದು ಸಮಾವೇಶವು ಕರೆ ನೀಡಿತು.

2023 ರ ಸಂಸತ್ತಿನ ಬಜೆಟ್ ಅಧಿವೇಶನದ ವೇಳೆಯಲ್ಲಿ 'ಮಜ್ದೂರ್ ಸಂಘರ್ಷ್ ರ್‍ಯಾಲಿಯ ಎರಡನೇ ಆವೃತ್ತಿಗೆ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಸಮರಶೀಲ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಸಜ್ಜುಗೊಳಿಸಬೇಕು ಎಂದೂ ಈ ಜಂಟಿ ಸಮಾವೇಶವು ನಿರ್ಧರಿಸಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಸಂಪತ್ತು ಉತ್ಪಾದಿಸುವ ವರ್ಗಗಳ ಅತಿ ದೊಡ್ಡ ಅಣಿನೆರಿಕೆಗೆ ರಾಷ್ಟ್ರೀಯ ರಾಜಧಾನಿ ಸಾಕ್ಷಿಯಾಗಲಿದೆ ಎಂದು ಸಮಾವೇಶವು ಪ್ರತಿಪಾದಿಸಿತು. ನವ ಉದಾರವಾದಿ ನೀತಿಯ ಆಕ್ರಮಣಗಳ ವಿರುದ್ಧ ನೇರ ಪ್ರತಿರೋಧದ ಹೋರಾಟಗಳನ್ನು ಹರಿಯ ಬಿಡಲಿಕ್ಕಾಗಿ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರನ್ನು ಸಿದ್ಧಗೊಳಿಸಲು ಅಕ್ಟೋಬರ್ 2022 ರಿಂದ ಫೆಬ್ರವರಿ 2023 ರವರೆಗೆ ವ್ಯಾಪಕ ಜಂಟಿ ಅಭಿಯಾನಗಳನ್ನು ನಡೆಸಲು ಈ ಜಂಟಿ ಸಮಾವೇಶವು ಸರ್ವಾನುಮತದಿಂದ ನಿರ್ಧರಿಸಿತು.

ಸಮಾವೇಶದ ಅಧ್ಯಕ್ಷ ಮಂಡಳಿಯಲ್ಲಿ ಸಿಐಟಿಯು ಅಧ್ಯಕ್ಷೆ ಕೆ ಹೇಮಲತಾ, ಎಐಕೆಎಸ್ ಅಧ್ಯಕ್ಷ ಅಶೋಕ್ ಢವಳೆ ಮತ್ತು ಎಐಎಡಬ್ಲ್ಯುಯು ಅಧ್ಯಕ್ಷ ಎ ವಿಜಯರಾಘವನ್ ಇದ್ದರು. ಸಿಐಟಿಯುನ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ ಮತ್ತು ಎಐಎಡಬ್ಲ್ಯುಯು ಪ್ರಧಾನ ಕಾರ್ಯದರ್ಶಿ ಬಿ ವೆಂಕಟ್ ಈ ಮೂರು ಸಂಘಟನೆಗಳ ಜಂಟಿ ಘೋಷಣೆಯನ್ನು ಬೆಂಬಲಿಸಿ ಜಂಟಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಬ್ಯಾಂಕ್, ವಿಮೆ, ಬಿಎಸ್ಎನ್ಎಲ್, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಒಕ್ಕೂಟಗಳು ಮತ್ತು ಇತರ ರೈತರು ಮತ್ತು ಕೃಷಿ ಸಂಘಟನೆಗಳ ಮುಖಂಡರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

"ಆರೆಸ್ಸೆಸ್‌ನಿಂದ ನಿಯಂತ್ರಿಸಲ್ಪಡುತ್ತಿರುವ ಈಗಿನ ಮೋದಿ ನೇತೃತ್ವದ ಬಿಜೆಪಿ ಆಡಳಿತವು ಕಳೆದ 75 ವರ್ಷಗಳಲ್ಲಿ ನಾವು, ಜನತೆ ನಮ್ಮ ಶ್ರಮದಿಂದ ಇಟ್ಟಿಗೆ–ಇಟ್ಟಿಗೆಗಳನ್ನು ಜೋಡಿಸಿ ನಿರ್ಮಿಸಿದ್ದನ್ನು ಮತ್ತು ನಮ್ಮ ಹೋರಾಟ ಮತ್ತು ತ್ಯಾಗದಿಂದ ನಾವು ಸಾಧಿಸಿದ್ದನ್ನು ನಾಶಪಡಿಸುತ್ತಿದೆ" ಎಂದು ಗಮನಿಸಿದ ಜಂಟಿ ಸಮಾವೇಶವು ಬ್ರಿಟೀಷ್ ವಸಾಹತುಶಾಹಿಯಿಂದ ಮಾತ್ರವಲ್ಲದೆ, ವರ್ಗ, ಜಾತಿ, ಪಂಥ, ಧರ್ಮ ಅಥವಾ ಲಿಂಗದ ಆಧಾರದ ಮೇಲೆ ಎಲ್ಲಾ ರೀತಿಯ ದಬ್ಬಾಳಿಕೆ ಮತ್ತು ತಾರತಮ್ಯಗಳಿಂದ ಸ್ವಾತಂತ್ರ್ಯದ ಮತ್ತು ಸ್ವಾತಂತ್ರ್ಯ ಮತ್ತು ಘನತೆಯಿಂದ ಬದುಕಬಹುದಾದ ದೇಶವನ್ನು ಕಟ್ಟುವ ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಕನಸನ್ನು ಅದು ತುಳಿದು ಹಾಕುತ್ತಿದೆ ಎಂದು ಹೇಳಿದೆ.

"ಇಂದಿನ ಹೋರಾಟವು ನಮ್ಮ ಜೀವನೋಪಾಯ ಮತ್ತು ಜೀವನ ಮತ್ತು ಕೆಲಸದ ಪರಿಸ್ಥಿತಿಗಳ ತಕ್ಷಣದ ಬೇಡಿಕೆಗಳಿಗಾಗಿ ಮಾತ್ರವಲ್ಲದೆ ದೇಶದ ಆರ್ಥಿಕತೆಯನ್ನು ಉಳಿಸಲು, ನಮ್ಮ ಸಮಾಜದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಈ ಕೋಮುವಾದಿ ಮತ್ತು ಸರ್ವಾಧಿಕಾರಿ ಬಿಜೆಪಿ–ಆರ್‌ಎಸ್‌ಎಸ್ ಆಳ್ವಿಕೆಯಿಂದ ಉಳಿಸಲು ನಡೆಸುವ ಹೋರಾಟವಾಗಿದೆ" ಎಂದು ಪ್ರತಿಪಾದಿಸಿದ ಸಮಾವೇಶ, ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಡಲು ಮತ್ತು ಬಿಜೆಪಿ–ಆರ್‌ಎಸ್‌ಎಸ್‌ನ ನವ–ಉದಾರವಾದಿ, ಕೋಮುವಾದಿ ಮತ್ತು ನಿರಂಕುಶ ಆಳ್ವಿಕೆಯ ಸೋಲಿಗೆ ಅವಿರತವಾಗಿ ಶ್ರಮಿಸಲು ದೇಶಾದ್ಯಂತ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಒಗ್ಗಟ್ಟಿನಿಂದ ಎದ್ದು ನಿಲ್ಲಬೇಕೆಂದು ಕರೆ ನೀಡಿದೆ.



ಸಮಾವೇಶವು ಎಲ್ಲಾ ಕಾರ್ಮಿಕರಿಗೆ 26,000 ರೂ. ಕನಿಷ್ಠ ವೇತನ 10,000 ರೂ. ಪಿಂಚಣಿ , ಖಾತರಿ ಖರೀದಿಯೊಂದಿಗೆ ಎಲ್ಲಾ ಕೃಷಿ ಉತ್ಪನ್ನಗಳಿಗೆ ಸಿ2+50% ಸೂತ್ರದಂತೆ ಕನಿಷ್ಟ ಬೆಂಬಲ ಬೆಲೆಯ ಗ್ಯಾರಂಟಿ, ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆ 2020 ರ ರದ್ಧತಿ, ಮನರೇಗ ಸ್ಕೀಮಿನ ಅಡಿಯಲ್ಲಿ 200 ದಿನಗಳ ಕೆಲಸ ಮತ್ತು ದಿನಕ್ಕೆ 600ರೂ.ಕೂಲಿ ಒದಗಿಸುವುದು ಮತ್ತು ನಗರ ಪ್ರದೇಶಗಳಿಗೆ ಈ ಯೋಜನೆಯ ವಿಸ್ತರಣೆ ಮತ್ತು ಬಡ ಮತ್ತು ಮಧ್ಯಮ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಒಂದು ಬಾರಿ ಸಾಲ ಮನ್ನಾ ಮುಂತಾದ ಈ ದೇಶದ ದುಡಿಯುವ ಜನರ ಮೂಲಭೂತ ಬೇಡಿಕೆಗಳನ್ನು ಪುನರುಚ್ಚರಿಸಿತು ಹಾಗೂ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣವನ್ನು ನಿಲ್ಲಿಸಬೇಕು, ರಾಷ್ಟ್ರೀಯ ಸೊತ್ತುಗಳ ನಗದೀಕರಣ ಯೋಜನೆಯನ್ನು, ಮತ್ತು ಅಗ್ನಿಪಥ್ ಕ್ರಮವನ್ನು ರದ್ದುಗೊಳಿಸಬೇಕು, ಬೆಲೆ ಏರಿಕೆಯನ್ನು ತಡೆಗಟ್ಟಬೇಕು ಮತ್ತು ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು ಮತ್ತು ಸಾರ್ವತ್ರಿಕಗೊಳಿಸಬೇಕು ಹಾಗೂ ಸೂಪರ್ ಶ್ರೀಮಂತರ ಮೇಲೆ ತೆರಿಗೆ ಹಾಕಬೇಕು ಎಂದು ಆಗ್ರಹಿಸಿತು.

ಈ ಬೇಡಿಕೆಗಳನ್ನು ದೇಶಾದ್ಯಂತ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ನಡುವೆ ಕೊಂಡೊಯ್ಯಲು, ಅಕ್ಟೋಬರ್ 2022 ರಿಂದ ಫೆಬ್ರವರಿ 2023 ರವರೆಗೆ ತೀವ್ರ ಮತ್ತು ವ್ಯಾಪಕವಾದ ಅಭಿಯಾನವನ್ನು ಕೈಗೊಳ್ಳಬೇಕೆಂದು ಈ ಸಮಾವೇಶವು ಎಲ್ಲಾ ಮೂರು ಸಂಘಟನೆಗಳ ಕೆಳ ಹಂತದವರೆಗಿನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ರಾಜ್ಯ ಮತ್ತು ಜಿಲ್ಲಾ ಜಂಟಿ ಸಭೆಗಳಲ್ಲಿ ಯೋಜಿಸಿದಂತೆ ಮುಂದಿನ ನಾಲ್ಕು ತಿಂಗಳ ಅವಧಿಯಲ್ಲಿ ಸ್ಥಳೀಯ ಬೇಡಿಕೆಗಳು ಸೇರಿದಂತೆ ದುಡಿಯುವ ಜನವಿಭಾಗಗಳ ಸಮಸ್ಯೆಗಳು ಮತ್ತು ಬೇಡಿಕೆಗಳ ಕುರಿತು ಕರಪತ್ರಗಳು, ಭಿತ್ತಿಪತ್ರಗಳು, ಗೋಡೆ ಬರಹ, ಗುಂಪು ಸಭೆಗಳು, ಜಾಥಾಗಳು, ಮೆರವಣಿಗೆಗಳು ಇತ್ಯಾದಿಗಳ ಮೂಲಕ, ತಲುಪದವರನ್ನು ತಲುಪುವ ಗುರಿಯನ್ನು ಇಟ್ಟುಕೊಳ್ಳಬೇಕೆಂದೂ ಅದು ಕರೆ ನೀಡಿದೆ.

"ಭಾರತವನ್ನು ಉಳಿಸಲು ಮತ್ತು ಜನತೆಯನ್ನು ಉಳಿಸಲು" ಈ ರಾಷ್ಟ್ರವ್ಯಾಪಿ ಪ್ರಚಾರಾಂದೋಲನ ಮತ್ತು ಕಾರ್ಯಕ್ರಮಗಳಿಗೆ ಬೆಂಬಲ ಮತ್ತು ಸೌಹಾರ್ದವನ್ನು ನೀಡಬೇಕು ಎಂದು ದೇಶದ ಎಲ್ಲಾ ಪ್ರಗತಿಪರ, ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಜನರಿಗೂ ಈ ಸಮಾವೇಶ ಕರೆ ನೀಡಿದೆ.

ಕೋಮು ಸಾಮರಸ್ಯದ ರಾಷ್ಟ್ರೀಯ ಹಿತಗಳನ್ನು ಎತ್ತಿಹಿಡಿಯಬೇಕು–ಸಿಪಿಐ(ಎಂ)

"ಪೂಜಾ ಸ್ಥಳಗಳ ಕಾಯಿದೆ 1991 ರ ಕಟ್ಟುನಿಟ್ಟಾದ ಅನುಷ್ಠಾನವಾಗಬೇಕು"

ಜ್ಞಾನವಾಪಿ ಮಸೀದಿ ಪ್ರಕರಣದಲ್ಲಿ ವಾರಣಾಸಿಯ ಜಿಲ್ಲಾ ನ್ಯಾಯಾಲಯದ ನಿರ್ಧಾರ ಪೂಜಾ ಸ್ಥಳಗಳ ಕಾಯಿದೆ, 1991 ರ ಹಿಂದಿನ ಗುರಿಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಮಸೀದಿಯೊಳಗೆ ಪೂಜಿಸುವ ಹಕ್ಕನ್ನು ಕೋರುವ ಮೊಕದ್ದಮೆಗಳು ನಡೆಸಬಹುದಾದವುಗಳು, ಅವುಗಳನ್ನು ಈ ಕಾಯಿದೆ ನಿರ್ಬಂಧಿಸುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಾಂಗದ ಕೆಲವು ವಿಭಾಗಗಳು ಮಾಡುವ ಕಾನೂನಿನ ತಪ್ಪು ವ್ಯಾಖ್ಯಾನಗಳು ಯಾವ ಗಂಭೀರ ಪರಿಣಾಮಗಳನ್ನು ತಡೆಯುವ ಉದ್ದೇಶದಿಂದ ಅವನ್ನು ತರಲಾಗಿದೆಯೋ ಅವೇ ಸಂಭವಿಸುವುದಕ್ಕೆ ಕಾರಣವಾಗುತ್ತವೆ. ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿಸಲು ಆಡಳಿತ ಪಕ್ಷವು ಇತಿಹಾಸದ ಒಂದು ವಿಕೃತ ವ್ಯಾಖ್ಯಾನ ಕೊಡಲೇಬೇಕೆಂದು ನಿರ್ಧರಿಸಿದೆ ಎಂಬುದು ರಹಸ್ಯವೇನಲ್ಲ. ಇಂದಿನ ಮಸೀದಿಗಳನ್ನು ದೇವಾಲಯಗಳನ್ನು ಧ್ವಂಸಗೊಳಿಸಿದ ಸ್ಥಳಗಳಲ್ಲಿ ನಿರ್ಮಿಸಲಾಗಿದೆ ಎಂಬ ದಾವೆ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಮತ್ತು ಇದನ್ನು ಕೋಮುವಾದಿ ಕಾರ್ಯಸೂಚಿಗೆ ಬಳಸಿಕೊಳ್ಳುವ ಬಹಳ ದೀರ್ಘಕಾಲದ ವಿಧಾನವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

1991 ರ ಕಾನೂನನ್ನು ತಂದಿರುವುದು ಕೋಮು ಸೌಹಾರ್ದತೆಯ ಅತ್ಯುನ್ನತ ರಾಷ್ಟ್ರೀಯ ಹಿತಾಸಕ್ತಿಗಳನ್ನು ಎತ್ತಿಹಿಡಿಯುವುದಕ್ಕಾಗಿ ಮತ್ತು ಮಥುರಾ ಮತ್ತು ವಾರಣಾಸಿಯಂತಹ ಹಲವಾರು ದುರುದ್ದೇಶ–ಪ್ರೇರಿತ ಅರ್ಜಿಗಳನ್ನು ತಡೆಯುವುದಕ್ಕಾಗಿ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, 1991ರ ಕಾನೂನಿನ ಹಿಂದಿದ್ದ ಭಾವನೆ ಮತ್ತು ಅದರ ಆಶಯದ ಆಧಾರದಲ್ಲಿ ಅದರ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ತನ್ನ ಬೆಂಬಲವನ್ನು ಪುನರುಚ್ಚರಿಸಿದೆ.

ಉತ್ತರಪ್ರದೇಶದಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ ಮತ್ತು ಹತ್ಯೆಯ ಮತ್ತೊಂದು ಪ್ರಕರಣ

"ಕಾನೂನು–ಸುವ್ಯವಸ್ಥೆ ಅತ್ಯುತ್ತಮವಾಗಿದೆ ಎಂಬ ಮುಖ್ಯಮಂತ್ರಿಗಳ ಹೇಳಿಕೆಯ ಪೊಳ್ಳುತನ ಬಯಲು"

ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಇಬ್ಬರು ಅಪ್ರಾಪ್ತ ದಲಿತ ಬಾಲಕಿಯರ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಮತ್ತೊಮ್ಮೆ ಪ್ರಶ್ನಾರ್ಹಗೊಳಿಸಿದೆ ಎಂದು ಅಖಿಲ ಭಾರತೀಯ ಜನವಾದಿ ಮಹಿಳಾ ಸಂಘಟನೆಯ ಉತ್ತರಪ್ರದೇಶ ಸಮಿತಿ ಹೇಳಿದೆ.

ಲಖೀಂಪುರ ಖೇರಿಯ ನಿಘಾಸನ್ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮದ ಇಬ್ಬರು ಅಪ್ರಾಪ್ತ ದಲಿತ ಬಾಲಕಿಯರನ್ನು ಆರೋಪಿಗಳು ಗದ್ದೆಗೆ ಬರುವಂತೆ ಪುಸಲಾಯಿಸಿ ಆಹ್ವಾನಿಸಿದ್ದರು ಎಂದು ತಿಳಿದು ಬಂದಿದೆ. ಸಮಾಚಾರ ಪತ್ರಿಕೆಗಳ ಪ್ರಕಾರ, ಇಬ್ಬರೂ ಹುಡುಗಿಯರ ಮೇಲೆ ಮೊದಲು ಅತ್ಯಾಚಾರ ಮಾಡಿ ನಂತರ ಕತ್ತು ಹಿಸುಕಿ ಕೊಲ್ಲಲಾಯಿತು ಮತ್ತು ಇದು ಆತ್ಮಹತ್ಯೆ ಪ್ರಕರಣ ಎಂದು ತೋರಿಸಲು, ಅವರ ಮೃತ ದೇಹಗಳನ್ನು ಮರಕ್ಕೆ ನೇತು ಹಾಕಲಾಯಿತು. ಈ ಸಂಬಂಧ ಈಗ ಆರು ಆರೋಪಿಗಳನ್ನು ಬಂಧಿಸಿರುವ ಸುದ್ದಿ ಬಂದಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ನೆಲೆಸಿದೆ, ತಮ್ಮ ಆಳ್ವಿಕೆಯಲ್ಲಿ ಮಹಿಳೆಯರು ಮತ್ತು ಹುಡುಗಿಯರು ತುಂಬಾ ಸುರಕ್ಷಿತವಾಗಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಹಿಳೆಯರು ಮತ್ತು ಹುಡುಗಿಯರ ಮೇಲಿನ ದೌರ್ಜನ್ಯಗಳು ಅವರ ಈ ದಾವೆಯ ಪೊಳ್ಳನ್ನು ಬಯಲು ಮಾಡುತ್ತಿದೆ ಎಂದು ಜವಾದಿ ಮಹಿಳಾ ಸಮಿತಿ ಹೇಳಿದೆ.

ಈ ಪ್ರಕರಣದ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಉತ್ತರ ಪ್ರದೇಶದ ಕುಸಿಯುತ್ತಿರುವ ಕಾನೂನು ವ್ಯವಸ್ಥೆಯನ್ನು ಸರಿಪಡಿಸಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸುರಕ್ಷತೆಯನ್ನು ಖಾತ್ರಿಪಡಿಸಬೇಕು. ಪೊಲೀಸರು ಹಾಗೂ ಸಂತ್ರಸ್ತರ ಕುಟುಂಬದವರ ಹೇಳಿಕೆಗಳಲ್ಲಿ ವಿರೋಧಾಭಾಸ ಇರುವುದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಜನವಾದಿ ಮಹಿಳಾ ಸಮಿತಿಯ ಉತ್ತರ ಪ್ರದೇಶದ ಮುಖಂಡರಾದ ಕೂಡ ಮಧು ಗರ್ಗ್, ಸೀಮಾ ಕಟಿಯಾರ್ ಮತ್ತು ಸುಮನ್ ಸಿಂಗ್ ಆಗ್ರಹಿಸಿದ್ದಾರೆ.

ಸಂಪಾದಕೀಯ

ಜನದ್ರೋಹ ಮುಚ್ಚಿಕೊಳ್ಳುವ ಮರುಳು ಮಾತಿನ ಸಮಾವೇಶ

ಬಿಜೆಪಿ ಪಕ್ಷದ ಸರಕಾರಕ್ಕೆ ಮೂರು ವರ್ಷಗಳಾದ ಹಿನ್ನೆಲೆಯಲ್ಲಿ 2022 ಸೆಪ್ಟಂಬರ್ 10 ರಂದು ಸಂಘಟಿಸಿದ್ದ 'ಜನ ಸ್ಪಂದನ' ಸಮಾವೇಶ ಅದರ ಬಹು ನಿರೀಕ್ಷೆಗಳನ್ನು ಸುಳ್ಳಾಗಿಸಿತು. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ವರ್ಷ ಕಳೆದ ಸಂದರ್ಭವನ್ನು ಆಚರಿಸುವ ಮುತುವರ್ಜಿಯೊಂದಿಗೆ ಆರಂಭವಾದ ಯೋಜನೆ ಯಡಿಯೂರಪ್ಪನವರ ಎರಡು ವರ್ಷಗಳನ್ನೂ ಸೇರಿಸಿಕೊಂಡಿತು. ಕಾಂಗ್ರೆಸ್ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ದೊರೆತ ಅಪೂರ್ವ ಜನ ಸ್ಪಂದನದ ಬಳಿಕ ತೀರಾ ಹಿನ್ನಡೆಯ ಮನೋಭಾವ ಅನುಭವಿಸಿದ ಬಿಜೆಪಿ ಅದಕ್ಕೆ ಪ್ರತಿ ಉತ್ತರ ನೀಡುವ, ತಾನು ದುರ್ಬಲ ಅಲ್ಲ ಎನ್ನುವುದನ್ನು ತೋರಿಸುವ ದಾವಂತದಲ್ಲಿ ಈ ಸಮಾವೇಶ ನಡೆಸಿತು. ಹೀಗಾಗಿ ಸಿದ್ಧರಾಮೋತ್ಸವದಂತಹ ವ್ಯಕ್ತಿಗತ ಕಾರ್ಯಕ್ರಮದ ಬದಲು 'ಜನೋತ್ಸವ' ಮಾಡುವುದಾಗಿ ಪ್ರಕಟಿಸಿತ್ತು, ಬಿಜೆಪಿ ಕಾರ್ಯಕರ್ತನ ಹತ್ಯೆ, ಒಳ ಬಂಡಾಯ, ಸಚಿವ ಕತ್ತಿ ನಿಧನದಂತಹ ಕೆಲವು ಅಹಿತಕರ ಸನ್ನಿವೇಶಗಳಿಂದ ನಾಲ್ಕು ಬಾರಿ ಮುಂದೂಡಲಾಗಿ ಈ ಸಮಾವೇಶ ನಡೆಯುವುದೇ ಅನುಮಾನ ಎಂದಾಗಿತ್ತು. ಹಿರಿಯ ಸಚಿವ ಉಮೇಶ ಕತ್ತಿಯವರ ನಿಧನದ ಶೋಕಾಚರಣೆ ಇರುವಾಗಲೇ ಇಂಥದೊಂದು ಸಮಾವೇಶವನ್ನು ತೀರಾ ತರಾತುರಿಯಲ್ಲಿ ನಡೆಸಿದ್ದು ಆ ಅನುಮಾನಗಳ ಕಾರಣದಿಂದಲೇ ಎನ್ನಲಾಗುತ್ತಿದೆ. ಬಿಜೆಪಿಯ ರಾಜಕೀಯ ಕಾರ್ಯಕ್ರಮಕ್ಕೆ ಸರಕಾರದ ಹಣ ಮತ್ತು ಆಡಳಿತವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಚಾಳಿ ಇಲ್ಲಿಯೂ ಮುಂದುವರೆದಂತೆ ಕಾಣುತ್ತಿದೆ.

ಮೂರು ವರ್ಷಗಳ ಸಾಧನೆಗಳ ಪ್ರೋಗ್ರೆಸ್ ಕಾರ್ಡ್ ಅನ್ನು ಮಂಡಿಸುವುದು ಮತ್ತು ಮುಂದಿನ ಯೋಜನೆಗಳನ್ನ ಪ್ರಕಟಿಸುವುದು ಈ ಸಮಾವೇಶದ ಮುಖ್ಯ ಅಜೆಂಡಾ ಎಂದು ಹೇಳಲಾಗಿತ್ತಾದರೂ ಕೇಂದ್ರದ ಮತ್ತು ರಾಜ್ಯದ ನಾಯಕರವರೆಗೂ ಎಲ್ಲರೂ ಕಾಂಗ್ರೆಸ್ಸನ್ನು ಟೀಕಿಸುವುದರ ಕಡೆಗೇ ಗಮನ ಕೇಂದ್ರೀರಿಸಿದ್ದು ಈ ಸಮಾವೇಶದ ಕಾರ್ಯ ಸೂಚಿ ಬೇರೆ ಇರುವುದನ್ನು ತೋರಿಸಿತು. ಮುಂದಿನ ಚುನಾವಣೆಯಲ್ಲಿನ 150 ಸ್ಥಾನಗಳನ್ನು ಗೆಲ್ಲುವ ವಿಷನ್ –150 ನ್ನೇ ಪ್ರತಿಯೊಬ್ಬರು ಎತ್ತಿ ಮಾತನಾಡಿದರು. ವಿಶೇಷವಾಗಿ, ಬಿಜೆಪಿ ಸರ್ಕಾರದ ವಿರುದ್ಧ ಜನತೆಯ ಮನೋಭಾವ ಬೆಳೆಯುತ್ತಿರುವುದನ್ನು ಮತ್ತು ವಿರೋಧ ಪಕ್ಷಗಳ ಅದರಲ್ಲೂ ಕಾಂಗ್ರೆಸ್ಸಿನತ್ತ ತಿರುಗಬಹುದು ಎನ್ನುವ ಆತಂಕವನ್ನು ಎಲ್ಲಾ ನಾಯಕರು ವ್ಯಕ್ತಪಡಿಸಿದರು. ಈ ಹೊತ್ತಿನಲ್ಲಿ ಸರ್ಕಾರ ಶೇ 40 ರಷ್ಟು ಕಮಿಷನ್ ಹೊಡೆಯುವ ಭ್ರಷ್ಟತೆ ಪ್ರಮುಖ ವಿಷಯವಾಗಿ ಜನತೆ ಎದುರು ಬಂದಿರುವಾಗ ಅದನ್ನು ಎದುರಿಸಲು ಪಾರದರ್ಶಕ ಮಾರ್ಗ ಅನುಸರಿಸದೇ ಟೀಕಿಸಿದ ಕಾಂಗ್ರೆಸ್ಸಿನ ಸರ್ಕಾರ ದ ಅವಧಿಯಲ್ಲಿನ ಎಲ್ಲಾ ವ್ಯವಹಾರಗಳನ್ನು ತನಿಖೆಗೆ ಒಪ್ಪಿಸಿ 'ಮುಖಭಂಗ' ಮಾಡುವ ಬ್ಲಾಕ್ಮೇಲ್ ತಂತ್ರ ಅನುಸರಿದ್ದು ಬಿಜೆಪಿಯ ಹತಾಶೆಯನ್ನು ತೋರಿಸುತ್ತದೆ.

ಈ ಸಮಾವೇಶದಲ್ಲಿ ಬಿಜೆಪಿಯ ಅಧ್ಯಕ್ಷ ಜೆಪಿ ನಡ್ಡಾರವರು ಗೈರು ಹಾಜರಾಗಿ ಸಚಿವೆ ಸ್ಮೃತಿ ಇರಾನಿ ಭಾಗವಹಿಸಿದ್ದು ಒಂದೆಡೆಯಾದರೆ ಬಿಜೆಪಿ ಪ್ರಕಟಿಸಿದಂತೆ 5 ಲಕ್ಷ ಜನರ ಬದಲಿಗೆ ಒಂದು ಲಕ್ಷದ ಅಂಚಿನಲ್ಲಿ ಜನ ಇದ್ದುದು ಮತ್ತು ಬಹುತೇಕ ಕುರ್ಚಿಗಳು ಖಾಲಿಯಾಗಿದ್ದು ಜನತೆಯನ್ನು ಸೆಳೆಯುವಲ್ಲಿ ಬಿಜೆಪಿಯ ವಿಫಲತೆಯನ್ನು ತೋರಿಸುತ್ತದೆ. ಈ ಬಾರಿಯೂ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದುದೇ ಅತ್ಯಂತ ಅನೈತಿಕ ಮಾರ್ಗಗಳಿಂದ ಹೊರತು ಜನತೆಯ ಬೆಂಬಲದಿಂದ ಅಲ್ಲ. ಇದು ಬಹುತೇಕ ಬಿಜೆಪಿ ಅಧಿಕಾರ ನಡೆಸಿದ ಪ್ರತಿ ಸಂದರ್ಭದಲ್ಲಿ ಎದ್ದು ಕಾಣುವ ಅಂಶ. ಯಡಿಯೂರಪ್ಪನವರಿಗೆ ಅವರ ಉಳಿದ ಅವಧಿಯನ್ನು ಪೂರ್ಣಗೊಳಿಸಲು ಅವಕಾಶ ಕೊಡದ ಬಿಜೆಪಿ ಮತ್ತು ಆರ್ ಎಸ್ ಎಸ್ ಹೈಕಮಾಂಡ್ ಗಳು ತಮ್ಮದೇ ಆಜ್ಞೆಗಳನ್ನು ಕೇಳುವ ಕೈಗೊಂಬೆ ಮುಖ್ಯಮಂತ್ರಿಯನ್ನು ಪ್ರತಿಷ್ಠಾಪಿಸಿದ್ದು ಮತ್ತೊಂದು ಮುಖ್ಯವಾದ ಅಂಶ. ಈ ಮೂಲಕ ಶಾಂತಿ, ಸೌಹಾರ್ದತೆ, ಸಾಮರಸ್ಯದ ವಾತಾವರಣ ಕಲಕಿ ಕರ್ನಾಟಕವನ್ನು ಅತ್ಯಂತ ದ್ವೇಷ, ಹಿಂಸೆ, ಮತಾಂಧತೆಗಳಿಂದ ಹತ್ತಿ ಉರಿಯುವಂತೆ ಮಾಡಿ ಜನರ ನಡುವಿನ ಸಾಮರಸ್ಯ, ಸ್ನೇಹ, ಸಹಜ ವಾತಾವರಣವನ್ನು ನಾಶ ಮಾಡಿದ್ದು ಬಿಜೆಪಿ–ಆರ್ ಎಸ್ ಎಸ್ ಗಳ ಒಂದು ಸಾಧನೆ. ಸಂಘ ಪರಿವಾರದ ಈ ಪುಂಡಾಟಕೆಗಳಿಗೆ ಎಲ್ಲ ರೀತಿಯಿಂದಲೂ ಸರ್ಕಾರ ಸಾಥ್ ನೀಡಿದ್ದಲ್ಲದೆ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಲಾಯಿತು. ದಲಿತರು, ಮಹಿಳೆಯರು, ಕ್ರಿಶ್ಚಿಯನ್ ಮುಖ್ಯವಾಗಿ, ಮುಸ್ಲಿಂ ಅಲ್ಪಸಂಖ್ಯಾತರು ಹಲ್ಲೆ ಧಾಳಿಗಳಿಗೆ, ಹತ್ಯೆಗೆ ಬಲಿಯಾದರು. ಕರ್ನಾಟಕ ಭ್ರಷ್ಟಾಚಾರದಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿ ದೇಶದಲ್ಲೇ ಕುಖ್ಯಾತಿಯನ್ನು ಹೊಂದುವಂತೆ ಮಾಡಲಾಯಿತು. ಮೋದಿಯವರ 'ನವ ಭಾರತ' ದಂತೆ ಬೊಮ್ಮಾಯಿಯವರ 'ನವ ಕರ್ನಾಟಕ' ನಿರ್ಮಾಣದ ಮಾತುಗಳು ಕೇವಲ ಘೋಷಣೆಯ ಮಾತುಗಳಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿಯಾಗಿದೆ. ಒಂದೊಮ್ಮೆ ಬರಗಾಲ ಮತ್ತು ಸತತ ಅತಿವೃಷ್ಟಿಯಿಂದಲೂ ಕೃಷಿ ನಾಶವಾಗಿ ಈಗಾಗಲೇ ಬಿಕ್ಕಟ್ಟಿನಲ್ಲಿದ್ದ ಕೃಷಿಕರು ತತ್ತರಿಸುವಂತಾಗಿದೆ. ವಾಣಿಜ್ಯ–ಉದ್ಯಮ ಕೈಗಾರಿಕಾ ಕ್ಷೇತ್ರದಲ್ಲೂ ಹೇಳಿಕೊಳ್ಳುವಂತಹ ಸಾಧನೆಗಳು ಇಲ್ಲವಾಗಿ ಸ್ಥಹಿತತೆ, ಹಿಂಜರಿತ ಉಂಟಾಗಿ ನಿರುದ್ಯೋಗವು ಹೆಚ್ಚಿದೆ. ಬೆಲೆ ಏರಿಕೆಯ ಭಾದೆಯಿಂದ ಜನರನ್ನು ರಕ್ಷಿಸಲಾಗುತ್ತಿಲ್ಲ. ಶಿಕ್ಷಣದ ವ್ಯಾಪಾರೀಕರಣ, ಅದನ್ನು ಮರೆಸುವಂತೆ ವಿಕೃತ ಕೋಮುವಾದೀಕರಣ ಭಾರೀ ಪ್ರತಿರೋಧದ ನಡುವೆಯೂ ನಡೆದಿದೆ. ಸಮಾಜದ ಸ್ವಾಸ್ಥ್ಯವನ್ನು ಕಾಯುವಲ್ಲಿ ಅನ್ಯಾಯ ದಬ್ಬಾಳಿಕೆಗಳ ವಿರುದ್ಧ ದನಿಯೆತ್ತಿದ ಕನ್ನಡದ ಸಾಹಿತಿ ಹಾಗೂ ಸಾಮಾಜಿಕ ಕಾರ್ಯಕರ್ತರುಗಳನ್ನು ಕೊಲೆಗಯುವ ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ಆ ಬಗ್ಗೆ ಸರ್ಕಾರ ಏನೊಂದು ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಕಾರ್ಪೊರೇಟ್ ಕಂಪನಿಗಳ ಅಣತಿಯಂತೆ ಕಾರ್ಮಿಕರನ್ನು ಶೋಷಣೆಗೆ ಈಡು ಮಾಡಿ ಬಲಿಪಶುಗಳನ್ನಾಗಿಸಲಾಗುತ್ತಿದೆ.

ಈಗಂತೂ ಬಹುತೇಕವಾಗಿ ಕರ್ನಾಟಕ ಜನ ನೆರೆಹಾವಳಿಯಲ್ಲಿ ತತ್ತರಿಸಿದ್ದಾರೆ. ಬೆಳೆ ಇದ್ದ ಬಂದ ಸಣ್ಣ ಪುಟ್ಟ ಆಸ್ತಿಗಳನ್ನು ಮನೆಗಳನ್ನು ಕಳೆದುಕೊಂಡಿದ್ದಾರೆ. ಸರಕಾರದ ದಿವ್ಯ ನಿರ್ಲಕ್ಷ ಮತ್ತು ದಮನದ ಪ್ರವೃತ್ತಿ ಮುಂದುವರಿದಿವೆ.

ಇನ್ನಾದರೂ ಇವುಗಳನ್ನು ನಿಲ್ಲಿಸಿ ಹೊಸ ದಾರಿಯನ್ನು ಬೊಮ್ಮಾಯಿಯವರು ಸೂಚಿಸಬೇಕಿತ್ತು, ಅದರ ಬದಲು ತಾವು ನಡೆಸುತ್ತಿರುವ ಎಲ್ಲಾ ಹಗರಣ, ಅಂದಾದುಂದಿ ದುರಾಡಳಿತಕ್ಕೆ ಮತ್ತೆ ಜನ ಬೆಂಬಲವನ್ನು ನೀಡಬೇಕೆಂದು ಈ ಸಮಾವೇಶದ ಮೂಲಕ ಕೋರಿದ್ದು ಅತ್ಯಂತ ನಾಚಿಕೆಗೇಡಿನ ಸಂಗತಿ. ತಮ್ಮ ಸರ್ಕಾರದ ಸಾಧನೆಯ ಪ್ರೊಗ್ರೆಸ್ ಕಾರ್ಡ್ ಗೆ ಬದಲಾಗಿ ಅಧಿಕಾರ ಕಳೆದುಕೊಳ್ಳುವ ಭೀತಿಯಲ್ಲಿರುವ ಬೊಮ್ಮಾಯಿಯವರು ಅಧಿಕಾರದಲ್ಲಿ ಮುಂದುವರೆಯಲು ಸಂಘ ಪರಿವಾರವನ್ನು ಮೆಚ್ಚಿಸಲು ನಡೆಸಿದ ಕಸರತ್ತೇ ಇಲ್ಲಿ ಪ್ರದಾನವಾಗಿತ್ತು. ಜನವಿರೋಧಿ, ಜನದ್ರೋಹಿ ಕ್ರಮಗಳನ್ನು ಜನ ಮರುಳು ಮಾತುಗಳಿಂದ ಮುಚ್ಚಿಕೊಳ್ಳಲು ಈ ಸರಕಾರ ಯತ್ನಿಸಿದಷ್ಟೂ ಅವು ಮತ್ತಷ್ಟೂ ಬಟ್ಟ ಬಯಲಾಗುತ್ತಿರುವುದೇ ವಾಸ್ತವ.

2022–23 ನೇ ಸಾಲಿನ ವಿಧಾನಸಭೆ, ಪರಿಷತ್ತುಗಳ ಅಧಿವೇಶನ ಮತ್ತೆ ಆರಂಭಗೊಂಡಿದೆ. ಈಗ ದೊರೆತ ಪ್ರಕಟಣೆಯಂತೆ ಸೆಪ್ಟೆಂಬರ್ 12 ರಿಂದ 23ರ ವರೆಗೆ ಕಲಾಪಗಳು ನಡೆಯುತ್ತವೆ. ಎಲ್ಲೆಡೆ ಮಳೆಯ ಪ್ರಕೋಪ, ಅದರಿಂದಾದ ಅಪಾರ ಹಾನಿ, ನಿಲ್ಲದ ಬೆಲೆಏರಿಕೆ, ಈ ನಡುವೆ ರಾಜ್ಯದಲ್ಲಿ ನಡೆದ ವಿವಿಧ ಸ್ವರೂಪದ ಗಲಭೆಗಳು, ಹತ್ಯೆಗಳು, ಹಿಂಸಾಚಾರದ ಧಾಳಿಗಳು, ಕಾನೂನು, ಸುವ್ಯವಸ್ಥೆಯ ಕುಸಿತ, ಈನಡುವೆ ವಿಧಾನಸಭಾ ಕ್ಷೇತ್ರಗಳನ್ನೂ ಒಳಗೊಂಡು ರಾಜ್ಯದ ಅಭಿವೃದ್ಧಿಯ ಪ್ರಶ್ನೆಗಳು, ಇತ್ಯಾದಿ ಹತ್ತಾರು ವಿಷಯಗಳು ಸಹಜವಾಗಿಯೇ ಸದನದಲ್ಲಿ ಚರ್ಚೆಗಳಾಗುತ್ತವೆ. ಇದರಲ್ಲಿ ಸರಕಾರವೂ ತನ್ನದೇ ಆಯ್ಕೆಯ ವಿಷಯಗಳನ್ನು ಸದನದಲ್ಲಿ ಮಂಡಿಸಿ ಅಂಗೀಕಾರ ಪಡೆಯುವುದೂ ಇರುತ್ತದೆ.

ರಾಜ್ಯದ ಪ್ರಮುಖ ಪ್ರಶ್ನೆಗಳು ಇತ್ಯರ್ಥಗೊಳ್ಳಲು ಮತ್ತು ಸರಕಾರದ ಮೂಲಕ ಕೆಲಸ ಕಾರ್ಯಗಳನ್ನು ನಡೆಸಲು ಅಗತ್ಯವಾದ ರೀತಿಯಲ್ಲಿ ಕ್ರಮ ವಹಿಸಲು ವಿಶೇಷವಾಗಿ ಜನತೆಯ ಜ್ವಲಂತ ಪ್ರಶ್ನೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸದನಗಳ ಕಲಾಪ ಮತ್ತು ಚರ್ಚೆಗಳು, ಸರ್ಕಾರ ಕೈಗೊಳ್ಳುವ ತೀರ್ಮಾನಗಳು ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಈ ಸದನಗಳ ಕಲಾಪಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆದಷ್ಟೂ ಜನತೆಗೆ ಪರಿಹಾರ ಮತ್ತು ರಾಜ್ಯದ ಬೆಳವಣಿಗೆಗೂ ಸರ್ವ ರೀತಿಯ ಸಹಾಯಕವು ಆಗುತ್ತದೆ.

ಆದರೆ ಇತ್ತೀಚಿನ ವರುಷಗಳಲ್ಲಿ ಸದನದ ಕಲಾಪಗಳ ಅವಧಿ ತೀರಾ ಕಡಿತಗೊಳ್ಳುತ್ತಿರುವುದು ಸಹ ಗಂಭೀರ ವಿಚಾರ. ಹೀಗೆ ನಡೆಯುವ ಕಲಾಪಗಳಲ್ಲಿಯೂ ಶಾಸಕರು, ಸಚಿವರು, ಮುಖ್ಯಮಂತ್ರಿಗಳು ಪೂರ್ಣ ಭಾಗಿಯಾಗದೆ ಗೈರು ಹಾಜರಾಗುತ್ತಿರುವುದು ಕೂಡ ಅಷ್ಟೇ ಗಂಭೀರ ವಿಚಾರ. ಅನೇಕ ಮಹತ್ವದ ಪ್ರಶ್ನೆಗಳು ಸದನದಲ್ಲಿ ಚರ್ಚೆಯಾಗುವಾಗ ಸಭಾಂಗಣ ಶಾಸಕರಿಲ್ಲದೆ ಬಣಗುಡುತ್ತಿರುತ್ತದೆ.

ಏನಿಲ್ಲವೆಂದರೂ ವರುಷದಲ್ಲಿ 120 ದಿನಗಳಾದರೂ ಕಲಾಪಗಳು ನಡೆಯಬೇಕು ಎನ್ನುವುದು ಸಾಧಾರಣ ಇರುವ ನಿರ್ದೇಶನ.

ಇತ್ತೀಚಿನ ವರ್ಷಗಳಲ್ಲಿ ಇಷ್ಟು ದಿನಗಳಲ್ಲಿ ಕಲಾಪ ನಡೆದ ಉದಾಹರಣೆಗಳು ಇಲ್ಲವೇ ಇಲ್ಲ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗದ ಪರಿಪೂರ್ಣ ಕಾರ್ಯನಿರ್ವಹಣೆ ಅತ್ಯಂತ ಮಹತ್ವದ್ದು. ಆದರೆ ಕೇವಲ ಔಪಚಾರಿಕವಾದ ರೀತಿಯಲ್ಲಿ ಸದನದ ಕಲಾಪಗಳು ನಡೆಯುತ್ತಿದ್ದುದನ್ನು ಗಮನಿಸಿ ಕನಿಷ್ಠ ವರ್ಷದಲ್ಲಿ ನಾಲ್ಕು ಅಧಿವೇಶನಗಳು ಸೇರಬೇಕು, ಅದರಲ್ಲಿ ಕನಿಷ್ಠ 60 ಕಾರ್ಯ ದಿನಗಳಾದರೂ ನಡೆಯಬೇಕು ಎನ್ನುವ ನಿಯಮವನ್ನು 2005 ರ ಕರ್ನಾಟಕ ಶಾಸನ ಸಭೆಯ ಕಾಯ್ದೆ ಸೂಚಿಸುತ್ತದೆ. ಆದರೆ ಇತ್ತೀಚೆಗೆ ಗಮನಿಸಿದಂತೆ

ಸದನವು ಪ್ರಜಾಪ್ರಭುತ್ವವನ್ನು ರಕ್ಷಿಸಲಿ

ಈ ವಾರ

ಎಸ್.ವೈ. ಗುರುಶಾಂತ್

2021ರಲ್ಲಿ ಕೇವಲ 39 ದಿನಗಳು ಮಾತ್ರವೇ ಕಲಾಪ ನಡೆದಿದ್ದು ಅದರಲ್ಲೂ 13 ದಿನಗಳಲ್ಲಿ ಬಜೆಟ್ ಅಧಿವೇಶನ ಸೇರಿದೆ. ಬಜೆಟ್ ಅಧಿವೇಶನ ಕನಿಷ್ಠ 20 ದಿನಗಳಾದರೂ ನಡೆಯಬೇಕೆಂದಿದೆ. ಅಂದರೆ ಸದನದ ಕಲಾಪಗಳು ಕಡಿಮೆ ನಡೆದಷ್ಟೂ ಜನತೆಯ ಪರಮಾಧಿಕಾರ ಮತ್ತು ಸಂಸದೀಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ದುರ್ಬಲಗೊಂಡು ಆಡಳಿತದಲ್ಲಿರುವ ಸರ್ಕಾರವನ್ನು ಟೀಕೆ ವಿಮರ್ಶೆಗೆ ಒಳಪಡಿಸಿಸರಿ ದಾರಿಗೆ ತರುವ ಮತ್ತು ಶಾಸಕಾಂಗ, ಕಾರ್ಯಾಂಗಗಳು ಸದನದ ಮೂಲಕ ಮಾರ್ಗದರ್ಶನ ಪಡೆಯುವ ಅವಕಾಶಗಳನ್ನು ತ್ಯಜಿಸಿ ಬಿಟ್ಟಂತಾಗುತ್ತದೆ. ಕಲಾಪಗಳ ಅವಧಿ ಕಡಿಮೆ ಎಂದರೆ ಪ್ರಶ್ನೆಗಳ ಬಗ್ಗೆ ಚರ್ಚೆಯೂ ಕಡಿಮೆ ಮತ್ತು ಹೆಚ್ಚಳಗೊಳ್ಳುವ ಸರ್ಕಾರದ ಪರಮಾಧಿಕಾರ. ಈ ವಿಷಯದಲ್ಲಿ ಪ್ರಮುಖವಾದ ಸುಧಾರಣೆ ಕಂಡುಕೊಳ್ಳುವುದು ಅತ್ಯಂತ ಅಗತ್ಯ. ಇಲ್ಲವಾದರೆ ಜನತೆಯ ಪ್ರಾತಿನಿಧಿಕ ಪ್ರಜಾಪ್ರಭುತ್ವ ಅರ್ಥಹೀನಗೊಳ್ಳುತ್ತಾ ಸಾಗುತ್ತದೆ.

ಇರಲಿ, ಈಗ ಆರಂಭಗೊಂಡಿರುವ ಅಧಿವೇಶನ ಸೆಪ್ಟೆಂಬರ್ 12 ರಿಂದ 23ರ ವರೆಗೆ ಜರುಗುವ ಪ್ರಕಟಣೆ ಇದೆ. ಕಲಾಪಗಳು ಆರಂಭಗೊಂಡಿವೆ. ಹಲವು ಪ್ರಶ್ನೆಗಳು ಅತಿವೃಷ್ಟಿ, ಭ್ರಷ್ಟಾಚಾರ, ಹಿಂಸಾಚಾರ, ಬಳ್ಳಾರಿ ಆಸ್ಪತ್ರೆಯಲ್ಲಿ ವಿದ್ಯುತ್ ಕಡಿತದಿಂದಾದ ಮೂರು ಸಾವುಗಳು ಚರ್ಚೆಗೆ ಬಂದಿವೆ. ಹಲವು ಕ್ಷೇತ್ರಗಳ ಪ್ರಶ್ನೆಗಳು ಚರ್ಚಿತವಾಗಿವೆ. ಅಧಿವೇಶನದಲ್ಲಿ ಕೆಲವು ಪ್ರಮುಖವಾದ ಮಸೂದೆಗಳು, ಕಾಯ್ದೆಗಳಿಗೆ ತಿದ್ದುಪಡಿಗಳು ಅಂಗೀಕಾರಗೊಂಡಿವೆ. ವಿಧಾನಸಭೆಯಲ್ಲಿ ಈಗಾಗಲೇ ಅಂಗೀಕಾರಗೊಂಡ ಕೆಲವು ಮಸೂದೆಗಳು ವಿಧಾನ ಪರಿಷತ್ತಿನಲ್ಲಿ ಅಂಗೀಕಾರಗೊಂಡಿವೆ. ಅದರಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡ ರೈತರು ಜಮೀನು ಸಕ್ರಮಗೊಳಿಸಲು ಅರ್ಜಿ ಹಾಕುವ ಅವಕಾಶದ ವಿಸ್ತರಣೆ ಒಂದು. ಈ ಅವಕಾಶ ವಿಸ್ತರಣೆಗೆ ಕಳೆದ ಹಲವು ವರ್ಷಗಳಿಂದಲೂ ರೈತ ಸಂಘಟನೆಗಳು ಬೇಡಿಕೆ ಇಟ್ಟಿದ್ದವು. ಈ ಹಿಂದೆ ಸರಕಾರ ಅರ್ಜಿ ಹಾಕಲು ಅವಕಾಶ ಕಲ್ಪಿಸಿಕೊಟ್ಟಿತ್ತಾದರೂ ಸಮಯಾವಕಾಶ ಸಾಲಾದಾಗಿತ್ತು. ಹೀಗಾಗಿ 2018 ರ ಮಾರ್ಚ್ ನಲ್ಲಿ ಚರ್ಚೆಯಾಗಿ

ಪುಟ 4 ಕ್ಕೆ



ಸುರತ್ಕಲ್ ಟೋಲ್‌ಗೇಟ್ ತೆರವಿಗೆ ಆಗ್ರಹಿಸಿ ಧರಣಿ:

ಸುರತ್ಕಲ್‌ನಲ್ಲಿರುವ ಟೋಲ್‌ಗೇಟ್ ಅಕ್ರಮವಾಗಿದ್ದು, ಅದರ ತೆರವಿಗೆ ದಿನಾಂಕ ಘೋಷಣೆ ಮಾಡುವಂತೆ ಆಗ್ರಹಿಸಿ ಸಮಾನ ಮನಸ್ಕ ಸಂಘಟನೆಗಳ ಸಹಭಾಗಿತ್ವದಲ್ಲಿ ಟೋಲ್‌ಗೇಟ್ ಹೋರಾಟ ಸಮಿತಿ ನೇತೃತ್ವದಲ್ಲಿ ಸೆಪ್ಟೆಂಬರ್ 13 ರಂದು ಸುರತ್ಕಲ್ ಟೋಲ್‌ಗೇಟ್ ಬಳಿ ಧರಣಿ ನಡೆಯಿತು.

ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸುರತ್ಕಲ್ ಟೋಲ್‌ಗೇಟ್ ವಿರುದ್ಧ ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ, ಈವರೆಗೂ ಜನಪ್ರತಿನಿಧಿಗಳು ಸುಳ್ಳುಪೊಳ್ಳು ಭರವಸೆಗಳನ್ನು ನೀಡಿಕೊಂಡು ಬರುತ್ತಿದ್ದಾರೆ. ಆದರೆ ಇನ್ನು ಯಾವುದೇ ಪೊಳ್ಳು ಭರವಸೆಗಳನ್ನು ನಾವು ನಂಬುವುದಿಲ್ಲ. ಟೋಲ್‌ಗೇಟ್ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದರು.

ಧರಣಿಯಲ್ಲಿ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಅಭಯಚಂದ್ರ ಜೈನ್, ಪಿ.ವಿ.ಮೋಹನ್, ಟ್ಯಾಕ್ಸಿ ಯೂನಿಯನ್ ಮತ್ತು ಬಸ್ ಮಾಲಕರ ಸಂಘದ ಮುಖಂಡರು, ಸಿಪಿಐ(ಎಂ) ಮುಖಂಡ ಬಾಲಕೃಷ್ಣ ಶೆಟ್ಟಿ, ಸಿಐಟಿಯು ಮುಂದಾಳುಗಳಾದ ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ದಲಿತ ನಾಯಕರಾದ ಎಂ.ದೇವದಾಸ್, ಶೇಖರ ಹೆಜಮಾಡಿ, ರಘು ಎಕ್ಕಾರು, ಮಹಿಳಾ ನಾಯಕಿಯರಾದ ಪ್ರತಿಭಾ ಕುಳಾಯಿ, ಶಾಲೆಟ್ ಪಿಂಟೋ, ಜಯಂತಿ ಶೆಟ್ಟಿ, ಮಂಜುಳಾ ನಾಯಕ್, ಮಾಜಿ ಶಾಸಕರಾದ ಮೊಯ್ದಿನ್ ಬಾವಾ, ಐವನ್ ಡಿಸೋಜ, ಹೋರಾಟ ಸಮಿತಿಯ ಪುರುಷೋತ್ತಮ ಚಿತ್ರಾಪುರ, ಎಂ.ಜಿ.ಹೆಗ್ಡೆ, ಸಂತೋಷ್ ಬಜಾಲ್, ರೇವಂತ್ ಕದ್ರಿ, ಕುಂದಾಪುರದ ಸುರೇಶ್ ಕಲ್ಲಾಗರ ಮತ್ತಿತರರು ಮಾತನಾಡಿದರು.

ವರದಿ:**ವಾ.ಉ.**

ಬಿ.ಕೆ.ಇಮ್ತಿಯಾಜ್ ಸ್ವಾಗತಿಸಿದರು. ಶ್ರೀನಾಥ್ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ಧರಣಿ ಸ್ಥಳಕ್ಕೆ ಹೆದ್ದಾರಿ ಪ್ರಾಧಿಕಾರ ಪ್ರಾದೇಶಿಕ ಅಧಿಕಾರಿ ಲಿಂಗೇಗೌಡ ಭೇಟಿ ನೀಡಿ ಧರಣಿ ನಿರತರಿಂದ ಮನವಿ ಸ್ವೀಕರಿಸಿದರು.

ಹೋರಾಟ ಸಮಿತಿಯ ಪರವಾಗಿ ಮಾತನಾಡಿದ ಮುನೀರ್ ಕಾಟಿಪಳ್ಳ ಅಧಿಕಾರಿ ದಿನಾಂಕ ಪ್ರಕಟಿಸಲು ಹಿಂದೇಟು ಹಾಕುತ್ತಿದ್ದು ಭರವಸೆಯಷ್ಟೇ ನೀಡಿದ್ದಾರೆ. ಅವರ ಭರವಸೆಯಂತೆ ಟೋಲ್‌ಗೇಟ್ ತೆರವಿಗೆ ಕಾಯುತ್ತೇವೆ. ಇಲ್ಲವಾದರೆ ಅಕ್ಟೋಬರ್ 18 ರಂದು ನಾಗರೀಕರೇ ಸೇರಿಕೊಂಡು ಟೋಲ್‌ಗೇಟ್ ತೆರವು ಮಾಡುತ್ತೇವೆ ಎಂದು ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ಲಿಂಗೇಗೌಡ ಸಮ್ಮುಖದಲ್ಲಿ ಘೋಷಿಸಿದರು.

ಮಂಗಳೂರಿನಲ್ಲಿ ಬೀಡಿ–ಸಿಗರೇಟ್ ವ್ಯಾಪಾರಿಗಳ ಪ್ರತಿಭಟನೆ

ಕರ್ನಾಟಕ ಮುನ್ಸಿಪಾಲಿಟಿ(ಸಿಗರೇಟುಗಳು ಮತ್ತಿತರ ತಂಬಾಕು ಉತ್ಪನ್ನ ಮಾರಾಟ ಸ್ಥಳಗಳ ನಿಯಂತ್ರಣಗಳು ಮತ್ತು ತನಿಖೆ) ಮಾದರಿ ಬೈಲಾಗಳು–2020 ರ ಅನುಷ್ಠಾನವನ್ನು ವಿರೋಧಿಸಿ ಫೆಡರೇಶನ್ ಆಫ್ ರೀಟೇಲರ್ ಅಸೋಸಿಯೇಷನ್ ಆಫ್ ಇಂಡಿಯಾ (ಎಫ್‌ಆರ್‌ಎಐ)ನ ಕರ್ನಾಟಕ ಚಾಪ್ಟರ್ ನೇತೃತ್ವದಲ್ಲಿ ಸಿಗರೇಟ್ ವ್ಯಾಪಾರಿಗಳು ಮಂಗಳೂರಿನಲ್ಲಿ ಆಗಸ್ಟ್ 27 ರಂದು ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಸಣ್ಣ ಬೀಡಿ–ಸಿಗರೇಟು ಮಾರಾಟಗಾರರ ಸಂಘದ ವಕ್ತಾರ ಸುನಿಲ್ ಕುಮಾರ್ ಬಜಾಲ್ ಮಾತನಾಡಿ ಜಾಹೀರಾತು ಮತ್ತು ವ್ಯಾಪಾರ ಹಾಗೂ ವಾಣಿಜ್ಯ ಉತ್ಪಾದನೆ, ಪೂರೈಕೆ ಮತ್ತು ವಿತರಣೆಯ ನಿಷೇಧ ಆಯ್ದೆ–2003 (ಕೋಪ್ಟಾ) ಅನ್ವಯ ನಮ್ಮ ಸದಸ್ಯರು ಈಗಾಗಲೇ ಅಧಿಕಾರಿಗಳಿಂದ ಕಿರುಕುಳಕ್ಕೆ ಒಳಗಾಗುತ್ತಿದ್ದು, ಅವರ ಅನಕ್ಷರತೆ ಹಾಗೂ ಅಜ್ಞಾನದ ಲಾಭ ಪಡೆಯುತ್ತಾರೆ. ಬೈಲಾದ ಕರಡಿನ ಪ್ರಕಾರ ತಂಬಾಕು ಉತ್ಪನ್ನ ಮಾರಾಟಗಾರರು ಲೈಸೆನ್ಸ್ ಪಡೆಯಬೇಕು ಮತ್ತು ಪ್ರತಿವರ್ಷ ಲೈಸೆನ್ಸ್ ನವೀಕರಣ ಮಾಡಿಕೊಳ್ಳಬೇಕು. ಚಿಲ್ಲರೆ ವ್ಯಾಪಾರಿಗಳಿಗೆ ಲೈಸೆನ್ಸ್ ಪ್ರದರ್ಶಿಸುವುದು ಮತ್ತು ಸಲಹಾ ಪುಸ್ತಕ ಇರಿಸುವುದು ಕಡ್ಡಾಯ. ತಪ್ಪಿದಲ್ಲಿ ದೊಡ್ಡ ಪ್ರಮಾಣದ ದಂಡ ವಿಧಿಸಲೂ ಅವಕಾಶವಿದೆ ಎಂದು ಹೇಳಿದರು.

ಲಕ್ಷಾಂತರ ಮಂದಿಯ ಆದಾಯ ನಷ್ಟಕ್ಕೆ ಕಾರಣವಾಗುವ ಅಂತಹ ಕಾನೂನುಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ರಾಜ್ಯ ಸರಕಾರವು ಪರ್ಯಾಯ ಜೀವನೋಪಾಯಗಳನ್ನು ಪೂರೈಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸಣ್ಣ–ಬೀಡಿ ಸಿಗರೇಟು ಮಾರಾಟಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಅಬೂಬಾಕರ್, ಕಾರ್ಮಿಕ ಮುಖಂಡರಾದ ಗಿರಿ ಅತ್ತಾವರ, ಅಬ್ದುರ್ರಹ್ಮಾನ್, ಸತೀಶ್ ಮಲ್ಯ, ಅಶ್ವಿನಿ, ರೇಷ್ಮಾ, ಸುಕುಮಾರ್ ತೊಕ್ಕೊಟ್ಟು, ಸಂತೋಷ್, ನೌಷಾದ್, ಹನೀಫ್, ಬಿ.ಕೆ.ಇಮ್ತಿಯಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ 2015 ರಲ್ಲಿ ನೆಪ ಮಾತ್ರಕ್ಕೆ ದಿಲ್ಲಿಯಲ್ಲಿ ಭಾರತೀಯ ಕಾರ್ಮಿಕರ ಸಮ್ಮೇಳನ ನಡೆಸಲಾಗಿತ್ತು. ಇದರಲ್ಲಿ ಯಾವುದೇ ನಿರ್ಣಯಗಳನ್ನು ಅಂಗೀಕಾರ ಮಾಡಿರಲಿಲ್ಲ. ಅದರ ನಂತರ 2021ರ ವರೆಗೆ ಕಾರ್ಮಿಕ ಸಮ್ಮೇಳನ ನಡೆದಿಲ್ಲ. ಇತ್ತೀಚೆಗೆ ತಿರುಪತಿಯಲ್ಲಿ ಕಾರ್ಮಿಕ ಸಂಘಟನೆಗಳನ್ನು ಹೊರಗಿಟ್ಟು ಅಧಿಕಾರಿಗಳು ಮತ್ತು ಮಾಲಕರು ಮಾತ್ರ ಭಾಗವಹಿಸಿ ಸಮ್ಮೇಳನ ನಡೆಸಲಾಗಿದೆ. ಇದು ಚುನಾವಣೆ ದೃಷ್ಟಿಯಿಂದ ನಡೆಸಿರುವ ಸಮ್ಮೇಳನವಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಆರೋಪಿಸಿದ್ದಾರೆ.

ಸಿಐಟಿಯು ಉಡುಪಿ ಜಿಲ್ಲಾ 7ನೇ ಸಮ್ಮೇಳನ:

ಬ್ರಹ್ಮಾವರ ಬಸ್ ನಿಲ್ದಾಣದ ಬಳಿ ಆಗಸ್ಟ್ 28 ರಂದು ನಡೆದ ಸಿಐಟಿಯು ಉಡುಪಿ ಜಿಲ್ಲಾ 7ನೇ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

2009ರಲ್ಲಿ ನಡೆದ ಭಾರತೀಯ ಕಾರ್ಮಿಕರ ಸಮ್ಮೇಳನದಲ್ಲಿ ದೇಶದಲ್ಲಿರುವ ಸುಮಾರು ಒಂದು ಕೋಟಿ ಸಂಖ್ಯೆಯಲ್ಲಿರುವ ಅಂಗನವಾಡಿ, ಆಶಾ, ಬಿಸಿಯೂಟ ಹಾಗೂ ಇತರ ನೌಕರರನ್ನು ಖಾಯಂ ಮಾಡುವಂತೆ ನಿರ್ಣಯಗಳನ್ನು ಅಂಗೀಕರಿಸಲಾಗಿತ್ತು. ಆದರೆ ಇಂದಿಗೂ ಖಾಯಂ ಮಾಡುವುದು ಬಿಡಿ, ಅವರಿಗೆ ಕನಿಷ್ಟ ವೇತನ ಕೂಡಾ ನಿಗದಿ ಮಾಡಿಲ್ಲ ಎಂದ ಅವರು 8 ಗಂಟೆಗಳ ಕಾಲ ದುಡಿಯದ ಆಶಾ, ಅಂಗನವಾಡಿ, ಬಿಸಿಯೂಟ ನೌಕರರು ಕನಿಷ್ಟ ವೇತನದ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೈಕೋರ್ಟ್ ನೀಡಿರುವ ಆದೇಶ ಸ್ವೀಕಾರಾರ್ಹವಲ್ಲ. ಆದ್ದರಿಂದ ಈ ಆದೇಶವನ್ನು ಹೈಕೋರ್ಟ್ ಕೋಟ್ಯಾಂತರ ನೌಕರರ ಹಿತದೃಷ್ಟಿಯಿಂದ ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ವಹಿಸಿದ್ದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಮಹಾಬಲ ವಡೇರಹೋಬಳಿ, ಎಚ್.ನರಸಿಂಹ, ಕವಿರಾಜ್, ಸುನಂದಾ, ಬಲ್ಕೀಸ್ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ವರದಿ ಮಂಡಿಸಿದರು. ಶಶಿಧರ ಗೊಲ್ಲ ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕೆ.ಶಂಕರ್, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಕಲ್ಲಾಗರ, ಕೋಶಾಧಿಕಾರಿಯಾಗಿ ಶಶಿಧರ ಗೊಲ್ಲ ಆಯ್ಕೆಯಾದರು.

ಸದನ ಪ್ರಜಾಪ್ರಭುತ್ವ ರಕ್ಷಿಸಲಿ

ಪುಟ 3 ರಿಂದ

ನಿರ್ಧಾರ ಕೈಗೊಳ್ಳಬೇಕಾಗಿರುವಾಗ ಲೋಕಸಭಾ ಚುನಾವಣೆಗಳು ಬಂದುದರಿಂದ ತಿದ್ದುಪಡಿ ಆಗಿರಲಿಲ್ಲ. ಹಲವು ವರ್ಷಗಳ ನಂತರವಾದರೂ, ಈಗ ಪುನಃ ಕಾಲಾವಕಾಶವನ್ನು ಒಂದು ವರ್ಷಕ್ಕೆ ವಿಸ್ತರಿಸಿ ನಿಗದಿ ಮಾಡಿರುವ ತಿದ್ದುಪಡಿ ಅಂಗೀಕಾರವಾದದ್ದು ಸ್ವಾಗತಾರ್ಹ. ಇದರ ಸದುಪಯೋಗ ಪಡೆದುಕೊಂಡು ಬಗರ್ ಹುಕುಂ ಸಾಗುವಳಿದಾರ ರೈತರು ಅರ್ಜಿಗಳನ್ನು ಹಾಕಿಕೊಳ್ಳಬೇಕು. ಪ್ರಶ್ನೆ ಎಂದರೆ ಈಗಾಗಲೇ ಹಾಕಿರುವ ಅರ್ಜಿಗಳು ಇತ್ಯರ್ಥವಾಗದೇ ಕೊಳೆಯುತ್ತಿರುವ ಪ್ರಸಂಗಗಳನ್ನು ಲಕ್ಷಿಸಿ ಸರ್ಕಾರ ಅವುಗಳ ಶೀಘ್ರ ಇತ್ಯರ್ಥಕ್ಕೆ ಮತ್ತು ನ್ಯಾಯ ಒದಗಿಸಲು ಕ್ರಮ ವಹಿಸುವುದು ಕೂಡ ಅಷ್ಟೇ ಮುಖ್ಯವಾಗಿದೆ.

ಇದೇ ಹೊತ್ತಿನಲ್ಲಿ ಈ ಕಾಯ್ದೆಯ ತಿದ್ದುಪಡಿಯಿಂದ ಶ್ರೀಮಂತರು ಮತ್ತಷ್ಟು ಜಮೀನು ಪಡೆಯಲು ಅವಕಾಶ ನೀಡುವುದು ಬಡವರಿಗೆ ನಿರಾಕರಿಸುವುದು ಆಗದಂತೆ ನೋಡಿಕೊಳ್ಳುವುದು ಕೂಡ ಬಹಳ ಮುಖ್ಯ. ಆಡಳಿತದ ಹಂತದಲ್ಲಿ ಇಂತಹ ತಾರತಮ್ಯ ಸಹಜವಾಗಿ ಘಟಿಸಿ ಬಿಡುತ್ತವೆ. ಅದಕ್ಕೆ ಅವಕಾಶ ನೀಡಕೂಡದು. ಈ ಅವಕಾಶದಿಂದ ಜನಸಾಮಾನ್ಯರಿಗೆ ಪರಿಹಾರ ದೊರೆಯಬೇಕು. ಈ ಪ್ರಕಟಣೆಯನ್ನು ಸಾರ್ವಜನಿಕವಾಗಿ ಜನಜನಿತಗೊಳಿಸಿ ಜನತೆ ಅರ್ಜಿಗಳನ್ನು ಹಾಕಿಕೊಳ್ಳುವಂತಾಗಬೇಕು.

ಈ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಅಪಾಯಕಾರಿ ಮಸೂದೆಯೊಂದು ಅಂಗೀಕಾರಗೊಂಡಿದೆ. ಧಾರ್ಮಿಕ ಮತಾಂತರವನ್ನು ನಿಷೇಧಿಸುವ ಮತ್ತು ಅದನ್ನು ಅಪರಾಧವನ್ನಾಗಿಸುವ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ (ಮತಾಂತರ ನಿಷೇಧ)– 2022 ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಗಿದೆ. ಈ ಹಿಂದೆ ಈ ಮಸೂದೆ ಅಂಗೀಕಾರವಾಗಲು ಕೆಲವು ತಾಂತ್ರಿಕ ಅಡೆತಡೆಗಳಿದ್ದವು. ವಿಧಾನ ಪರಿಷತ್ತಿನಲ್ಲಿ ಬಿಜೆಪಿಗೆ ಪೂರ್ಣ ಬಹುಮತ ಇರಲಿಲ್ಲ. ಆದರೀಗ ಬಿಜೆಪಿ ವಿಧಾನ ಪರಿಷತ್ತಿನಲ್ಲೂ ತನ್ನ ಬಲವನ್ನು ಅದು ಹೆಚ್ಚಿಸಿಕೊಂಡಿದೆ. ಹೀಗಾಗಿ ಮಸೂದೆ ಅಂಗೀಕಾರವಾಗಿದೆ. ಈ ಮಸೂದೆಯಲ್ಲಿನ ಹಲವಾರು ಸೂಚನೆಗಳು ಸಂವಿಧಾನದ ಪರಿಚ್ಛೇದ 25 ರಿಂದ 28 ರವರೆಗಿನ ಅಂಶಗಳಿಗೆ ವ್ಯತಿರಿಕ್ತವಾದ ಬಗ್ಗೆ, ಧಾರ್ಮಿಕ ಸ್ವಾತಂತ್ರ್ಯ, ಧರ್ಮದ ಆಚರಣೆಗಳ ಹಕ್ಕಿಗೆ ಚ್ಯುತಿ ತರುತ್ತವೆ ಎಂದು ವಿಧಾನಸಭೆಯ ಒಳಗಡೆ ಮತ್ತು ಸಾರ್ವಜನಿಕವಾಗಿ ಹೊರಗಡೆ ಬಹು ದೊಡ್ಡ ಆಕ್ಷೇಪ ಮತ್ತು ಪ್ರತಿಭಟನೆಗಳು ವ್ಯಕ್ತಗೊಂಡಿದ್ದವು. ಆದರೆ ಅವುಗಳನ್ನು ಸರ್ಕಾರ ಲಕ್ಷಿಸದೆ ತನ್ನ ಹಿಂದುತ್ವದ ಕೋಮುವಾದಿ ಅಜೆಂಡಕ್ಕೆ ಅನುಗುಣವಾಗಿ ಈ ಮಸೂದೆಯನ್ನು ಅಂಗೀಕರಿಸಲಾಗಿದೆ. ಹಾಗೆ ನೋಡಿದರೆ ಮತಾಂತರಗಳು ಹೆಚ್ಚಿದ್ದು ಭಾರಿ ಅಪಾಯ ಎದುರಾಗಿದೆ ಎಂದು ಹೇಳುವ ಸರ್ಕಾರದ ಮಾತಿಗೆ ಯಾವುದೇ ಸಮರ್ಥನೆಗಳು ಇಲ್ಲವಾಗಿವೆ. ಮತ್ತು ಅಂತಹ ಬಲಯುತವಾದ ಮಾಹಿತಿ ಒದಗಿಸಲು ಸರ್ಕಾರ ವಿಫಲವಾಗಿದೆ. ಈ ಕಾಯ್ದೆಯನ್ನು ಹಲವಾರು ಮತೀಯ ಶಕ್ತಿಗಳು, ಸಂಘಟನೆಗಳು ದುರುಪಯೋಗ ಮಾಡಿ ಸಮಾಜದಲ್ಲಿ ಶಾಂತಿ ಸೌಹಾರ್ದತೆಯನ್ನು ಕದಡಿ ಹಿಂಸಾಚಾರಕ್ಕೆ ಬಳಸಬಹುದಾದ ಸಾಧ್ಯತೆಗಳು ಇದ್ದೇ ಇವೆ. ವಿಶೇಷವಾಗಿ, ಈ ರೀತಿ ದಮನಕಾಂಡ ನಡೆಸುತ್ತಿರುವುದಕ್ಕೆ ಈ ಕಾಯ್ದೆ ಒಂದು ರೀತಿಯಲ್ಲಿ ಸಮರ್ಥನೆಯನ್ನು ಮತ್ತು ರಕ್ಷಣೆಯನ್ನು ಕೊಡುತ್ತದೆ ಎನ್ನುವ ಅಕ್ಷೇಪಣೆ ಪ್ರತಿರೋಧದ ರೂಪದಲ್ಲಿ ವ್ಯಕ್ತಗೊಂಡಿದ್ದವು. ಈ ಕುರಿತಾದಂತೆ ಈಗಾಗಲೇ ಆಕ್ಷೇಪಣೆಗಳು ದಾಖಲಾಗಿವೆ ಮತ್ತು ಪ್ರಕರಣ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದೆ. ನ್ಯಾಯಾಲಯ ಪ್ರಜೆಯ ಸಂವಿಧಾನಬದ್ಧ ಹಕ್ಕನ್ನು ರಕ್ಷಿಸುತ್ತದೆ, ಸಮಾಜದ ಸ್ವಾಸ್ಥ್ಯವನ್ನು ಕಾಯುತ್ತದೆ ಎಂದು ನಿರೀಕ್ಷಿಸೋಣ.

ಆದಿವಾಸಿಗಳ ಅಭಿವೃದ್ಧಿ: ಕುಂದಾಪುರದಲ್ಲಿ ಕಾನೂನು ಅರಿವು ಕಾರ್ಯಾಗಾರ

ಆದಿವಾಸಿಗಳ ಕೊರಗ ಸಮುದಾಯವು ಇಂದಿಗೂ ನಿರೀಕ್ಷಿತ ಮಟ್ಟದಲ್ಲಿ ಸಮಾಜದ ಮುಖ್ಯವಾಹಿನಿಗೆ ಬರಲು ಪರಿತಪಿಸುತ್ತಿದೆ. ಇಂತಹ ಕಾಲಘಟ್ಟದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಸಂದೇಶದಂತೆ ಶಿಕ್ಷಣ, ಸಂಘಟನೆ, ಹೋರಾಟವನ್ನು ಮೂಲಮಂತ್ರವಾಗಿಸಿಕೊಂಡು ಮುನ್ನಡೆಯಬೇಕು. ಶಿಕ್ಷಣವೇ ಪ್ರಮುಖ ಆಯುಧೆಂಬ ಎಲ್ಲಾ ಮಹನೀಯರ ಆದರ್ಶ ಪಾಲಿಸಬೇಕು ಎಂದು ಕುಂದಾಪುರ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜು ಎನ್ ಹೇಳಿದ್ದಾರೆ.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಉಡುಪಿ ಜಿಲ್ಲಾ ಸಂಘಟನಾ ಸಮಿತಿ, ಕುಂದಾಪುರ ತಾಲೂಕು ಕಾನೂನು ಸೇವೆಗಳ ಸಮಿತಿ ಮತ್ತು ವಕೀಲರ ಸಂಘ ಕುಂದಾಪುರ ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 29 ರಂದು ಕುಂದಾಪುರದಲ್ಲಿ ವಿಶ್ವ ಆದಿವಾಸಿ ದಿನಾಚರಣೆ ಪ್ರಯುಕ್ತ ನಡೆದ ಆದಿವಾಸಿಗಳ ಅಭಿವೃದ್ಧಿ ಏಕೆ? ಮತ್ತು ಹೇಗೆ ಅವಲೋಕನ ಪರಿಶಿಷ್ಟ ಪಂಗಡ ಆದಿವಾಸಿ ಬುಡಕಟ್ಟು ಜನರಿಗೆ ಕಾನೂನು ಅರಿವು ಮಾಹಿತಿ ಕಾರ್ಯಾಗಾರ ಹಾಗೂ ಆದಿವಾಸಿ ಅಭಿವೃದ್ಧಿ ಅಧ್ಯಯನ ಶಿಬಿರ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ.ಎಸ್. ವೈ.ಗುರುಶಾಂತ್ ಮಾತನಾಡಿ, ಭಾರತದ ವಿವಿಧ ಕ್ಷೇತ್ರಗಳು ಪ್ರಪಂಚವನ್ನೇ ಗಮನ ಸೆಳೆಯುವಂತೆ ಮಾಡಿದೆ. ದೇಶದ ಸಂಸ್ಕೃತಿ, ಸಮೃದ್ಧಿ ಹೆಚ್ಚಿಸಿ ಆಚಾರ–ವಿಚಾರದ ತಳಹದಿಯಾಗಿರುವ ಮೂಲನಿವಾಸಿಗಳು ಇನ್ನೂ ಸ್ವಾತಂತ್ರ್ಯ ಪೂರ್ವದಲ್ಲಿ ನೋವು ಅನುಭವಿಸಿದಂತೆ ಈಗಲೂ ಸಮಸ್ಯೆಯಲ್ಲಿದ್ದಾರೆ, ಭಾರತದಲ್ಲಿ ಆದಿವಾಸಿಗಳು ವಿಶ್ವದ ಬೇರೆ ಕಡೆಗಳಿಗಿಂತ ಹೆಚ್ಚಿದ್ದಾರೆ. ಕೊರಗರ ಸಾಕ್ಷರತೆ ಮತ್ತು ಆರೋಗ್ಯ ವಿಚಾರದಲ್ಲಿ ಇನ್ನಷ್ಟು ಪರಿವರ್ತನೆ ಅಗತ್ಯವಿದೆ ಎಂದರು.

ಕುಂದಾಪುರ ವಕೀಲರ ಸಂಘದ ಅಧ್ಯಕ್ಷ ಬನ್ನಾಡಿ ಸೋಮನಾಥ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ತಾಲೂಕು ಸಮಿತಿಯ ಸದಸ್ಯ ಕಾರ್ಯದರ್ಶಿ ಧನೇಶ್ ಮುಗಳಿ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಉಡುಪಿ ಜಿಲ್ಲಾಧ್ಯಕ್ಷ ಶ್ರೀಧರ್ ನಾಡ, ಗೌರವಾಧ್ಯಕ್ಷ ಸಂಜು ಕಾರೆಬೈಲು ಉಪಸ್ಥಿತರಿದ್ದರು.

ಬೃಹತ್ ರಾಜಕೀಯ ಸಮಾವೇಶ ನಿಜ ಪರ್ಯಾಯ ರೂಪಿಸುವುದರತ್ತ

ಸೌಹಾರ್ದ– ಸಮೃದ್ಧ ಹಾಗೂ ಜನತಾ ಕರ್ನಾಟಕ ನಿರ್ಮಾಣಕ್ಕಾಗಿ ಸಿಪಿಐ(ಎಂ) ಪಕ್ಷದ ರಾಜ್ಯ ಮಟ್ಟದ

ಯು. ಬಸವರಾಜ
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

2023 ರ ಮೊದಲ ಭಾಗದಲ್ಲಿ ಕರ್ನಾಟಕ ವಿಧಾನ ಸಭಾ ಚುನಾವಣೆ ನಡೆಯಲಿರುವುದರಿಂದ ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಮುಂತಾದ ಪಕ್ಷಗಳು ಭರದ ಸಿದ್ಧತೆಯಲ್ಲಿ ತೊಡಗಿವೆ. ಬಿಜೆಪಿ ಈ ಚುನಾವಣೆಯಲ್ಲಿ ಸುಮಾರು 150 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಮತ್ತೆ ಅಧಿಕಾರದಲ್ಲಿ ತೊಡಗುವುದಾಗಿ ಘೋಷಿಸಿದೆ. ಬಿಜೆಪಿ ಈಗ ಜನ ಮನ್ನಣೆಯನ್ನು ಕಳೆದುಕೊಂಡಿರುವುದರಿಂದ ಕಾಂಗ್ರೆಸ್ ಸರಕಾರ ರಚಿಸುವುದಾಗಿ ಅದರ ಮುಖಂಡರು ಹೇಳುತ್ತಿದ್ದಾರೆ. ಅದೇ ಸಂದರ್ಭದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಗೆ ಜನ ಮನ್ನಣೆ ಅಷ್ಟಾಗಿ ಇಲ್ಲದೇ ಇರುವುದರಿಂದ ಅವುಗಳು ಸ್ವತಂತ್ರವಾಗಿ ಬಹುಮತದ ಸ್ಥಾನಗಳನ್ನು ಪಡೆಯಲಾರವು ಮತ್ತು ಮುಖ್ಯವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಿನ ಸ್ಥಾನಗಳನ್ನು ತಾನು ಗಳಿಸುವ ಮೂಲಕ ಅದರ ಲಾಭ ಪಡೆದು ಮೈತ್ರಿ ಸರ್ಕಾರದ ನಾಯಕನಾಗುವೆನೆಂಬ ಲೆಕ್ಕಾಚಾರದೊಂದಿಗೆ ಜೆಡಿಎಸ್ ಸಹ ತಯಾರಿ ನಡೆಸಿದೆ.

ಇದೇ ಸಂದರ್ಭದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳು ಬಿಜೆಪಿಯ ಆಪರೇಷನ್ ಕಮಲದ ಕುತಂತ್ರ ಹಾಗೂ ಇ.ಡಿ, ಐ.ಟಿ ಮತ್ತು ಸಿಬಿಐ ಸಂಸ್ಥೆಗಳ ದುರುಪಯೋಗದಿಂದ ಹೆದರಿವೆ. ಅವು ಬಹುಶಃ ಈ ಕಾರಣದಿಂದಲೂ ಸಮರ್ಥ ಅಭ್ಯರ್ಥಿಗಳ ಕೊರತೆಯನ್ನು ಎದುರಿಸುವ ಸಂಭವಗಳಿವೆ. ಅದಾಗಲೇ ಇವು ಪರಸ್ಪರರ ಮೇಲೆ ಒಂದು ರೀತಿಯ ಕೆಸರೆರಚಾಟದಲ್ಲಿ ತೊಡಗಿರುವುದನ್ನು ಕಾಣ ಬಹುದಾಗಿದೆ.

ಈ ಎಲ್ಲ ಪಕ್ಷಗಳಿಗೆ ಕರ್ನಾಟಕ ರಾಜ್ಯದ ಜನತೆಯ ನೈಜ ಸಮಸ್ಯೆ ಗಳನ್ನು ಪರಿಹರಿಸುವುದು ಹೇಗೆ ಎಂಬ ಲೆಕ್ಕಾಚಾರದ ಸ್ಪರ್ಧೆ ಇಲ್ಲ. ಬದಲಿಗೆ ಏನಾದರೂ ಮಾಡಿ ಹೇಗೂ ಅಧಿಕಾರ ಪಡೆಯಬಹುದೆಂಬ ಲೆಕ್ಕಾಚಾರವೇ ಪ್ರಧಾನವಾಗಿ ಕಂಡು ಬರುತ್ತದೆ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಈ ಮೂರು ಪಕ್ಷಗಳಿಗೆ ಬಹುಮತವನ್ನು ನೀಡಿರಲಿಲ್ಲ. ಆದಾಗಲು ಬಿಜೆಪಿ ತನಗೆ ಇತರರ ಬೆಂಬಲವಿಲ್ಲವೆಂದು ಸ್ಪಷ್ಟವಾಗಿ ತಿಳಿದಿದ್ದರೂ ಒಕ್ಕೂಟ ಸರಕಾರ ಹಾಗೂ ರಾಜ್ಯಪಾಲರ ಕಛೇರಿಯ ದುರುಪಯೋಗ ಮಾಡಿಕೊಂಡು ಮುಖ್ಯಮಂತ್ರಿಯಾಗಿ ಹೇರಿತು. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಮತ್ತು ಅವುಗಳ ಶಾಸಕರು ಬಿಜೆಪಿಯ ಯಾವುದೇ ಅಮಿಷಗಳಿಗೆ ಜಗ್ಗದೇ ಹೋದುದರಿಂದ ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಮಾಡಲಾಗದೇ ಯಡಿಯೂರಪ್ಪರವರು ರಾಜಿನಾಮೆ ನೀಡಬೇಕಾಯಿತು. ಅದೇ ಹೊತ್ತಿನಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಚುನಾವಣೆಯ ನಂತರ ಮೈತ್ರಿ ಮಾಡಿಕೊಂಡು ಶ್ರೀ ಕುಮಾರಸ್ವಾಮಿ ನೇತೃತ್ವದಲ್ಲಿ ಮೈತ್ರಿ ಸರಕಾರಕ್ಕೆ ಕ್ರಮ ವಹಿಸಿದವು.

ಇದೇ ಸಂದರ್ಭದಲ್ಲಿ ಗಾಯಗೊಂಡ ಹುಲಿಯಂತೆ ಈ ಎರಡು ಪಕ್ಷಗಳಲ್ಲಿನ ಅಸಂತೃಪ್ತರು ಹಾಗೂ ಅಧಿಕಾರದಾಹಿಗಳಿಗಾಗಿ ಹೊಂಚು ಹಾಕಿ ಬಿಜೆಪಿ ಕಾಯುತ್ತಿತ್ತು.

ಅದಕ್ಕೆ ಸಹಕಾರಿಯಾಗುವಂತೆ ಮೈತ್ರಿ ಸರಕಾರ ಪರಸ್ಪರ ಸಹಯೋಗದಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸಿಕೊಂಡು ರಾಜ್ಯದ ಅಭಿವೃದ್ಧಿಗೆ ಕ್ರಮವಹಿಸಲು ಮುಂದಾಗದೇ ಕಚ್ಚಾಟದಲ್ಲಿ ತೊಡಗಿತು. ಈ ಎರಡೂ ಪಕ್ಷಗಳ ನಡುವಿನ ಈ ನಕಾರಾತ್ಮಕ ಬೆಳವಣಿಗೆಯು ಅಂದುಕೊಂಡಂತೆ ಬಿಜೆಪಿಗೆ ನೆರವಾಯಿತು. ವಿರೋಧ ಪಕ್ಷವಾಗಿ ಜನತೆಯನ್ನು ಸಂರಕ್ಷಿಸುವ ಒಂದು ರಚನಾತ್ಮಕ



ಕೆಲಸದಲ್ಲಿ ತೊಡಗ ಬೇಕಿದ್ದ ಬಿಜೆಪಿಯು, ಆ ನೈತಿಕತೆಯ ಕರ್ತವ್ಯಕ್ಕೆ ಎಳ್ಳು– ನೀರು ಬಿಟ್ಟು, ಈ ಎರಡು ಪಕ್ಷಗಳ ಒಳಗಿನ ಅಸಂತೃಪ್ತರು ಮತ್ತು ಅಧಿಕಾರದಾಹಿಗಳಿಗೆ, ಅನೈತಿಕ ಹಾಗೂ ಭ್ರಷ್ಟತೆಯ ಆಪರೇಷನ್ ಕಮಲದ ಗಾಳ ಹಾಕಿ ಸೆಳೆದು ಮೈತ್ರಿ ಸರಕಾರವನ್ನು ಬಲವಂತವಾಗಿ ಉರುಳಿಸಿತು. ಮಾತ್ರವಲ್ಲಾ, ತನಗೆ ಜನಾದೇಶವಿಲ್ಲದಿದ್ದರೂ ಮತ್ತು ಬಹುಮತವಿಲ್ಲದಿದ್ದರೂ ಒಕ್ಕೂಟ ಸರಕಾರದ ಮತ್ತು ರಾಜ್ಯಪಾಲರ ಕಛೇರಿಯ ಅಧಿಕಾರವನ್ನು ಮತ್ತೊಮ್ಮೆ ದುರುಪಯೋಗ ಮಾಡಿಕೊಂಡು ಮತ್ತೊಮ್ಮೆ ಯಡಿಯೂರಪ್ಪನವರನ್ನು ಮುಖ್ಯಮಂತ್ರಿಯಾಗಿಸಿತು.

ಆಪರೇಷನ್ ಕಮಲದಂತೆ ಪಕ್ಷಾಂತರ ಮಾಡಿದ ಮಾಜಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮಾಜಿ ಶಾಸಕರಿಗೆ ಸ್ಥಾನ ನೀಡಿ ಗೆಲ್ಲಿಸಿಕೊಳ್ಳುವ ಕಡೆಗೆ ಮುಂದೆ ಅವರಿಗೆ ಆಪರೇಷನ್ ಕಮಲದ ವಾಗ್ದಾನದಂತೆ ಮಂತ್ರಿಮಂಡಲದ ಸ್ಥಾನ ನೀಡುವಲ್ಲಿಯೇ ಅವರ ಪಕ್ಷದೊಳಗಿನ ಒಡಂಬಡಿಕೆಯ ಸಮಯ ಮುಗಿಯುತ್ತಾ ಬಂತು. ವಲಸಿಗರಿಗೆ ಅಧಿಕಾರದ ಸ್ಥಾನ ಮಾನ ನೀಡುವುದರಿಂದ ಬಿಜೆಪಿಯೊಳಗಿನ ಅಸಂತೃಪ್ತರು ಹಾಗೂ ಅಧಿಕಾರದಾಹಿಗಳು ಲಾಭಿ ಚಟುವಟಿಕೆ ನಡೆಸಿದರು. ಯಡಿಯೂರಪ್ಪ ಹಾಗೂ ಅವರ ಪುತ್ರರ ಹಿಡಿತ ಮತ್ತು ಭ್ರಷ್ಟಾಚಾರದ ತೀವ್ರ ಆರೋಪಗಳು ಬಹಿರಂಗ ಗೊಂಡವು.

ಆರ್.ಎಸ್.ಎಸ್. ಹಾಗು ಅಖಿಲ ಭಾರತ ಬಿಜೆಪಿ ನಾಯಕತ್ವಗಳು ಯಡಿಯೂರಪ್ಪರವರ ತೀವ್ರ ವಿರೋಧದ ನಡುವೆಯೂ ಅವರನ್ನು ಕೆಳಗಿಳಿಸುವಲ್ಲಿ ಯಶಸ್ವಿಯಾದವು. ಅದೇ ಸಂದರ್ಭದಲ್ಲಿ ಯಡಿಯೂರಪ್ಪರವರು ತಮ್ಮ ವಿರೋಧಿಗಳಿಗೆ ಅಧಿಕಾರದೊರೆಯದಂತೆ ಕ್ರಮವಹಿಸಿ ತಮ್ಮ ಬೆಂಬಲಿಗರಾದ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಮುಖ್ಯಮಂತ್ರಿಯನ್ನಾಗಿಸುವಲ್ಲಿ ಯಶಸ್ವಿಯಾದರು.

ಬಿಜೆಪಿಯೊಳಗಿನ ಈ ಪ್ರಹಸನವು ಒಟ್ಟಾರೆ ಆರ್.ಎಸ್.ಎಸ್. ಹಿಡಿತ ಅದು ಬಯಸಿದಂತೆ ರಾಜ್ಯ ಸರಕಾರದ ಮೇಲೆ ಮತ್ತಷ್ಟು ಹೆಚ್ಚಾಗಲು ಕಾರಣವಾಯಿತು. ಬಸವರಾಜ ಬೊಮ್ಮಾಯಿಯವರಿಗೆ ಪಕ್ಷದ ಮೇಲಾಗಲಿ ಹಾಗೂ ಶಾಸಕರ ಮೇಲಾಗಲೀ ಯಾವುದೇ ಹಿಡಿತವಿಲ್ಲದ ದುರ್ಬಲ ನಾಯಕರಾದುದರಿಂದ, ತಮ್ಮ ಅಧಿಕಾರಕ್ಕಾಗಿ ಆರ್.ಎಸ್.ಎಸ್.ಗೆ ಹಾಗೂ ಅಖಿಲ ಭಾರತ ಬಿಜೆಪಿ ನಾಯಕರಿಗೆ ನಿಷ್ಠರಾಗಿ, ಕಾರ್ಯನಿರ್ವಹಿಸುವಂತಾಗಿದೆ. ಇದು ರಾಜ್ಯದಲ್ಲಿ ತೀವ್ರತರವಾದ ಕೋಮುದ್ವೇಷದ ಬೆಳವಣಿಗೆಗೆ ಮತ್ತು ಕೋಮು ಧೃವೀಕರಣಕ್ಕೆ ಕಾರಣವಾಗಿದೆ. ಅದೇ ರೀತಿ, ಈ ಬೆಳವಣಿಗೆ ಜಾತ್ಯಾತೀತ ಶಕ್ತಿಗಳನ್ನು ದುರ್ಬಲಗೊಳಿಸಿದೆ.

ಈ ಎಲ್ಲದರ ಪರಿಣಾಮವಾಗಿ ಅದಾಗಲೇ ಸಂಕಷ್ಟದಲ್ಲಿದ್ದ ರಾಜ್ಯದ ಜನತೆ ಮತ್ತಷ್ಟು ಸಂಕಷ್ಟವನ್ನು ಎದುರಿಸ ಬೇಕಾಯಿತು.

ತೀವ್ರಗೊಂಡ ಜನತೆಯ ಮೇಲಿನ ದಾಳಿಗಳು:

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ದೇಶದ ಮೇಲೆ ಕಾರ್ಪೊರೇಟ್ ಕಂಪನಿಗಳ ಲೂಟಿಯನ್ನು ವ್ಯಾಪಕಗೊಳಿಸಲು ಒಂದೆಡೆ ವ್ಯವಸಾಯವನ್ನು ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿ ಕೊಡಲು, ಇನ್ನೊಂದೆಡೆ ಲಾಭದಾಯಕ ಸಾರ್ವಜನಿಕ ರಂಗದ ಉದ್ಯಮೆಗಳು ಹಾಗೂ ಸಂಸ್ಥೆಗಳಾದ ಬಿ.ಎಸ್.ಎನ್.ಎಲ್, ವಿಮೆ, ಬ್ಯಾಂಕ್, ರೈಲ್ವೇ ಮತ್ತಿತರೆ ಸಾರಿಗೆ ಮುಂತಾದವುಗಳ ಖಾಸಗೀಕರಣಕ್ಕೆ ಕ್ರಮವಹಿಸಿದರೆ, ಮತ್ತೊಂದೆಡೆ, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳ ಮೂಲಕ ಕಾರ್ಮಿಕ ವರ್ಗದ ವ್ಯಾಪಕ ಲೂಟಿಗೆ ಕ್ರಮವಹಿಸಿತು. ಇದರ ವಿರುದ್ದ ದೇಶದ 554 ರೈತ ಸಂಘಟನೆಗಳು, ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ, ವಿದ್ಯಾರ್ಥಿ, ಯುವಜನ, ಮಹಿಳಾ, ದಲಿತ, ಆದಿವಾಸಿ ಹಾಗೂ ಅಲ್ಪ ಸಂಖ್ಯಾತ ಸಮುದಾಯಗಳು ನಡೆಸಿದ ತೀವ್ರತರದ ಹೋರಾಟಗಳು ಮತ್ತು ದೆಹಲಿ ಸುತ್ತಲಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆದು ಸುಮಾರು 13 ತಿಂಗಳಿಗೂ ಹೆಚ್ಚು ಕಾಲ ಲಕ್ಷಾಂತರ ರೈತ ಕುಟುಂಬಗಳು ನಿರಂತರವಾಗಿ ನಡೆಸಿದ ಸಮರ ಶೀಲ ಐತಿಹಾಸಿಕ ಜಾಗತಿಕ ಗಮನ ಸೆಳೆದ ಚಳುವಳಿಯು, ಪ್ರಧಾನ ಮಂತ್ರಿಗಳು, ಕೇಂದ್ರ ಸರಕಾರ ತಲೆಭಾಗುವಂತೆ ಮಾಡಿತಲ್ಲದೇ ಮಂಡಿಯೂರಿ ಜಗತ್ತಿನ ಕ್ಷಮೆ ಕೇಳಿ ಮೂರು ರೈತ ವಿರೋಧಿ ಹಾಗೂ ಕಾರ್ಪೊರೇಟ್ ಕಂಪನಿಗಳ ಪರವಾದ ಕಾಯ್ದೆಗಳನ್ನು ವಾಪಾಸು ಪಡೆಯುವಂತೆ ಮಾಡಿತು. ಇದಕ್ಕೆ ಪೂರ್ವದಲ್ಲಿ ದೇಶವನ್ನು ವಿಭಜಿಸುವ ಪೌರತ್ವ ತಿದ್ದುಪಡಿ ಕಾಯ್ದೆ, ಎನ್ ಆರ್ ಸಿ ಮತ್ತು ಎನ್ ಪಿ ಅರ್ ವಿರುದ್ದ ದೇಶ ವ್ಯಾಪ್ತಿಯಾಗಿ ಬಂದ ಎಲ್ಲ ಪ್ರಗತಿಪರ ಹಾಗೂ ಅಲ್ಪ ಸಂಖ್ಯಾತ ಸಮುದಾಯಗಳ ಭಾರೀ ಪ್ರತಿರೋಧ ಅವುಗಳನ್ನು ಹಿಮ್ಮೆಟ್ಟಿಸಿದ್ದವು.

ಕರ್ನಾಟಕ ರಾಜ್ಯದಲ್ಲಿ ಈ ಅವಧಿಯಲ್ಲಿ ಅಧಿಕಾರದಲ್ಲಿದ್ದ ಯಡಿಯೂರಪ್ಪರವರ ಹಾಗೂ ಬಸವರಾಜ ಬೊಮ್ಮಾಯಿಯವರ ಸರಕಾರಗಳು ಒಕ್ಕೂಟ ಸರಕಾರಗಳು ಈ ಜನ ವಿರೋಧಿ ಹಾಗೂ ಕಾರ್ಪೊರೇಟ್ ಕಂಪನಿಗಳ ಲೂಟಿಪರ ಕಾಯ್ದೆಗಳನ್ನು ರಾಜ್ಯದ ಜನತೆಯ ತೀವ್ರ ಪ್ರತಿರೋಧದ ನಡುವೆಯೂ ಜಾರಿಗೊಳಿಸಿವೆ. ಅದು ಮಾತ್ರವಲ್ಲಾ, ಒಕ್ಕೂಟ ಸರಕಾರ ದೇಶದ ಮೇಲೆ ಹೇರಿದ ಮತ್ತೊಂದು, ಎಲ್ಲ ಮಹಿಳೆಯರ ಹಾಗೂ ಶೂದ್ರ ಮತ್ತು ದಲಿತ ಸಮುದಾಯಗಳ ಶಿಕ್ಷಣ ಹಾಗು ಉದ್ಯೋಗದ ಹಕ್ಕಿನ ಮೇಲೆ ಧಾಳಿ ನಡೆಸುವ ಮತ್ತು ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಗಳ ಮೇಲೆ ಧಾಳಿ ನಡೆಸುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತಿದೆ. 13,800 ಕನ್ನಡ ಪ್ರಾಥಮಿಕ ಶಾಲೆಗಳನ್ನು ಮುಚ್ಚಲು ಕ್ರಮವಹಿಸಿದೆ. ಪಠ್ಯ ಪುಸ್ತಕಗಳ ಪರಿಷ್ಕರಣೆಯ ಹೆಸರಿನಲ್ಲಿ ಅಲ್ಲಿನ ಪ್ರಗತಿಶೀಲ ಮೌಲ್ಯಗಳನ್ನು ಕಿತ್ತು ಹಾಕಿ ವಿಭಜನಕಾರಿ ಕೋಮುವಾದಿ ಹಾಗೂ ಜಾತಿವಾದಿ ವಿಚಾರಗಳನ್ನು ಎಳೆಯ ಮನಸ್ಸುಗಳಲ್ಲಿ ಬಿತ್ತಲು ಕ್ರಮವಹಿಸಿದೆ.

ಕರ್ನಾಟಕ ರಾಜ್ಯ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಸುಗ್ರೀವಾಜ್ಞೆ ಮೂಲಕ ಜಾತಿ ಹಾಗೂ ಲಿಂಗತಾರತಮ್ಯ ಮತ್ತು ಅಸ್ಪೃಶ್ಯಾಚರಣೆಗಳನ್ನು ಬಲಗೊಳಿಸಲು ಕ್ರಮವಹಿಸಿದೆ. ಅಂತರ್ಜಾತೀಯ ವಿವಾಹಗಳು ಮತ್ತು ಮತಾಂತರವನ್ನು ಅದು ನಿಷೇಧಿಸಿದೆ.

ಅದೇ ರೀತಿ, ರಾಜ್ಯವನ್ನು ಕೋಮುದ್ವೇಷದ ಆಧಾರದಲ್ಲಿ ವಿಭಜಿಸಿ ಅವುಗಳ ಜಾರಿಗೆ ಕ್ರಮವಹಿಸುವ ನೀತಿಯನ್ನು ತೀವ್ರವಾಗಿ ಅನುಸರಿಸುತ್ತಿದೆ. ಪರಿಣಾಮವಾಗಿ, ಮತಾಂಧ ಶಕ್ತಿಗಳು ಬಹಿರಂಗವಾಗಿ ಜನತೆಯ ಹಾಗೂ ಎಲ್ಲ ಬಗೆಯ ಪ್ರತಿರೋಧವನ್ನು ಹತ್ತಿಕ್ಕುವ ಕೆಲಸದಲ್ಲಿ ತೊಡಗಿವೆ. ಅಲ್ಪ ಸಂಖ್ಯಾತರ ಮೇಲಿನ ದಾಳಿಗಳು ಮತ್ತು ಅವರ ಕೊಲೆಗಳು ಹೆಚ್ಚಿವೆ. ಪ್ರಗತಿಪರ ಸಾಹಿತಿಗಳಿಗೆ ಕೊಲೆ ಬೆದರಿಕೆಗಳು, ದಮನಿಸುವ ಕ್ರಮಗಳು ಹೆಚ್ಚುತ್ತಿವೆ.

ಈ ಅವಧಿಯಲ್ಲಿ ರಾಜ್ಯ

ಪುಟ 10 ಕ್ಕೆ



ಭಾರತದಲ್ಲಿ ಕಳೆದುಹೋಗುತ್ತಿರುವ ವೈಜ್ಞಾನಿಕ ಪ್ರಜ್ಞೆ

ಭಾರತ ಸಾರ್ವಜನಿಕರಲ್ಲಿ ಮತ್ತು ವಿಜ್ಞಾನಿಗಳಲ್ಲೂ ಸಹ ವಿಜ್ಞಾನ ಅರಿವನ್ನು ಹರಡಲಾಗುತ್ತಿಲ್ಲ

ಸಿ.ಪಿ. ರಾಜೇಂದ್ರನ್ ಅನುವಾದ: **ನಾ ದಿವಾಕರ**



75ನೆಯ ಸ್ವಾತಂತ್ರ್ಯೋತ್ಸವ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಕಳೆದ ಏಳು ದಶಕಗಳಲ್ಲಿ ವಿವಿಧ ವಲಯಗಳಲ್ಲಿ ಭಾರತ ನಡೆದುಬಂದ ಹಾದಿಯನ್ನು, ಬೆಳವಣಿಗೆಗಳನ್ನು ಪರಾಮರ್ಶಿಸುವ ಒಂದು ಸುಸಂದರ್ಭ. ವಿಷಾದಕರ ಸಂಗತಿ ಎಂದರೆ, ಹಿಂದೂ ಪತ್ರಿಕೆಯನ್ನೂ ಸೇರಿದಂತೆ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ದೇಶದ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳು ಈ ಅವಧಿಯಲ್ಲಿ ದೇಶದಲ್ಲಿ ವಿಜ್ಞಾನ ಶಿಕ್ಷಣದಲ್ಲಿ ನಡೆದಿರುವ ಬೆಳವಣಿಗೆಗಳ ಬಗ್ಗೆ ವಿಶ್ಲೇಷಣೆಯನ್ನು ನಡೆಸಿಲ್ಲ. ರಾಜಕಾರಣಿಗಳು, ಕಲಾವಿದರು, ಬರಹಗಾರರು, ನಟರು ಮತ್ತಿತರ ಗಣ್ಯರ ಬಗ್ಗೆ ಹೆಚ್ಚಿನ ಗಮನ ನೀಡಲಾಗಿದೆಯಾದರೂ, ವಿಜ್ಞಾನ ಮತ್ತು ವಿಜ್ಞಾನಿಗಳನ್ನು ಬಹುಮಟ್ಟಿಗೆ ನಿರ್ಲಕ್ಷಿಸಲಾಗಿದೆ. ವಿಜ್ಞಾನದ ಬಗ್ಗೆ ಸಾಮಾನ್ಯವಾಗಿ ಕಂಡುಬರುವ ನಿರ್ಲಕ್ಷ್ಯ, ಅಸಡ್ಡೆ ಮತ್ತು ಜನಸಾಮಾನ್ಯರಲ್ಲಿ ಹಾಗೂ ರಾಜಕಾರಣಿಗಳಲ್ಲಿ ವೈಜ್ಞಾನಿಕ ಪ್ರಜ್ಞೆಯ ಕೊರತೆ ಎದ್ದು ಕಾಣುತ್ತಿರುವುದು ಭಾರತೀಯ ಸಂವೇದನೆಯ ಬಗ್ಗೆ ವಿಷಾದ ಮೂಡಿಸುತ್ತದೆ.

ವೈಜ್ಞಾನಿಕ ಮನೋಭಾವದ ಕೊರತೆ

ಭಾರತ ಸಂಶೋಧನೆಯ ಕ್ಷೇತ್ರದಲ್ಲಿ, ವಿಶೇಷವಾಗಿ ಅಣು ಜೀವವಿಜ್ಞಾನ, ಕೃಷಿ ಮತ್ತು ಔಷಧೀಯ ವಿಜ್ಞಾನದಲ್ಲಿ, ಘನಸ್ಥಿತಿಯ ರಾಸಾಯನಶಾಸ್ತ್ರ ವಿಜ್ಞಾನದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಲು ಸಾಧ್ಯವಾಗಿದೆ. ಹಾಗೆಯೇ ಬಾಹ್ಯಾಕಾಶ ವಿಜ್ಞಾನ, ಪರಮಾಣು ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲೂ ಸಾಕಷ್ಟು ಮುನ್ನಡೆ ಸಾಧಿಸಿದೆ. ಆದಾಗ್ಯೂ ಜನಸಾಮಾನ್ಯರ ನಡುವೆ ಮಾತ್ರವೇ ಅಲ್ಲದೆ ವಿಜ್ಞಾನಿಗಳ ನಡುವೆಯೂ ವೈಜ್ಞಾನಿಕ ಅರಿವು/ಪ್ರಜ್ಞೆಯನ್ನು ಬೆಳೆಸುವುದರಲ್ಲಿ ಭಾರತ ವಿಫಲವಾಗಿದೆ. ಭಾರತದ ಸಂಸತ್ತು ನಾಗರಿಕರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ನೆರವಾಗುವ ಉದ್ದೇಶದಿಂದಲೇ 42ನೆಯ ಸಂವಿಧಾನ ತಿದ್ದುಪಡಿಯ ಮೂಲಕ ಪರಿಚ್ಚೇದ 51ಎ ಜಾರಿಗೊಳಿಸಿತ್ತು. ಸಂವಿಧಾನ ಪರಿಚ್ಚೇದ 51ಎ ಅನ್ವಯ "ವೈಜ್ಞಾನಿಕ ಮನೋಭಾವವನ್ನು, ಮಾನವೀಯತೆಯನ್ನು, ವಿಚಾರಶೀಲತೆ ಮತ್ತು ಸುಧಾರಣೆಯನ್ನು ಬೆಳೆಸುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯವಾಗಿರುತ್ತದೆ".

ಈ ಪ್ರಯತ್ನಗಳ ಹೊರತಾಗಿಯೂ ವೈಜ್ಞಾನಿಕ ಮನೋಭಾವ ಒಂದು ಉದಾತ್ತ ಆದರ್ಶವಾಗಿಯೇ ಉಳಿದಿದ್ದು ಸಮಾಜವನ್ನು ತಳಮಟ್ಟದವರೆಗೂ ತಲುಪಲು ಸಾಧ್ಯವಾಗಿಲ್ಲ. ಇದರಿಂದಲೇ ಭಾರತೀಯ ಸಮಾಜದ ಮನಸ್ಥಿತಿ ಅಂಧಶ್ರದ್ಧೆಯ ಕೂಪವಾಗಿದೆ. ಇದರ ಪರಿಣಾಮವಾಗಿಯೇ ಸಾಂವಿಧಾನಿಕವಾಗಿ ಪ್ರಮಾಣೀಕರಿಸಲಾದ ಜಾತ್ಯತೀತ ಮೌಲ್ಯಗಳನ್ನೂ ನಿರ್ಲಕ್ಷಿಸಿ ಹಿಂಗತಿಯ ಧರ್ಮಾಧಾರಿತ ರಾಜಕಾರಣವು ಮುನ್ನೆಲೆಗೆ ಬರುತ್ತಿದೆ. 1950 ಮತ್ತು 60ರ ದಶಕಗಳಲ್ಲಿ ಭಾರತದ ವಿಜ್ಞಾನಿಗಳು, ಅಂದಿನ ಪ್ರಧಾನಿ ಜವಹರಲಾಲ್ ನೆಹರೂ ಅವರ ಪ್ರೋತ್ಸಾಹದೊಂದಿಗೆ, ಆಧುನಿಕ ವಿಜ್ಞಾನದ ಬುನಾದಿಯನ್ನು ನಿರ್ಮಿಸಿದ್ದರು. ಹಾಗಾದರೆ ಎಡವಿರುವುದೆಲ್ಲಿ?

ಈ ಸಮಸ್ಯೆಯ ಮೂಲವನ್ನು ವಿಜ್ಞಾನಿಗಳ ನಡುವೆ ಮತ್ತು ಅವರು ಪ್ರತಿನಿಧಿಸುವ ವಿಜ್ಞಾನ ಸಂಸ್ಥೆಗಳಲ್ಲಿ ಗುರುತಿಸಬಹುದು. ಕೆಲವು ಸನ್ನಿವೇಶಗಳಲ್ಲಿ, ಅತ್ಯವಶ್ಯವಾಗಿದ್ದಾಗಲೂ ಸಹ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಪ್ರಯತ್ನಗಳಿಗೆ ವಿಜ್ಞಾನಿಗಳು ಅರೆಮನಸ್ಸಿನಿಂದಲೇ ಪ್ರೋತ್ಸಾಹ ನೀಡಿದ್ದರು. ಪ್ರಖ್ಯಾತ ಅಣು ಜೀವವಿಜ್ಞಾನಿ ಪುಷ್ಪಾ ಭಾರ್ಗವ ತಮ್ಮ ಲೇಖನವೊಂದರಲ್ಲಿ (Scientists without scientific temper ವೈಜ್ಞಾನಿಕ ಮನೋಭಾವ ಇಲ್ಲದ ವಿಜ್ಞಾನಿಗಳು– ದ ಹಿಂದೂ 17 ಜನವರಿ 2015) "ಉನ್ನತ ಹುದ್ದೆಗಳಲ್ಲಿರುವವರನ್ನೂ ಸೇರಿದಂತೆ ದೇಶದಲ್ಲಿರುವ ಬಹುತೇಕ ವಿಜ್ಞಾನಿಗಳು, ವೈಚಾರಿಕತೆ, ತರ್ಕಬದ್ಧತೆ ಇರುವಂತಹ, ಮತತತ್ವಗಳ ಚಿಂತನೆ, ಮೂಢನಂಬಿಕೆಗಳು ಮತ್ತು ಮಿಥ್ಯೆಗಳಲ್ಲಿ ನಂಬಿಕೆ ಇಲ್ಲದಂತಹ, ವೈಜ್ಞಾನಿಕ ಮನೋಭಾವಕ್ಕೆ ಬದ್ಧರಾಗಿಲ್ಲ" ಎಂದು ಹೇಳಿದ್ದರು.

1994ರಲ್ಲಿ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ಇಂಡಿಯನ್ ಅಕಾಡೆಮಿ ಅಫ್ ಸೈನ್ಸಸ್ ಮತ್ತು ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್, ಮೂರೂ ಅಕಾಡೆಮಿಗಳಲ್ಲಿ, ವಿಜ್ಞಾನ ಸಂಬಂಧಿತ ಸಾಮಾಜಿಕ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ ಎಂಬ ಕಾರಣಕ್ಕಾಗಿ ಪುಷ್ಪಾ ಭಾರ್ಗವ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಪುಷ್ಪ ಭಾರ್ಗವ ಅವರು 2015ರಲ್ಲಿ ಬರೆದ ಒಂದು ಲೇಖನದಲ್ಲಿ 1930ರ ನಂತರ ಭಾರತ ಏಕೆ ವಿಜ್ಞಾನದ ನೋಬೆಲ್ ಪ್ರಶಸ್ತಿ ಗಳಿಸಿಲ್ಲ ಎನ್ನುವುದನ್ನೂ ಹೀಗೆ ವಿಶ್ಲೇಷಿಸಿದ್ದರು. "ಇದಕ್ಕೆ ಮೂಲ ಕಾರಣವೇನೆಂದರೆ ದೇಶದಲ್ಲಿ ವೈಜ್ಞಾನಿಕ ಮನೋಭಾವವೇ ಬಹುಮುಖ್ಯ ಅಂಗವಾದ ವೈಜ್ಞಾನಿಕ ವಾತಾವರಣ ಇಲ್ಲದಿರುವುದು". ಕ್ರೀಡೆಯಲ್ಲಿ ಹೇಗೆ ಕ್ರೀಡಾ ಸಂಸ್ಕೃತಿ ಮುಖ್ಯವಾಗುವುದೋ ಹಾಗೆಯೇ ವಿಜ್ಞಾನ ಬೆಳೆಯಬೇಕೆಂದರೆ ವೈಜ್ಞಾನಿಕ ಮನೋಭಾವ ದೇಶದೆಲ್ಲೆಡೆ ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ವಿಜ್ಞಾನ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸಿ ಜನಸಾಮಾನ್ಯರಲ್ಲಿ ವಿಜ್ಞಾನ ಸಾಕ್ಷರತೆ ಮತ್ತು ಅರಿವು ಮೂಡಿಸಲು ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ಅವುಗಳ ಅಸ್ತಿತ್ವವೂ ಸಾರ್ಥಕವಾಗುತ್ತದೆ.

ಹುಸಿ ವಿಜ್ಞಾನ ಎಲ್ಲೆಡೆ ಹರಡಿದೆ

ಹಲವು ವರ್ಷಗಳ ಹಿಂದೆ ಅಮೆರಿಕದಲ್ಲಿನ ಕೆಲವು ಕ್ರೈಸ್ತ ಪುನರುಜ್ಜೀವಕ ಗುಂಪುಗಳು ದೇಶದ ವಿಜ್ಞಾನ ಪಠ್ಯಕ್ರಮದಲ್ಲಿ ಮಾನವ ಜೀವಿಯ ಉಗಮದ ವೈಜ್ಞಾನಿಕ ತತ್ವಗಳಿಗೆ ಪರ್ಯಾಯವಾಗಿ ಸೃಷ್ಟಿವಾದವನ್ನು ಅಳವಡಿಸಲು ಶತಾಯ ಗತಾಯ ಪ್ರಯತ್ನಿಸಿದ್ದವು. ಈ ಸಂದರ್ಭದಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಸಂಸ್ಥೆಯು ಒಂದು ಹೇಳಿಕೆಯನ್ನು ನೀಡುವ ಮೂಲಕ ಈ ಬೇಡಿಕೆಯನ್ನು ತಿರಸ್ಕರಿಸಿತ್ತು. ಈ ಹೇಳಿಕೆಯ ಕೊನೆಯಲ್ಲಿ "ವೈಜ್ಞಾನಿಕ ಪರಿಶೀಲನೆಯಿಂದ ಹೊರತಾದ ಯಾವುದೇ ರೀತಿಯ ತಾತ್ವಿಕ ಮೀಮಾಂಸೆಯನ್ನು, ವ್ಯಾಖ್ಯಾನಗಳನ್ನು, ಪ್ರಯೋಗ ಪರೀಕ್ಷೆಗಳನ್ನು ಆಧರಿಸಿದ ನಂಬಿಕೆಗಳಿಗೆ ಯಾವುದೇ ರೀತಿಯ ವಿಜ್ಞಾನ ಪಠ್ಯಕ್ರಮದಲ್ಲೂ ಬೋಧನೆಗೆ ಅವಕಾಶ ಪಡೆಯುವುದು ಸಾಧ್ಯವಿಲ್ಲ. ಈ ರೀತಿಯ ತಾತ್ವಿಕತೆಗಳನ್ನು ವಿಜ್ಞಾನ ಪಠ್ಯಕ್ರಮದಲ್ಲಿ ಅಳವಡಿಸುವುದು ಸಾರ್ವಜನಿಕ ಶಿಕ್ಷಣದ ಮೂಲ ಧ್ಯೇಯಗಳೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ. ವಿಜ್ಞಾನವು ನೈಸರ್ಗಿಕ ಪ್ರಕ್ರಿಯೆಗಳನ್ನು ವಿಶ್ಲೇಷಿಸುವುದರಲ್ಲಿ ಯಶಸ್ವಿಯಾಗಿದ್ದು ಇದರಿಂದ ಸೃಷ್ಟಿ ಪ್ರಕ್ರಿಯೆ ಮತ್ತು ಬ್ರಹ್ಮಾಂಡವನ್ನು ಅರ್ಥಮಾಡಿಕೊಳ್ಳುವುದೂ ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ತಂತ್ರಜ್ಞಾನ, ಸಾಮಾಜಿಕ ಆರೋಗ್ಯ ಮತ್ತು ಯೋಗಕ್ಷೇಮದಲ್ಲಿ ಸಾಕಷ್ಟು ಪ್ರಗತಿಗೂ ಕಾರಣವಾಗಿದೆ. ಆಧುನಿಕ ಜನ ಜೀವನದಲ್ಲಿ ವಿಜ್ಞಾನ ನಿರ್ವಹಿಸುವ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಶಿಕ್ಷಣದಲ್ಲಿ ವಿಜ್ಞಾನವನ್ನು ಬೋಧಿಸಬೇಕೇ ಹೊರತು, ಮತಧರ್ಮಗಳನ್ನಲ್ಲ" ಎಂದು ಹೇಳಲಾಗಿತ್ತು.

ವಾತಾವರಣ ಬದಲಾವಣೆಯ ವಿಜ್ಞಾನವನ್ನು ನಿರಾಕರಿಸುವುದರಲ್ಲಾಗಲೀ, ನಮ್ಮ ಸುತ್ತಲಿನ ಜಗತ್ತಿನ ರಹಸ್ಯಗಳನ್ನು ಭೇದಿಸಿ, ಜೀವ ವೈವಿಧ್ಯತೆಯನ್ನು ವ್ಯಾಖ್ಯಾನಿಸುವ ಮಾನವನ ಉಗಮ ಮತ್ತು ಅಭ್ಯುದಯದ ವಿಚಾರದಲ್ಲಾಗಲೀ ಹುಸಿ ವಿಜ್ಞಾನವು ಎಲ್ಲೆಡೆ ಹರಡುತ್ತಿದೆ. ಈ ಹುಸಿ ವಿಜ್ಞಾನ ಬೇರೂರಲು ಫಲವತ್ತಾದ ಭೂಮಿಕೆಯನ್ನು ಒದಗಿಸುವಲ್ಲಿ ಭಾರತವೂ ಹಿಂದೆ ಬಿದ್ದಿಲ್ಲ. ವಿಜ್ಞಾನ ಪಠ್ಯಕ್ರಮಗಳಲ್ಲಿ ಹುಸಿ ವಿಜ್ಞಾನವನ್ನು ಅಳವಡಿಸುವ ಹಲವು ಪ್ರಯತ್ನಗಳು ನಡೆದಿವೆ. ಕಳೆದ ವರ್ಷ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ಅಳವಡಿಸಲಾಗಿದೆ. ಗೋವಿನ ಸಗಣಿಯಲ್ಲಿ ಚಿಕಿತ್ಸಕ ಗುಣಾಂಶಗಳಿವೆ ಎಂಬ ವಾದಕ್ಕೆ, ಇದಕ್ಕೆ ಪೂರಕವಾದ ಯಾವುದೇ ರೀತಿಯ ವೈಜ್ಞಾನಿಕ ಪ್ರಮಾಣಗಳು ಇಲ್ಲವಾದರೂ, ಅಧಿಕೃತವಾಗಿ ಮನ್ನಣೆ ನೀಡಲಾಗುತ್ತಿದೆ. ಹಸುವಿನ ಗಂಜಲದಲ್ಲಿ ಚಿಕಿತ್ಸಕ ಗುಣಗಳಿವೆ ಎಂದು ಪ್ರತಿಪಾದಿಸುವ ಪ್ರಾಚೀನ ಗ್ರಂಥಗಳನ್ನು ಅಧಿಕೃತ ಸರ್ಕಾರಿ ಸುತ್ತೋಲೆಗಳಲ್ಲೇ ಉಲ್ಲೇಖಿಸಲಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ನಮ್ಮ ವಿಜ್ಞಾನ ಅಕಾಡೆಮಿಗಳು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಮಂಡಿಸುತ್ತಿವೆಯೇ? ವಿಜ್ಞಾನದ ಪರಿಸರವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕೆಲವು ದಿಟ್ಟ ಕ್ರಮಗಳನ್ನು ಕೈಗೊಂಡಿದ್ದರೂ, 1960ರ ನಂತರದಲ್ಲಿ ನಾವು ವಿಫಲವಾಗಿದ್ದೇವೆ. ಇದಕ್ಕೆ ಕಾರಣ, ನಮ್ಮ ದೇಶದ ನಾಯಕತ್ವದಲ್ಲಿ ನಿಯತಿ ಪ್ರಜ್ಞೆಯ ಕೊರತೆ ಇದೆ. ಇದು ಸಾಲದೆಂಬಂತೆ, ಭಾರತದ ವಿದ್ವತ್ ವಲಯವು ಆತ್ಮರತಿಯಲ್ಲೇ ಹೆಚ್ಚು ಆಸಕ್ತಿ ಹೊಂದಿರುವುದು ಮತ್ತು ನಿಯಮಬದ್ಧ ಅಧಿಕಾರಶಾಹಿಗೆ ಊಹೆಗೂ ನಿಲುಕದ ಮಟ್ಟಿಗೆ ಬದ್ಧರಾಗಿರುವುದೂ ಕಾರಣವಾಗಿದೆ.

ತಪ್ಪು ಮಾಹಿತಿಗಳ ದಾಳಿ

"ವಿಜ್ಞಾನ ಆಲೋಚನೆಯ ಮಾರ್ಗವೇ ಹೊರತು ಜ್ಞಾನದ ರಾಶಿ ಅಲ್ಲ" ಎಂದು ಕಾರ್ಲ್ ಸಗನ್ ಹೇಳುತ್ತಾರೆ. ವಿಜ್ಞಾನದ ಜಟಿಲತೆಗಳನ್ನು ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ಸರಳೀಕರಿಸಿ ಹೇಳುವುದೂ ಒಂದು ಕಲೆ. ಇದೇ ವೇಳೆ , ಸುಳ್ಳು ಸುದ್ದಿಗಳ ವಿರುದ್ಧ, ಒಳಸಂಚಿನ ತತ್ವಗಳ ವಿರುದ್ಧ, ಉತ್ಪಾದಿತ ಸತ್ಯಗಳ ವಿರುದ್ಧ ವೈಜ್ಞಾನಿಕ ನೆಲೆಯಲ್ಲಿ ಸಾಕ್ಷ್ಯಾಧಾರಗಳನ್ನು ಆಧರಿಸಿ ಜನಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸುವ ನಿಟ್ಟಿನಲ್ಲಿ ವಿಜ್ಞಾನವು ಒಂದು ತಾರ್ಕಿಕ ಕಾರ್ಯತಂತ್ರವಾಗಿ ನೆರವಾಗುತ್ತದೆ. ಭಾರತದ ಮಾಹಿತಿ ಕ್ರಾಂತಿಯ ಸಂದರ್ಭದಲ್ಲಿ ಇವುಗಳೇ ಪ್ರಮುಖ ತೊಡಕುಗಳಾಗಿವೆ. ಜಗತ್ತನ್ನು ವಕ್ರದೃಷ್ಟಿಯಿಂದ ನೋಡುವ ಅತಾರ್ಕಿಕತೆ ಹೊಸತೇನಲ್ಲ. ಆದರೆ ಈ ರೀತಿಯ ಮಾಹಿತಿಯ ಪ್ರಸರಣ ಮತ್ತು ಹರಡುವಿಕೆ ಅತಿವೇಗವಾಗಿ ನಡೆಯುತ್ತಿದ್ದು ಮಾಹಿತಿ ತಂತ್ರಜ್ಞಾನದ ಮೂಲಕ ಕ್ಷಣಮಾತ್ರದಲ್ಲಿ ಕೋಟ್ಯಂತರ ಜನರನ್ನು ತಲುಪುತ್ತದೆ. ತಪ್ಪು ಮಾಹಿತಿಗಳು ಪ್ರಜಾತಂತ್ರದ ಹಲವು ಅಂಶಗಳನ್ನು, ವಿಶೇಷವಾಗಿ ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಹೇಗೆ ಶಿಥಿಲಗೊಳಿಸುತ್ತದೆ ಎನ್ನುವುದನ್ನು ನಾವು ಕಂಡಿದ್ದೇವೆ.

ಹುಸಿ ವಿಜ್ಞಾನವನ್ನು ಪ್ರೋತ್ಸಾಹಿಸುವ ಮತ್ತು ಪ್ರಚೋದಿಸುವ ಅನೇಕ ಅರಿಯುವಿಕೆಯ ತಾರತಮ್ಯಗಳನ್ನು ನಾವು ಎದುರಿಸುತ್ತಿದ್ದೇವೆ. ಪಶ್ಚಿಮ ರಾಷ್ಟ್ರಗಳಲ್ಲಿ ಖ್ಯಾತ ವಿಜ್ಞಾನ ಸಂವಹನಕಾರರಾಗಿ ಪ್ರಸಿದ್ಧಿಯಾದ ಕಾರ್ಲ್ ಸಗನ್, ಸ್ಟೀಫನ್ ಹಾಕಿಂಗ್, ಸ್ಟಿವನ್ ವೀನ್ಬರ್ಗ್, ಸ್ಟೀಫನ್ ಜೆ ಗೋಲ್ಡ್, ಕಾರ್ಲೋ ರೊವೆಲ್ಲಿ, ರಿಚರ್ಡ್ ಡಾಕಿನ್ಸ್, ನೀಲ್ ಡಿಗ್ರಾಸ್ ಟೈಸನ್ ಮತ್ತು ಜಿಮ್ ಅಲ್ ಖಲೀಲಿ ಮುಂತಾದ ವಿಜ್ಞಾನಿಗಳು, ಭಾರತದ ಯಶ್ ಪಾಲ್, ಪುಷ್ಪಾ ಭಾರ್ಗವ, ಜಯಂತ್ ನಾರ್ಲಿಕರ್ ಮುಂತಾದ ವಿಜ್ಞಾನಿಗಳು ಒಂದೇ ಪ್ರಧಾನ ಆಲೋಚನೆಯ ಬಗ್ಗೆ ಹೆಚ್ಚು ಒತ್ತು ನೀಡುತ್ತಲೇ ಬಂದಿದ್ದಾರೆ. ವಿಜ್ಞಾನದಲ್ಲಿ ಅನುಸರಿಸಲಾಗುವ ಸಮಯ ಪ್ರಮಾಣಿತ ಮತ್ತು ಹೆಚ್ಚು ಯಶಸ್ವಿಯಾಗಿರುವ ಮಾರ್ಗಗಳನ್ನು ಬಳಸಿಕೊಂಡು ವಿಮರ್ಶಾತ್ಮಕ ಆಲೋಚನೆಯನ್ನು ಬೆಳೆಸಿಕೊಳ್ಳುವ ತಂತ್ರವನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಈ ವಿಜ್ಞಾನಿಗಳು ಹೆಚ್ಚು ಒತ್ತು ನೀಡುತ್ತಾರೆ.

ರಾಜಕಾರಣಿಗಳು ಮತ್ತು ಆಡಳಿತ ನಿರ್ವಹಣೆಕಾರರು ತಮ್ಮ ನಂಬಿಕೆಗಳು ವೈಜ್ಞಾನಿಕವಾಗಿ ನಿರೂಪಿತವಾದ ಸತ್ಯಕ್ಕೆ ದೂರವಾದುದು ಎಂದು ತಿಳಿದ ನಂತರವೂ ಅಂಧಶ್ರದ್ಧೆಯಿಂದ ಹೊರಬರಲು ನಿರಾಕರಿಸುವುದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ವಸ್ತುನಿಷ್ಠ ವಾಸ್ತವಗಳತ್ತ ನೋಡಲು ನಿರಾಕರಿಸುವುದನ್ನು ಮತ್ತು ತದ್ವಿರುದ್ಧವಾದ ಸಾಕ್ಷ್ಯಾಧಾರಗಳ ಹೊರತಾಗಿಯೂ ತಮ್ಮ ನಂಬಿಕೆಗಳಿಂದ ವಿಮುಖರಾಗದಿರುವುದನ್ನು ಹೇಗೆ ಅರ್ಥೈಸುವುದು? ಇತ್ತೀಚಿನ ದಿನಗಳಲ್ಲಿ ಕಡಿಮೆ ತಿಳುವಳಿಕೆ ಇರುವವರೇ ತಮ್ಮನ್ನು ತಾವು ತಜ್ಞರು ಎಂದು ಭಾವಿಸುವುದು ಕಂಡುಬರುತ್ತಿದೆ. ಇದಕ್ಕೆ ಕಾರಣ ಸ್ವಯಂ ಜಾಗೃತಿಯ ಕೊರತೆ ಮತ್ತು ಕಡಿಮೆ ಅರಿವಿನ ಸಾಮರ್ಥ್ಯ. ಇದಕ್ಕೆ ವ್ಯತಿರಿಕ್ತವಾಗಿ, ಕೆಲವು ವಿಚಾರಗಳ ಬಗ್ಗೆ ಹೆಚ್ಚು ತಿಳಿದುಕೊಂಡಷ್ಟೂ ಜನರು ಅನಿಶ್ಚಿತತೆಯಿಂದ ಕೂಡಿರುವುದೇ ಅಲ್ಲದೆ ಅನುಮಾನ ಪಿಶಾಚಿಗಳಂತಾಗುತ್ತಾರೆ.

75ನೆಯ ಸ್ವಾತಂತ್ರ್ಯೋತ್ಸವವನ್ನು ನಾವು ಕೇವಲ ಧ್ವಜಾರೋಹಣಕ್ಕೆ ಸೀಮಿತಗೊಳಿಸಬಾರದು. ನಮ್ಮ ಸಾಧನೆಗಳನ್ನು ವೈಭವೀಕರಿಸುತ್ತಾ, ಆತ್ಮರತಿಯಲ್ಲಿ ಮುಳುಗಿ ಭಾರತದ ಪ್ರಾಚೀನತೆಯನ್ನು ವೈಭವೀಕರಿಸುವುದರಲ್ಲಿ ತೊಡಗಿರಬಾರದು. ಬದಲಾಗಿ, ಭಾರತದ ಯಶಸ್ಸನ್ನು ವಿಮರ್ಶಾತ್ಮಕವಾಗಿ ಪರಾಮರ್ಶಿಸುವ ಮೂಲಕ, ವೈಫಲ್ಯಗಳನ್ನು ಗುರುತಿಸುವ ಮೂಲಕ ಉಜ್ವಲ ಭವಿಷ್ಯದತ್ತ ಸಾಗಬೇಕು. ವಿಜ್ಞಾನ ಮತ್ತು ವೈಜ್ಞಾನಿಕ ಅರಿವು ಈ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

(ಕೃಪೆ: The case of missing scientific Indian ದ ಹಿಂದೂ 24 ಆಗಸ್ಟ್ 2022 – ಲೇಖಕ ಸಿ.ಪಿ. ರಾಜೇಂದ್ರನ್ ಬೆಂಗಳೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ).



ಜನರ ಸಮಸ್ಯೆಗಳ ಪರಿಹಾರಕ್ಕೆ ಪರ್ಯಾಯ ನೀತಿಗಳಿಗೆ ಆಂದೋಲನ

ಮೋದಿ ಸರಕಾರ ಸಾರ್ವಜನಿಕ ವಲಯದ ಉದ್ಯಮಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸುತ್ತಿದೆ. 2014ರಿಂದೀಚೆಗೆ ಕೇಂದ್ರ ಸರಕಾರ ಸಾರ್ವಜನಿಕ ವಲಯದ 3.63 ಲಕ್ಷ ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳನ್ನು ಭಾಗಶಃ ಅಥವಾ ಪೂರ್ತಿಯಾಗಿ ಮಾರಾಟ ಮಾಡಿದೆ. ಇದರಿಂದ ಉದ್ಯೋಗ ನಷ್ಟ ಸಂಭವಿಸಿದೆ ಹಾಗೂ ಭಾರತೀಯ ಹಾಗೂ ವಿದೇಶಿ ಕಾರ್ಪೊರೇಟ್‌ಗಳ ಅದೃಷ್ಟ ಖುಲಾಯಿಸಿ ಅವರು ಇನ್ನಷ್ಟು ಸಿರಿವಂತರಾಗಿದ್ದಾರೆ. ಈ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸಿರುವ ಬಿಜೆಪಿ ಸರಕಾರ, ನ್ಯಾಷನಲ್ ಮಾನಿಟೈಸೇಶನ್ ಪೈಪ್‌ಲೈನ್ (ಎನ್‌ಎಂಪಿ) ಆರಂಭಿಸಿದೆ. ದೇಶದ ಮೂಲಸೌಕರ್ಯ ಆಸ್ತಿಗಳನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಮಾರಿ 6 ಲಕ್ಷ ಕೋಟಿ ರೂಪಾಯಿ ಗಳಿಸುವುದು ಇದರ ಉದ್ದೇಶವಾಗಿದೆ. ವಿದ್ಯುತ್ ತಿದ್ದುಪಡಿ ಮಸೂದೆ ಅಂಗೀಕಾರವಾದರೆ ವಿದ್ಯುತ್ ವಿತರಣೆ ವ್ಯವಸ್ಥೆ ಖಾಸಗೀಕರಣಗೊಳ್ಳುತ್ತದೆ ಹಾಗೂ ಅದರ ಪರಿಣಾಮವಾಗಿ ವಿದ್ಯುತ್ ದರಗಳಲ್ಲಿ ಭಾರಿ ಹೆಚ್ಚಳವಾಗುತ್ತದೆ.

—ಪ್ರಕಾಶ್ ಕಾರತ್

ಸೆಪ್ಟೆಂಬರ್ ಅಭಿಯಾನದತ್ತ...

ಬೆಲೆಯೇರಿಕೆ, ನಿರುದ್ಯೋಗ, ರೈತರು ಮತ್ತು ಕೃಷಿ ಕಾರ್ಮಿಕರ ಜೀವನೋಪಾಯ, ಖಾಸಗೀಕರಣ ಮತ್ತು ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಗಳ ವಿರುದ್ಧ ಮತ್ತು ಒಟ್ಟಾರೆಯಾಗಿ ಮೋದಿ ಸರ್ಕಾರದಿಂದ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನಡೆಯುತ್ತಿರುವ ದಾಳಿಗಳ ವಿಚಾರಗಳ ಸಹಿತ ದೇಶ ಎದುರಿಸುತ್ತಿರುವ ಪ್ರಮುಖ ವಿಷಯಗಳ ಮೇಲೆ ದೇಶಾದ್ಯಂತ ಸಾಮೂಹಿಕ ಪ್ರಚಾರಾಂದೋಲನ ನಡೆಸಲು ಸಿಪಿಐ (ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಸೆಪ್ಟೆಂಬರ್ 14ರಿಂದ 24ರವರೆಗೆ ನಡೆಯುವ ಆಂದೋಲನ ಜನರನ್ನು ಬಾಧಿಸುವ ಈ ವಿಚಾರಗಳು ಹಾಗೂ ಬೇಡಿಕೆಗಳು ಮತ್ತು ಈ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ಪರ್ಯಾಯ ನೀತಿಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಕೇರಳದ ಎಲ್‌ಡಿಎಫ್ ಸರಕಾರದ ಜನ–ಪರ ಪರ್ಯಾಯ ನೀತಿಗಳನ್ನೂ ಆಂದೋಲನ ಪ್ರಚಾರ ಮಾಡಲಿದೆ.

ಬೆಲೆಯೇರಿಕೆ ಸಮಸ್ಯೆ ಜನರನ್ನು ಅತಿಯಾಗಿ ಕಾಡುವ ಸಮಸ್ಯೆಯಾಗಿದೆ. ಆಗಸ್ಟ್‌ನ ಇತ್ತೀಚೆಗಿನ ಅಂಕಿಸಂಖ್ಯೆ ತೋರಿಸುವಂತೆ ಚಿಲ್ಲರೆ ಹಣದುಬ್ಬರ ದರ ಪುನಃ ಶೇಕಡ 7ನ್ನು ತಲುಪಿದೆ. ಸಗಟು ಹಣದುಬ್ಬರ ಶೇಕಡ 15ರ ಆಸುಪಾಸಿನಲ್ಲಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ತೆರಿಗೆಗಳ ಪರಿಣಾಮವಾದ ಪೆಟ್ರೋಲ್ ಮತ್ತು ಡೀಸೆಲ್‌ಗಳ ಹೆಚ್ಚಿನ ಬೆಲೆಗಳು ಏರುತ್ತಿರುವ ಹಣದುಬ್ಬರಕ್ಕೆ ಪ್ರಮುಖ ಕಾರಣವಾಗಿದೆ. ಸದ್ಯ ಕೇಂದ್ರ ಸರ್ಕಾರ ಒಂದು ಲೀಟರ್ ಪೆಟ್ರೋಲ್ ಮೇಲೆ 28 ರೂಪಾಯಿ ಹಾಗೂ ಡೀಸೆಲ್ ಮೇಲೆ 22 ರೂಪಾಯಿ ತೆರಿಗೆ ವಸೂಲಿ ಮಾಡುತ್ತಿದೆ. ಕಳೆದ ಎಪ್ರಿಲ್‌ನಲ್ಲಿ 10 ರೂಪಾಯಿ ಕಡಿಮೆ ಮಾಡಿದ ಮೇಲೂ ಇಷ್ಟೊಂದು ತೆರಿಗೆ ಮುಂದುವರಿದಿದೆ.

2021–22ರ ವಿತ್ತ ವರ್ಷದಲ್ಲಿ ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್‌ಗಳಿಂದ 4 ಲಕ್ಷ ಕೋಟಿ ರೂಪಾಯಿಗೂ ಅಧಿಕ ಹಣವನ್ನು ಸಂಗ್ರಹಿಸಿದೆ. ಕಾರ್ಪೊರೇಟ್ ಮತ್ತು ಅತಿ ಶ್ರೀಮಂತರ (ಕುಬೇರರು) ಮೇಲೆ ತೆರಿಗೆಯನ್ನು ಹೆಚ್ಚಿಸಲು ಮೋದಿ ಸರಕಾರ ನಿರಾಕರಿಸುತ್ತಿರುವುದು ಆದಾಯ ಹೆಚ್ಚಳಕ್ಕೆ ಪೆಟ್ರೋಲಿಯಂ ಉತ್ಪನ್ನಗಳನ್ನು ಅವಲಂಬಿಸುತ್ತಿರುವುದರ ಗುಟ್ಟಾಗಿದೆ. ಈ ವರ್ಗ ನೀತಿಯಿಂದಾಗಿ ಹೆಚ್ಚು ಆದಾಯ ಸೃಷ್ಟಿಸಲು ಜನರನ್ನು ಹಿಂಡಿಹಿಪ್ಪೆ ಮಾಡಲಾಗುತ್ತಿದೆ.

ಸತತವಾಗಿ ಏರುತ್ತಿರುವ ಬೆಲೆಗಳಿಂದ ಜನರಿಗೆ ಪರಿಹಾರ ಸಿಗಬೇಕಾದರೆ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ಮತ್ತು ಸರ್ಚಾರ್ಜ್‌ಅನ್ನು ಸರಕಾರ ವಾಪಸ್ ಪಡೆಯಬೇಕು. ಆಟಾ, ಹಾಲಿನ ಉತ್ಪನ್ನಗಳು ಮತ್ತಿತರ ಪ್ಯಾಕೇಜ್ಡ್ ಆಹಾರ ವಸ್ತುಗಳ ಮೇಲಿನ ಶೇಕಡ 5 ಜಿಎಸ್‌ಟಿಯನ್ನು ಕೂಡ ಸರ್ಕಾರ ವಾಪಸ್ ಪಡೆಯಬೇಕು.

ಸಾಕಷ್ಟು ಉದ್ಯೋಗ ಸೃಷ್ಟಿ ಮಾಡದಿರುವುದು ಮೋದಿ ಸರಕಾರದ ಕಳೆದ ಎಂಟು ವರ್ಷಗಳ ಅತಿ ದೊಡ್ಡ ವೈಫಲ್ಯವಾಗಿದೆ. ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಈ ಸರಕಾರ ಆಶ್ವಾಸನೆ ನೀಡಿತ್ತು. ವಿಶೇಷವಾಗಿ ಯುವಜನರ ಮಧ್ಯೆ ತೀವ್ರವಾದ ನಿರುದ್ಯೋಗವಿದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಇಕಾನಮಿ (ಸಿಎಂಐಇ) ಪ್ರಕಾರ 20–24 ವಯೋಗುಂಪಿನವರಲ್ಲಿ ನಿರುದ್ಯೋಗ ಪ್ರಮಾಣ ಆಘಾತಕಾರಿಯಾದ ಶೇಕಡ 42ರಷ್ಟು ಇದೆ. ಖಾಲಿಯಿರುವ ಸುಮಾರು 10 ಲಕ್ಷ ಕೇಂದ್ರ ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದು ಉದ್ಯೋಗಗಳನ್ನು ಸೃಷ್ಟಿಸಲು ಕೈಗೊಳ್ಳಬೇಕಾದ ತುರ್ತು ಕ್ರಮವಾಗಿದೆ. ನರೇಗಾ (ಎಂಜಿಎನ್‌ರೇಗಾ) ದಡಿ ಕೆಲಸ ಮಾಡಲು ಬಯಸುವ ಪ್ರತಿಯೊಬ್ಬರಿಗೂ ಉದ್ಯೋಗ ಕೊಡಬೇಕು. ಈ ವರ್ಷ ಎಪ್ರಿಲ್‌ನಿಂದ ಜುಲೈವರೆಗೆ ನರೇಗಾದಡಿ ಕೆಲಸ ಬಯಸಿದ 7.26 ಕೋಟಿ ಜನರ ಪೈಕಿ ಶೇಕಡ 20ರಷ್ಟು ಮಂದಿಗೆ, ಅಂದರೆ 1.47 ಕೋಟಿ ಜನರಿಗೆ ಕೆಲಸ ನಿರಾಕರಿಸಲಾಗಿದೆ. 2021–22ರಿಂದ ದೊಡ್ಡ ಪ್ರಮಾಣದ ಕೂಲಿ ಪಾವತಿ ಬಾಕಿಯಿದೆ. ಅದನ್ನು ಪಾವತಿಸಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸದ ದಿನ ಮತ್ತು ವೇತನವನ್ನು ಹೆಚ್ಚಿಸಬೇಕು. ಅದೇ ವೇಳೆ, ರಾಷ್ಟ್ರೀಯ ನಗರ ಉದ್ಯೋಗ ಖಾತರಿ ಕಾನೂನನ್ನು ಆದಷ್ಟು ಬೇಗ ಅಂಗೀಕರಿಸಬೇಕು.

ಮೋದಿ ಸರಕಾರ ಸಾರ್ವಜನಿಕ ವಲಯದ ಉದ್ಯಮಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸುತ್ತಿದೆ. 2014ರಿಂದೀಚೆಗೆ ಕೇಂದ್ರ ಸರಕಾರ ಸಾರ್ವಜನಿಕ ವಲಯದ 3.63 ಲಕ್ಷ ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳನ್ನು ಭಾಗಶಃ ಅಥವಾ ಪೂರ್ತಿಯಾಗಿ ಮಾರಾಟ ಮಾಡಿದೆ. ಇದರಿಂದ ಉದ್ಯೋಗ ನಷ್ಟ ಸಂಭವಿಸಿದೆ ಹಾಗೂ ಭಾರತೀಯ ಹಾಗೂ ವಿದೇಶಿ ಕಾರ್ಪೊರೇಟ್‌ಗಳ ಅದೃಷ್ಟ ಖುಲಾಯಿಸಿ ಅವರು ಇನ್ನಷ್ಟು ಸಿರಿವಂತರಾಗಿದ್ದಾರೆ. ಈ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸಿರುವ ಬಿಜೆಪಿ ಸರಕಾರ, ನ್ಯಾಷನಲ್ ಮಾನಿಟೈಸೇಶನ್ ಪೈಪ್‌ಲೈನ್ (ಎನ್‌ಎಂಪಿ) ಆರಂಭಿಸಿದೆ. ದೇಶದ ಮೂಲಸೌಕರ್ಯ ಆಸ್ತಿಗಳನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಮಾರಿ 6 ಲಕ್ಷ ಕೋಟಿ ರೂಪಾಯಿ ಗಳಿಸುವುದು ಇದರ ಉದ್ದೇಶವಾಗಿದೆ. ವಿದ್ಯುತ್ ತಿದ್ದುಪಡಿ ಮಸೂದೆ ಅಂಗೀಕಾರವಾದರೆ ವಿದ್ಯುತ್ ವಿತರಣೆ ವ್ಯವಸ್ಥೆ ಖಾಸಗೀಕರಣಗೊಳ್ಳುತ್ತದೆ ಹಾಗೂ ಅದರ ಪರಿಣಾಮವಾಗಿ ವಿದ್ಯುತ್ ದರಗಳಲ್ಲಿ ಭಾರಿ ಹೆಚ್ಚಳವಾಗುತ್ತದೆ.

ಸಾರ್ವಜನಿಕ ವಲಯದ ಮೇಲೆ ದಾಳಿ ಹಾಗೂ ಮಾಲಿಕರಿಗೆ ಹೈರ್ ಅಂಡ್ ಫೈರ್ ಹಕ್ಕು ನೀಡುವಂಥ ನಾಲ್ಕು ಕಾರ್ಮಿಕ ಸಂಹಿತೆಗಳ ಮೂಲಕ ದುಡಿಯುವ ವರ್ಗದ ಹಕ್ಕುಗಳ ಮೇಲಿನ ದಾಳಿಯು ವಸ್ತುಶಃ ಕಾರ್ಮಿಕ ಕಾನೂನು ಅನುಷ್ಠಾನ ವ್ಯವಸ್ಥೆಯನ್ನು ನಾಶ ಮಾಡಲಿದೆ. ಕೆಲಸದ ಅವಧಿಯಲ್ಲಿ ಹೆಚ್ಚಳ, ಕನಿಷ್ಠ ವೇತನ ನಿಗದಿ ವ್ಯವಸ್ಥೆ ಬದಾವಣೆ ಮತ್ತು ಸಂಘಟಿತ ಕಾರ್ಮಿಕರ ಮೇಲೆ ನಿರ್ಬಂಧ ಮೊದಲಾದವೂ ಈ ಸಂಹಿತೆಗಳಲ್ಲಿ ಸೇರಿವೆ.

ಸೆಪ್ಟೆಂಬರ್ ಪ್ರಚಾರಾಂದೋಲನವು ಖಾಸಗೀಕರಣದ ಅನಾಹುತಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಿದೆ. ಅದು ಹೇಗೆ ಜನರ ಮೂಲಭೂತ ಹಕ್ಕುಗಳನ್ನು ಕಸಿಯಲಿದೆ ಎಂಬುದನ್ನು ತಿಳಿಸಲಿದೆ. ಹಾಗೂ ಖಾಸಗೀಕರಣದ ವಿರುದ್ಧ ನಡೆಯುತ್ತಿರುವ ಹೋರಾಟಗಳಿಗೆ ಅವರ ಬೆಂಬಲವನ್ನು ಕ್ರೋಢೀಕರಿಸಲಿದೆ.

ಮೂರು ಕೃಷಿ ಕಾನೂನುಗಳ ವಾಪಸಾತಿಗೆ ಕಾರಣವಾದ ಐತಿಹಾಸಿಕ ರೈತ ಚಳವಳಿಯ ನಂತರವೂ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಆಧಾರ ಒದಗಿಸುವ ಮತ್ತು ಹೆಚ್ಚುತ್ತಿರುವ ಸಾಲದ ಹೊರೆಯ ಪ್ರಶ್ನೆ ಹಾಗೆಯೇ ಉಳಿದಿದೆ. ಕೃಷಿ ಕೂಲಿಕಾರರಿಗೆ ಕೂಲಿ ಕಡಿಮೆಯಾಗಿಯೇ ಇದೆ ಹಾಗೂ ಅವರಿಗೆ ಕೆಲಸ ಸಿಗುವ ಪ್ರಮಾಣವೂ ಕುಸಿದಿದೆ.

ಪ್ರಚಾರಾಂದೋಲನವು ರೈತರು ಮತ್ತು ಕೃಷಿ ಕೂಲಿಕಾರರ ಬೇಡಿಕೆಗಳನ್ನು ಕೂಡ ಒಳಗೊಂಡಿರುತ್ತದೆ. ಕೃಷಿಗೆ ಸರಕಾರದ ಬೆಂಬಲ ಮತ್ತು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಪ್ರಶ್ನೆಯೂ ಅದರಲ್ಲಿ ಸೇರಿವೆ.

ಮೋದಿ ಸರಕಾರದ ನವ–ಉದಾರವಾದಿ ನೀತಿಗಳಿಂದ ಈ ಎಲ್ಲ ಸಮಸ್ಯೆಗಳು ಉದ್ಭವಿಸಿವೆ; ಪ್ರಜಾಪ್ರಭುತ್ವ ಹಾಗೂ ನಾಗರಿಕರ ಜನತಾಂತ್ರಿಕ ಹಕ್ಕುಗಳ ಮೇಲಿನ ಪೂರ್ಣ ಪ್ರಮಾಣದ ದಾಳಿಗೂ ಅದಕ್ಕೂ ನೇರ ಸಂಬಂಧವಿದೆ. ಮೋದಿ ಸರಕಾರ ಬಲಪಂಥೀಯ ಆರ್ಥಿಕ ನೀತಿಗಳನ್ನು ಹಾಗೂ ಪೂರ್ಣ ಪ್ರಮಾಣದ ಸರ್ವಾಧಿಕಾರಿ ಆಡಳಿತದ ಮೂಲಕ ಕೋಮುವಾದಿ ಅಜೆಂಡಾವನ್ನು ಮುಂದೊತ್ತುತ್ತಿದೆ.

ನಾಗರಿಕರ ಪ್ರತಿಯೊಂದು ಹಕ್ಕು ಹಾಗೂ ನಾಗರಿಕ ಸ್ವಾತಂತ್ರ್ಯವನ್ನು ಕಾನೂನಿನ ಯಾವುದೇ ಭಯವಿಲ್ಲದೆ ಉಲ್ಲಂಘಿಸಲಾಗುತ್ತಿದೆ. ರಾಜಕೀಯ ಕಾರ್ಯಕರ್ತರು, ಸಾಮಾಜಿಕ ಹೋರಾಟಗಾರರು ಮತ್ತು ಪತ್ರಕರ್ತರನ್ನು ಯುಎಪಿಎ ಮತ್ತು ದೇಶದ್ರೋಹದ ಕಾನೂನಿನ ಅಂಶಗಳನ್ನು ಬಳಸಿ ಟಾರ್ಗೆಟ್ ಮಾಡಲಾಗುತ್ತಿದೆ. ಇ.ಡಿ., ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯಂಥ ಕೇಂದ್ರೀಯ ಸಂಸ್ಥೆಗಳನ್ನು ಪ್ರತಿಪಕ್ಷ ನಾಯಕರು ಮತ್ತು ಪ್ರತಿಪಕ್ಷ ಆಡಳಿತದ ರಾಜ್ಯಗಳ ವಿರುದ್ಧ ಬಳಸಲಾಗುತ್ತಿದೆ. ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಹಕ್ಕುಗಳು ದಾಳಿಗೊಳಗಾಗಿವೆ. ಸಂಸತ್ತಿನ ಘನತೆಯನ್ನು ಕುಂದಿಸಲಾಗುತ್ತಿದೆ. ಸಂಸತ್ತಿನ ಪ್ರತಿಪಕ್ಷ ಸದಸ್ಯರು ಯಾವುದೇ ವಿಷಯಗಳನ್ನು ಎತ್ತಲು ಹಾಗೂ ಮಾತನಾಡಲು ಸಾಧ್ಯವಿಲ್ಲವಾಗಿದೆ. ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ಬುಡಮೇಲು ಮಾಡುವ ಕೆಲಸ ಬಹಳ ವೇಗದಿಂದ ನಡೆಯುತ್ತಿದೆ. ಪ್ರಚಾರಾಂದೋಲನವು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಎಲ್ಲ ರಂಗಗಳಲ್ಲಿ ಪ್ರಜೆಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಗಮನ ಹರಿಸಲಿದೆ.

ದುಡಿಯುವ ಜನರ ಬೇಡಿಕೆಗಳನ್ನು ಮುಂದಿಟ್ಟು ಹಾಗೂ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವ ರಕ್ಷಣೆಗೆ ಕರೆ ಕೊಡುವುದರ ಜೊತೆಯಲ್ಲೇ ನವ–ಉದಾರವಾದಿ ಹಿಂದೂತ್ವ ಆಡಳಿತಕ್ಕೆ ಪರ್ಯಾಯವನ್ನೂ ಪಕ್ಷ ಮುಂದಿಡಲಿದೆ. ಕೇರಳದ ಎಲ್‌ಡಿಎಫ್ ಸರಕಾರದ ಕಳೆದ ಆರು ವರ್ಷಗಳ ದಾಖಲೆಯನ್ನು ಜನರ ಮುಂದಿಡಲಾಗುತ್ತದೆ. ಎಲ್‌ಡಿಎಫ್ ಹೇಗೆ ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸಿತು, ಸಾರ್ವಜನಿಕ ವಿತರಣೆ ವ್ಯವಸ್ಥೆಯ ಪರಿಣಾಮಕಾರಿ ಜಾರಿ ಹಾಗೂ ಮಾವೆಲಿ ಸ್ಟೋರ್ಸ್ ಜಾಲದ ಮೂಲಕ ದೇಶದ ಎಲ್ಲ ರಾಜ್ಯಗಳ ಪೈಕಿ ಕೇರಳದಲ್ಲಿ ಹಣದುಬ್ಬರ ಕಡಿಮೆಯಿರಲು ಹೇಗೆ ಕಾರಣವಾಯಿತು, ಎಲ್‌ಡಿಎಫ್ ಸರಕಾರ ಸಾರ್ವಜನಿಕ ಸ್ವಾಮ್ಯದ ಉದ್ಯಮಗಳನ್ನು ಹೇಗೆ ಪುನಶ್ಚೇತನಗೊಳಿಸುತ್ತಿದೆ, ಅವುಗಳನ್ನು ಮುಚ್ಚುವ ಬದಲು ಹೇಗೆ ನಡೆಸುತ್ತಿದೆ, ಕೈಗಾರಿಕಾ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು ಇಬ್ಬರಿಗೂ ಹೇಗೆ ಅತಿ ಹೆಚ್ಚು ಕನಿಷ್ಠ ಕೂಲಿಯನ್ನು ಕೇರಳ ಒದಗಿಸುತ್ತಿದೆ ಎಂಬುದನ್ನು ಆಂದೋಲನದಲ್ಲಿ ವಿವರಿಸಲಾಗುತ್ತದೆ.

ಬಿಜೆಪಿ ಮತ್ತು ಮೋದಿ ಸರಕಾರದ ವಿರುದ್ಧ ಪ್ರತಿಪಕ್ಷ ಒಗ್ಗಟ್ಟು ರೂಪಿಸುವ ಅಗತ್ಯ ಹೆಚ್ಚುತ್ತಿರುವ ಕಾಲಘಟ್ಟದಲ್ಲಿ ಸೆಪ್ಟೆಂಬರ್ ಆಂದೋಲನ ನಡೆಯುತ್ತಿದೆ. ಪ್ರತಿಪಕ್ಷಗಳಲ್ಲಿ ಒಗ್ಗಟ್ಟು ಮೂಡಿಸಲು ವಿವಿಧ ಪ್ರತಿಪಕ್ಷ ನಾಯಕರು ಪ್ರಯತ್ನಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅನೇಕ ಸಂಯುಕ್ತ ಹೋರಾಟಗಳು ನಡೆದಿರುವುದರಿಂದ ಬಿಜೆಪಿಗೆ ವಿರೋಧವಾಗಿ ಸಂಯುಕ್ತ ಪ್ರತಿಪಕ್ಷ ಅಗತ್ಯ ಎಂಬ ಅರಿವು ಹೆಚ್ಚಾಗುತ್ತಿದೆ. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನೇತೃತ್ವದಲ್ಲಿ ನಡೆದ ಸಂಯುಕ್ತ ಕಿಸಾನ್ ಚಳವಳಿ ಮತ್ತು ಕೇಂದ್ರೀಯ ಟ್ರೇಡ್ ಯೂನಿಯನ್‌ಗಳಿಂದ ಹೆಚ್ಚುತ್ತಿರುವ ಸಂಯುಕ್ತ ಪ್ರತಿರೋಧ ಮತ್ತು ನಾನಾ ರಾಜ್ಯಗಳಲ್ಲಿ ನಡೆಯುತ್ತಿರುವ ಸಂಯುಕ್ತ ಹೋರಾಟಗಳು ಸಂಯುಕ್ತ ಪ್ರತಿಪಕ್ಷ ಅಗತ್ಯ ಎನ್ನುವುದನ್ನು ಮನವರಿಕೆ ಮಾಡುವಲ್ಲಿ ಕೊಡುಗೆ ನೀಡಿವೆ.

ವಿವಿಧ ಜನ ವಿಭಾಗಗಳ ಜೀವನವನ್ನು ಬಾಧಿಸುವ ಪ್ರಶ್ನೆಗಳ ಮೇಲೆ ನಡೆಯುತ್ತಿರುವ ಹೋರಾಟಗಳಲ್ಲಿ ವಿಶಾಲ ಐಕ್ಯತೆ ರೂಪುಗೊಂಡರಷ್ಟೇ ಬಿಜೆಪಿ ವಿರುದ್ಧ ವಿಶಾಲವಾದ ಸಂಯುಕ್ತ ವೇದಿಕೆ ಕಟ್ಟುವ ಪ್ರಯತ್ನಗಳು ಯಶಸ್ವಿಯಾಗಬಹುದು. ಇವುಗಳು ಜನರ ಜೀವನೋಪಾಯ ಮತ್ತು ಆರ್ಥಿಕ ಪ್ರಶ್ನೆಗಳಿಗೆ ಮಾತ್ರವೇ ಸೀಮಿತವಾದ ವಿಚಾರಗಳಲ್ಲ. ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ರಕ್ಷಿಸುವ ವಿಶಾಲ ವೇದಿಕೆಗಳು ಬೆಳೆದು ಬರುವುದು ಅಗತ್ಯವಾಗಿದೆ. ಸೆಪ್ಟೆಂಬರ್ ಪ್ರಚಾರಾಂದೋಲನವು ಪಕ್ಷದ ಸ್ವತಂತ್ರ ಕಾರ್ಯಕ್ರಮವಾಗಿದ್ದು ವಿವಿಧ ವೇದಿಕೆಗಳಲ್ಲಿ ಜನರ ಒಗ್ಗಟ್ಟನ್ನು ಬೆಳೆಸುವಲ್ಲಿ ಕೊಡುಗೆ ನೀಡಲಿದೆ.

ಅನು: ವಿಶ್ವ

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ:
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಅಡೆತಡೆಯಿಲ್ಲದ ಅಭಿವೃದ್ಧಿ

ಕೇರಳದ ಸಮಸ್ತ ಜನವಿಭಾಗಗಳಿಗೆ ಎಲ್‌ಡಿಎಫ್ ಕಾರ್ಯಯೋಜನೆ

ಕೇರಳ ಅಭಿವೃದ್ಧಿಯ ಹೊಸ ಎತ್ತರಕ್ಕೆ ಏರುತ್ತಿದೆ. ಎಲ್.ಡಿ.ಎಫ್. ಸರ್ಕಾರವು ಮೂಲಸೌಕರ್ಯ ಅಭಿವೃದ್ಧಿ, ಸಾಮಾಜಿಕ ಭದ್ರತೆ ಮತ್ತು ಉದ್ಯೋಗ ಸೃಷ್ಟಿಯನ್ನು ಖಾತ್ರಿಪಡಿಸುವ ನೀತಿಗಳ ಮೂಲಕ ರಾಜ್ಯದ ಬೆಳವಣಿಗೆಯ ವೇಗವನ್ನು ಹೆಚ್ಚಿಸುತ್ತಿದೆ. ನಮ್ಮ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ದ್ವಿಮುಖ ಕಾರ್ಯತಂತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಒಂದು, ರಾಜ್ಯದ ದೀರ್ಘಾವಧಿಯ ಅಭಿವೃದ್ಧಿಗಾಗಿ ಉಪಕ್ರಮಗಳನ್ನು ಜಾರಿಗೊಳಿಸುವುದು. ಇನ್ನೊಂದು, ಸಂಕಷ್ಟದಲ್ಲಿರುವವರಿಗೆ ತಕ್ಷಣದ ಪರಿಹಾರವನ್ನು ಖಾತ್ರಿಗೊಳಿಸುವುದು.

ದೊಡ್ಡ ನಗರಗಳಲ್ಲಿ ಆಗಾಗ್ಗೆ ಅಭಿವೃದ್ಧಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲಾಗುತ್ತಿದ್ದರೆ, ಹಳ್ಳಿಗಳು ಮಾತ್ರ ಅಭಿವೃದ್ಧಿಯಲ್ಲಿ ಅಸ್ಪೃಶ್ಯವಾಗಿ ಉಳಿದಿವೆ. ಆದರೆ, ಕೇರಳದ ಸ್ಥಿತಿ ಭಿನ್ನವಾಗಿದೆ. ಸಾಮಾಜಿಕ ನ್ಯಾಯದಲ್ಲಿ ಆಳವಾಗಿ ಬೇರೂರಿರುವ ಪರ್ಯಾಯ ಅಭಿವೃದ್ಧಿ ಕಾರ್ಯಸೂಚಿಯನ್ನು ನಾವು ಅನುಷ್ಠಾನಗೊಳಿಸುತ್ತಿದ್ದೇವೆ. ಇದು ಜೀವನದ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ ಮತ್ತು ರಾಜ್ಯದ ಎಲ್ಲಾ ಪ್ರದೇಶಗಳನ್ನು ಒಳಗೊಂಡಿದೆ. ಹೀಗಾಗಿ, ಕೇರಳದಲ್ಲಿ, ಅಭಿವೃದ್ಧಿಯು ಸಮಾಜದ ಎಲ್ಲಾ ವರ್ಗಗಳನ್ನು ತಲುಪುತ್ತದೆ ಮತ್ತು ಪ್ರತಿಯೊಬ್ಬ ವ್ಯಕ್ತಿಯು ಅದರ ಪ್ರಯೋಜನಗಳನ್ನು ಪಡೆಯುತ್ತಾರೆ.

ಭಾರತೀಯ ರಾಜ್ಯಗಳು ತೀವ್ರ ಹಣಕಾಸಿನ ನಿರ್ಬಂಧಗಳನ್ನು ಹೊಂದಿವೆ. ಅವುಗಳು ಸ್ವಂತ ತೆರಿಗೆ ಆದಾಯವನ್ನು ನಿರ್ಮಿಸುವ ಸೀಮಿತ ಆಯ್ಕೆಗಳನ್ನು ಹೊಂದಿವೆ. ಅದರಲ್ಲಿ ಬಹುಪಾಲನ್ನು ಕೇಂದ್ರ ಸರ್ಕಾರ ಆವರಿಸಿಕೊಂಡಿದೆ. ಜಿಎಸ್‌ಟಿ ಜಾರಿಯ ಭಾಗವಾಗಿ ನೀಡಲಾಗಿದ್ದ ಪರಿಹಾರವನ್ನು ಜೂನ್ ವೇಳೆಗೆ ನಿಲ್ಲಿಸಲಾಗುವುದು. ರಾಷ್ಟ್ರದ ಆದಾಯದ ಹಂಚಿಕೊಳ್ಳಬಹುದಾದ ಸಂಚಯದಲ್ಲಿ ಕೇರಳದ ಪಾಲನ್ನು ಹಂತಹಂತವಾಗಿ ಕಡಿತಗೊಳಿಸಲಾಗುತ್ತಿದೆ. ಜನರ ಕಲ್ಯಾಣಕ್ಕಾಗಿ ಕೇಂದ್ರ ರೂಪಿಸಿರುವ ನೀತಿಗಳೂ ಇಳಿಮುಖವಾಗಿವೆ. ಇವೆಲ್ಲವೂ ರಾಜ್ಯದ ಉಳಿವು ಮತ್ತು ಪ್ರಗತಿಗೆ ಅಡಿಗಳಾಗಿವೆ.

ನಮ್ಮ ನಿರ್ಬಂಧಗಳು ನಮ್ಮ ಸಾಧ್ಯತೆಗಳನ್ನು ಮಿತಿಗೊಳಿಸಬಾರದು. ಅದನ್ನು ಖಚಿತಪಡಿಸಿಕೊಳ್ಳಲು, ನಮ್ಮ ಅಭಿವೃದ್ಧಿಯ ಉಪಕ್ರಮಗಳಿಗೆ ಸಹಾಯ ಮಾಡಲು ಪರ್ಯಾಯ ಮಾರ್ಗವಾಗಿ ಕಾರ್ಯನಿರ್ವಹಿಸಲು ಕೆಐಐಎಫ್‌ಬಿ ಯನ್ನು ಆಮೂಲಾಗ್ರವಾಗಿ ನವೀಕರಿಸಲಾಗಿದೆ. ಇದರ ಮೂಲಕ 50,000 ಕೋಟಿ ರೂ.ಗಳನ್ನು ಸಂಗ್ರಹಿಸುವುದು ಮತ್ತು ಖರ್ಚು ಮಾಡುವುದು ನಮ್ಮ ಹಿಂದಿನ ಅಧಿಕಾರಾವಧಿಯ 5 ವರ್ಷಗಳಲ್ಲಿ ನಮ್ಮ ಆರಂಭಿಕ ಗುರಿಯಾಗಿತ್ತು. ಈ ನವೀನ ಉಪಕ್ರಮಕ್ಕೆ ವಿವಿಧ ಮೂಲೆಗಳಿಂದ ವಿರೋಧಗಳ ಹೊರತಾಗಿಯೂ, ರೂ. ಉದ್ದೇಶಿತ ಕಾಲಮಿತಿಯಲ್ಲಿ 62,500 ಕೋಟಿ ರೂ.ಗಳ ಮೌಲ್ಯದ ಪ್ರಾಜೆಕ್ಟುಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ರಾಜ್ಯದಲ್ಲಿ ರಸ್ತೆಗಳು ಮತ್ತು ಸೇತುವೆಗಳನ್ನು ಸುಧಾರಿಸಲಾಗಿದೆ. ನಮ್ಮ ಸಾರ್ವಜನಿಕ ಆಸ್ಪತ್ರೆಗಳು ಮತ್ತು ಶಾಲೆಗಳಲ್ಲಿ ವಿಶ್ವದರ್ಜೆಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಸಾರ್ವಜನಿಕ ಶಾಲೆಗಳಲ್ಲಿ ಸುಧಾರಿತ ಸೌಲಭ್ಯಗಳೊಂದಿಗೆ, ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ತ್ವರಿತ ಹೆಚ್ಚಳವನ್ನು ಕಂಡಿತು. ಕೇರಳದ ಸಾರ್ವಜನಿಕ ಶಾಲೆಗಳಲ್ಲಿ ಸುಮಾರು 8 ಲಕ್ಷ ಮಕ್ಕಳು ಹೊಸದಾಗಿ ದಾಖಲಾಗಿದ್ದಾರೆ. ಈಗ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿಯೂ ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ಒದಗಿಸಲಾಗುತ್ತಿದೆ.



ಪಿಣರಾಯಿ ವಿಜಯನ್,
ಮುಖ್ಯಮಂತ್ರಿಗಳು ಕೇರಳ ಸರ್ಕಾರ

ರಾಜ್ಯದಲ್ಲಿ ಎಲ್ಲಾ ಅಭಿವೃದ್ಧಿ ಯೋಜನೆಗಳನ್ನು, ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ, ದೀರ್ಘಾವಧಿಯ ದೃಷ್ಟಿಯಿಂದ ಯೋಜಿಸಲಾಗಿದೆ ಮತ್ತು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುತ್ತದೆ. ಮುಂಬರುವ ಪೀಳಿಗೆಯ ಸಲುವಾಗಿ ಭವಿಷ್ಯದ ದೃಷ್ಟಿಕೋನದಿಂದ ಇದನ್ನು ಮಾಡಲಾಗುತ್ತಿದೆ. ಅದಕ್ಕಾಗಿಯೇ ನಮ್ಮ ಮೇಲಿನ ನಿರ್ಬಂಧಗಳ ನಡುವೆಯೂ ಕೇರಳವು ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗಾಗಿ ಭೂ ಸ್ವಾಧೀನದ ವೆಚ್ಚದ 25% ಅನ್ನು ಭರಿಸಲು ಒಪ್ಪಿಕೊಂಡಿತು. ಹಾಗೆ ಮಾಡುವ ಏಕೈಕ ರಾಜ್ಯ ಕೇರಳ, ಮತ್ತು ನಾವು 5,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚವನ್ನು ಭರಿಸುತ್ತಿದ್ದೇವೆ.

ಕೇರಳದ ಉದ್ದಗಲಕ್ಕೂ ಆಧುನಿಕ ಸಾರಿಗೆ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ. ವಿಮಾನ, ನೀರು, ರಸ್ತೆ ಮತ್ತು ರೈಲು ಸಾರಿಗೆ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಕಣ್ಣೂರು ವಿಮಾನ ನಿಲ್ದಾಣವನ್ನು ಹಿಂದಿನ ಅಧಿಕಾರಾವಧಿಯಲ್ಲಿ ಕಾರ್ಯಗತಗೊಳಿಸಲಾಯಿತು. ಕೋವಳಂನಿಂದ ಬೇಕಲ್ ವರೆಗಿನ ರಾಷ್ಟ್ರೀಯ ಜಲಮಾರ್ಗದ ಕೊನೆಯ ಹಂತದ ಚಟುವಟಿಕೆಗಳು ನಡೆಯುತ್ತಿವೆ. ಜಿಲ್ಲಾ ಮತ್ತು ಗ್ರಾಮೀಣ ರಸ್ತೆಗಳನ್ನು ಸಹ ನವೀಕರಿಸಲಾಗಿದೆ. ರೈಲ್ವೆ ಮಾರ್ಗಗಳ ದ್ವಿಗುಣಗೊಳಿಸುವಿಕೆ ವೇಗವಾಗಿ ಪ್ರಗತಿಯಲ್ಲಿದೆ. ಕೊಚ್ಚಿ ಮೆಟ್ರೋವನ್ನು ವಿಸ್ತರಿಸಲಾಗಿದೆ ಮತ್ತು ಕೊಚ್ಚಿ ವಾಟರ್ ಮೆಟ್ರೋ ಪ್ರಾಯೋಗಿಕ ಚಾಲನೆಯಲ್ಲಿದೆ.

ಕೆ-ರೈಲ್ ನ ಸಿಲ್ವರ್‌ಲೈನ್ ತಿರುವನಂತಪುರಂ ಮತ್ತು ಕಾಸರಗೋಡು ನಡುವೆ ಅರೆ-ಅತಿವೇಗದ ಸಂಪರ್ಕವನ್ನು ಒದಗಿಸುತ್ತದೆ. ಇದರ ಸಾಮಾಜಿಕ ಪರಿಣಾಮದ ಮೌಲ್ಯಮಾಪನದಂತಹ ಪ್ರಾಥಮಿಕ ಪ್ರಕ್ರಿಯೆಗಳು ನಡೆಯುತ್ತಿವೆ. ಡಿಪಿಆರ್ ಸಿದ್ಧಪಡಿಸುವ ಮುನ್ನ ಭೂತಾಂತ್ರಿಕ ತನಿಖೆ(ಜಿಯೋಟೆಕ್ನಿಕಲ್ ಇನ್ವೆಸ್ಟಿಗೇಷನ್), ಲಿಡಾರ್ ತಂತ್ರಜ್ಞಾನ ಬಳಸಿ ಟೊಪೊಗ್ರಾಫಿಕ್ ಸರ್ವೆ, ಸಾರಿಗೆ ದಟ್ಟಣೆ ಸರ್ವೆ ಮುಂತಾದವುಗಳನ್ನು ಈಗಾಗಲೇ ನಡೆಸಲಾಗಿದೆ. ಹೀಗೆ ಸಿಲ್ವರ್‌ಲೈನ್‌ನಿಂದ ಪ್ರಭಾವಿತವಾಗಿರುವ ನಿರ್ದಿಷ್ಟ ಪ್ರದೇಶಗಳು ಮತ್ತು ಕಟ್ಟಡಗಳನ್ನು ಗುರುತಿಸಲಾಗಿದೆ. ಸಾಮಾಜಿಕ ಪರಿಣಾಮದ ಮೌಲ್ಯಮಾಪನದಿಂದ ಈ ಯೋಜನೆಯ ನೇರ ಪರಿಣಾಮಕ್ಕೆ ಒಳಗಾಗುವವರನ್ನು ಗುರುತಿಸಲು ಮತ್ತು ಅದರ ನಿಖರವಾದ ಅಂದಾಜು ಮಾಡಲು ಉದ್ದೇಶಿಸಲಾಗಿದೆ.

ಸುರಕ್ಷಿತ, ವೇಗದ ಮತ್ತು ವೆಚ್ಚವುಳಿಸುವ ಸಾರಿಗೆ ವ್ಯವಸ್ಥೆಗಳು ಕೈಗಾರಿಕಾ ಅಭಿವೃದ್ಧಿಗೆ ವೇಗವರ್ಧಕಗಳಾಗಿ ಕಾರ್ಯನಿರ್ವಹಿಸುತ್ತವೆ. ಕೊಚ್ಚಿ ಮತ್ತು ಬೆಂಗಳೂರು ನಡುವೆ ಕೈಗಾರಿಕಾ ಕಾರಿಡಾರ್ ಅನ್ನು ರಚಿಸಲಾಗುತ್ತಿದೆ, ಇದು ಉದ್ಯೋಗಕ್ಕಾಗಿ ಹಲವಾರು ಮಾರ್ಗಗಳನ್ನು ತೆರೆಯುವ ನಿರೀಕ್ಷೆಯಿದೆ. ಕೊಚ್ಚಿ-ಮಂಗಳೂರು ಕೈಗಾರಿಕಾ ಕಾರಿಡಾರ್‌ಗೂ ಕೇರಳ ಅನುಮತಿ ಕೋರಿದೆ. ಚೆರ್ತಲದಲ್ಲಿರುವ ಮೆಗಾ ಫುಡ್ ಪಾರ್ಕ್‌ನಂತಹ ಕೈಗಾರಿಕಾ ಪಾರ್ಕ್‌ಗಳು ರಾಜ್ಯದ ವಿವಿಧ ಭಾಗಗಳಲ್ಲಿ ಬರಲಿವೆ.

ರಾಜ್ಯದ ವಿವಿಧ ಮಾಹಿತಿ ಪಾರ್ಕ್‌ಗಳನ್ನು ಸಂಪರ್ಕಿಸುವ ಐಟಿ ಕಾರಿಡಾರ್ ಶೀಘ್ರದಲ್ಲೇ ವಾಸ್ತವವಾಗಲಿದೆ. ವಿಜ್ಞಾನ ಪಾರ್ಕ್‌ಗಳು ಮತ್ತು ವೈಮಾನಿಕ-ಬಾಹ್ಯಾಕಾಶ ಮತ್ತು ರಕ್ಷಣಾ ಪಾರ್ಕ್‌ಗಳು ನಮ್ಮ ಪ್ರಮುಖ ವಿಮಾನ ನಿಲ್ದಾಣಗಳನ್ನು ಸಂಪರ್ಕಿಸುವ ರೀತಿಯಲ್ಲಿ ಬರುತ್ತಿವೆ. ತಿರುವನಂತಪುರದಲ್ಲಿ ಡಿಜಿಟಲ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ನಮ್ಮ ಪ್ರವಾಸೋದ್ಯಮ ಕ್ಷೇತ್ರವನ್ನು ವಿರಾಮ, ಸಾಹಸ, ಪರಂಪರೆ ಮತ್ತು ಆರೋಗ್ಯವನ್ನು ಸಂಯೋಜಿಸುವ ಸಾಧ್ಯತೆಗಳನ್ನು ಹೆಚ್ಚಿಸುವಂತೆ ಪ್ರೋತ್ಸಾಹಿಸುವ ಪ್ರಯತ್ನಗಳು ನಡೆಯುತ್ತಿವೆ.

ಕಿಫ್‌ಬಿ

ಕೆ-ರೈಲ್

ಕೆಎಎಸ್‌ಇ-ಕೌಶಲ ಅಭಿವೃದ್ಧಿ ಮಿಷನ್

ನಾವು ಇ-ವಾಹನಗಳ ಉತ್ಪಾದನೆಯತ್ತ ಸಾಗುತ್ತಿದ್ದೇವೆ. ಇವೆಲ್ಲವನ್ನೂ ಬೆಳವಣಿಗೆ ಮತ್ತು ವಿಸ್ತರಣೆಯತ್ತ ದೈತ್ಯ ದಾಪುಗಾಲುಗಳಾಗಿ ನೋಡಬೇಕು.

ಕೇರಳದ ಹೇರಳವಾದ ಮಾನವ ಸಂಪನ್ಮೂಲದಿಂದ ಉದ್ಯಮವು ಪ್ರಯೋಜನ ಪಡೆಯುವಂತಾಗಲು ನಾವು ಉನ್ನತ ಶಿಕ್ಷಣದಲ್ಲೂ ಗಮನ ಕೇಂದ್ರೀಕರಿಸುವ ಮಧ್ಯಪ್ರವೇಶಗಳನ್ನು ಮಾಡುತ್ತಿದ್ದೇವೆ. ಹೊಸ ಸಂಸ್ಥೆಗಳ ಸ್ಥಾಪನೆ, ಅಲ್ಪಾವಧಿ ಮತ್ತು ದೀರ್ಘಾವಧಿ ಕೋರ್ಸ್‌ಗಳ ಪರಿಚಯ, ಪಠ್ಯಕ್ರಮದ ಪರಿಷ್ಕರಣೆ, ಅನುದಾನ ಮತ್ತು ವಿದ್ಯಾರ್ಥಿವೇತನಗಳ ಸ್ಥಾಪನೆ, ಪ್ರಯೋಗಾಲಯಗಳು, ಗ್ರಂಥಾಲಯಗಳು, ಹಾಸ್ಟೆಲ್‌ಗಳಂತಹ ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳನ್ನು ಉತ್ತಮಪಡಿಸುವ ಪ್ರಯತ್ನಗಳು ಪ್ರಗತಿಯಲ್ಲಿದೆ. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮದ ಸಂಪರ್ಕವು ವಿಶೇಷ ಗಮನವನ್ನು ನೀಡುತ್ತಿರುವ ಕ್ಷೇತ್ರಗಳಾಗಿವೆ. ವಿದೇಶಿ ವಿದ್ಯಾರ್ಥಿಗಳೂ ಕೇರಳದ ಉನ್ನತ ಶಿಕ್ಷಣ ಸಂಸ್ಥೆಗಳತ್ತ ಆಕರ್ಷಿತರಾಗುವ ರೀತಿಯಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತಿದೆ.

ಕೇರಳದ ಯುವಕರಿಗೆ ಶಿಕ್ಷಣದ ಜೊತೆಗೆ ಉದ್ಯೋಗ ಕೌಶಲವನ್ನು ನೀಡಲು ಉದ್ದೇಶಿಸಿರುವ ಕೌಶಲ್ಯ(ಸ್ಕಿಲ್) ಪಾರ್ಕ್‌ಗಳನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಲಾಗುತ್ತಿದೆ. ಅಂತಹ ಕೌಶಲ್ಯ ಮತ್ತು ಉದ್ಯಮಗಳ ಸಂಪರ್ಕಗಳ ಮೂಲಕ ನಾವು



ಕೇರಳ ಲೈಫ್ ಮಿಷನ್

20 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಭರವಸೆ ಹೊಂದಿದ್ದೇವೆ. ನಮ್ಮ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಮೂಲಕ ಮತ್ತು ನಮ್ಮ ಸ್ಥಳೀಯ ಸಂಸ್ಥೆಗಳ ಸಹಾಯದಿಂದ ಇನ್ನೂ 20 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಪ್ರಯತ್ನಿಸಲಾಗಿದೆ. ಯುವಕರನ್ನು ಕೃಷಿಯತ್ತ ಆಕರ್ಷಿಸಲು, ಮೌಲ್ಯವರ್ಧನೆ ಖಚಿತಪಡಿಸಿಕೊಳ್ಳಲು, ಉಗ್ರಾಣ ಮತ್ತು ಶೈತ್ಯಾಗಾರ ಸೌಲಭ್ಯಗಳನ್ನು ಒದಗಿಸಲು, ಮಾರುಕಟ್ಟೆಗೆ ನೆರವು ನೀಡಲು ಮತ್ತು ಆ ಮೂಲಕ ನಮ್ಮ ರೈತರ ಆದಾಯವನ್ನು 50% ಹೆಚ್ಚಿಸಲು ವಿಶೇಷ ಮಧ್ಯಪ್ರವೇಶಗಳನ್ನು ಮಾಡಲಾಗುತ್ತಿದೆ.

ಕಳೆದ ಆರು ವರ್ಷಗಳಲ್ಲಿ ಕೇರಳದಲ್ಲಿ ಒಂದೇ ಒಂದು ಕ್ಷೇತ್ರ ಅಥವಾ ವಿಭಾಗವನ್ನು ಮುಟ್ಟದೆ ಬಿಟ್ಟಿಲ್ಲ. 'ಲೈಫ್ ಮಿಷನ್' ಮೂಲಕ ಮನೆಗಳು, ಭೂಮಿ ಹಕ್ಕು ಪತ್ರಗಳು, ಸಿಎಂಡಿಆರ್‌ಎಫ್ ಮೂಲಕ ನೆರವು ಎಲ್ಲವನ್ನೂ ದಾಖಲೆ ಸಂಖ್ಯೆಯಲ್ಲಿ ನೀಡಲಾಗುತ್ತಿದೆ ಇದರಿಂದ ನಮ್ಮ ಜನರ ಜೀವನದ ಭೌತಿಕ ಪರಿಸ್ಥಿತಿಗಳು ಸುಧಾರಿಸುತ್ತವೆ. ನಾವು ಸರ್ಕಾರಿ ಸೇವೆಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುತ್ತಿದ್ದೇವೆ. ಇದರಿಂದ ಜನರು ತಮ್ಮ ಮನೆಯಿಂದಲೇ ಅವುಗಳನ್ನು ಬಳಸಿಕೊಳ್ಳಬಹುದು. ನಮ್ಮ ಅಭಿವೃದ್ಧಿ ಮತ್ತು ಕಲ್ಯಾಣ ಉಪಕ್ರಮಗಳು ರಾಜ್ಯದ ಮೂಲೆ ಮೂಲೆಗಳನ್ನು ತಲುಪಲು ನಮ್ಮ ಸಮಾಜದ ಎಲ್ಲಾ ವರ್ಗಗಳ ಬೆಂಬಲ ಅತ್ಯಗತ್ಯ. ಸಮಸ್ತ ಕೇರಳೀಯರು ಅದರಿಂದ ಪ್ರಯೋಜನ ಪಡೆಯುತ್ತಾರೆ.

ಅಂತರ್ಜಾಲವನ್ನು ಮೂಲ ಹಕ್ಕಾಗಿಸಿದ ರಾಜ್ಯ



ಎಲ್‌ಡಿಎಫ್ ಸರ್ಕಾರ ರೂಪಿಸಿರುವ ಕೆ-ಫೋನ್ (ಕೇರಳ ಫೈಬರ್ ಆಪ್ಟಿಕ್ ನೆಟ್‌ವರ್ಕ್) ಕೇರಳದಲ್ಲಿ ಡಿಜಿಟಲ್ ಅಸಮಾನತೆಯನ್ನು ನಿವಾರಿಸಲು ಮತ್ತು ಕೈಗೆಟುಕುವ ದರದಲ್ಲಿ ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕವನ್ನು ಖಚಿತಪಡಿಸಿಕೊಳ್ಳಲು ಸಿದ್ಧವಾಗಿದೆ. 'ಒಂದು ಕ್ಷೇತ್ರದಲ್ಲಿ ನೂರು ಬಡವರ ಮನೆ' ಯೋಜನೆಯಲ್ಲಿ 4000 ಕುಟುಂಬಗಳಿಗೆ ಈಗ ಸಂಪರ್ಕ ನೀಡಲಾಗುವುದು. ಒಟ್ಟು 14,000 ಮನೆ ತಲುಪುತ್ತದೆ. ಅರ್ಹ ಕುಟುಂಬಗಳ ಪಟ್ಟಿಯನ್ನು ಸೆಪ್ಟೆಂಬರ್ 20 ರೊಳಗೆ ಕೆ-ಫೋನ್‌ಗೆ ಹಸ್ತಾಂತರಿಸಲಾಗುವುದು.

ಈಗಾಗಲೇ ಸರ್ಕಾರಿ ಕಚೇರಿಗಳಲ್ಲಿ ಅಳವಡಿಕೆ ಕಾರ್ಯ ಮುಗಿದಿದೆ. ಹಣಕಾಸಿನ ಗಳಿಕೆಗೆ ಸಂಬಂಧಿಸಿದಂತೆ ಸೇವೆಯನ್ನು ಒದಗಿಸಲು ಮಾನದಂಡಗಳು ಮತ್ತು ಕಾರ್ಯವಿಧಾನಗಳನ್ನು ರೂಪಿಸಲು ಕಾರ್ಯದರ್ಶಿ ಮಟ್ಟದ ಸಮಿತಿಯನ್ನು ಸಹ ರಚಿಸಲಾಗಿದೆ. ಯೋಜನೆಗೆ 476.41 ಕೋಟಿ ರೂ. ನೀಡಲಾಗಿದೆ. ಕೇರಳದ ಈ ಕನಸಿನ ಯೋಜನೆ ಪೂರ್ಣಗೊಂಡರೆ, 20 ಲಕ್ಷ ಹಿಂದುಳಿದ ಮನೆಗಳು ಮತ್ತು 30,000 ಸರ್ಕಾರಿ ಕಚೇರಿಗಳು ಉತ್ತಮ ಇಂಟರ್ನೆಟ್ ಸಂಪರ್ಕವನ್ನು ಪಡೆಯುತ್ತವೆ. ಇದರೊಂದಿಗೆ ಡಿಜಿಟಲ್ ಸೌಲಭ್ಯಗಳ ವಿಷಯದಲ್ಲಿ ಕೇರಳ ದೇಶದಲ್ಲೇ ಅತ್ಯುತ್ತಮ ರಾಜ್ಯವಾಗಲಿದೆ. ಕೆ-ಫೋನ್‌ಗಾಗಿ 8551 ಕಿಲೋಮೀಟರ್ ಮೂಲ ಕೇಬಲ್ ಮತ್ತು 26,410 ಕಿಲೋಮೀಟರ್ ಸಂಪರ್ಕ ಕೇಬಲ್‌ಗಳನ್ನು ಅಳವಡಿಸಲಾಗಿದೆ.

ಕೇರಳ ಮತ್ತೆ ಅತ್ಯಂತ ಕಡಿಮೆ ಬೆಲೆ ಏರಿಕೆಯ ರಾಜ್ಯ



ಬೆಲೆ ಏರಿಕೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಯಂತ್ರಿಸಿದ ರಾಜ್ಯವಾಗಿ ಕೇರಳ ಮತ್ತೆ ಹೊರಹೊಮ್ಮಿದೆ. ಕೇಂದ್ರ ಸರ್ಕಾರದ ಆಗಸ್ಟ್ ತಿಂಗಳ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ ಶೇ.7ರಷ್ಟು ಬೆಲೆ ಏರಿಕೆಯಾಗಿದೆ. ಆದರೆ ಕೇರಳದಲ್ಲಿ ಇದು ಶೇ.5.73 ಮಾತ್ರ. ಭಾರತದ 11 ರಾಜ್ಯಗಳಲ್ಲಿ ಬೆಲೆ ಏರಿಕೆ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ.

ಬಲಿಷ್ಠ ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಸಾರ್ವಜನಿಕ ಮಾರುಕಟ್ಟೆಯಲ್ಲಿ ಸರ್ಕಾರದ ಸಮರ್ಥ ಮಧ್ಯಪ್ರವೇಶದಿಂದ ಇದು ಸಾಧ್ಯವಾಗಿದೆ. ಸಪ್ಲೈಕೋ ಮೂಲಕ ಸಬ್ಸಿಡಿ ದರದಲ್ಲಿ ನೀಡುತ್ತಿರುವ 13 ಅಗತ್ಯ ವಸ್ತುಗಳ ಬೆಲೆಯನ್ನು ರಾಜ್ಯದಲ್ಲಿ ಆರು ವರ್ಷಗಳಿಂದ ಹೆಚ್ಚಿಸಿಲ್ಲ. ಓಣಂ ಋತುವಿನಲ್ಲಿ ಸರ್ಕಾರವು ಮಾರುಕಟ್ಟೆಯಲ್ಲಿ ಬಲವಾಗಿ ಮಧ್ಯಪ್ರವೇಶಿಸಿ ಬೆಲೆ ಏರಿಕೆಯನ್ನು ತಡೆಹಿಡಿಯಲು ಸಾಧ್ಯವಾಯಿತು.

ಒಂದು ವರ್ಷಕ್ಕೂ ಹೆಚ್ಚು ಕಾಲ ದೇಶದಲ್ಲೇ ಅತ್ಯಂತ ಕಡಿಮೆ ಹಣದುಬ್ಬರ ಹೊಂದಿರುವ ರಾಜ್ಯವಾಗಿರುವುದು ಎಡಪಕ್ಷಗಳು ದೇಶದ ಮುಂದಿಡುವ ಪರ್ಯಾಯ ಅಭಿವೃದ್ಧಿ ರಾಜಕಾರಣದ ಯಶಸ್ಸನ್ನು ಸಾಬೀತುಪಡಿಸುತ್ತದೆ ಎಂದು ರಾಜ್ಯದ ಹಣಕಾಸು ಮಂತ್ರಿ ಕೆ.ಎನ್. ಬಾಲಗೋಪಾಲ್ ಹೇಳಿದ್ದಾರೆ.

ಕೇರಳ ಸವಾರಿ-ರಾಜ್ಯ ಸರಕಾರದ ಒಡೆತನದ ಮೊದಲ ಅಗ್ರಿಗೇಟರ್

ರಾಜ್ಯ ಸರ್ಕಾರದ ಒಡೆತನದ ಭಾರತದ ಮೊದಲ ಆನ್‌ಲೈನ್ ಟ್ಯಾಕ್ಸಿ ಅಗ್ರಿಗೇಟರ್ ಕೇರಳದಲ್ಲಿ ಕಳೆದ ತಿಂಗಳು ಆರಂಭವಾಗಿದೆ.

ಕೇರಳ ಸವಾರಿ ಎಂದು ಹೆಸರಿಸಲಾದ ಉಬರ್ ಮಾದರಿಯ ಅಪ್ಲಿಕೇಶನ್ ಪ್ರಯಾಣಿಕರ ಸುರಕ್ಷತೆ ಮತ್ತು ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಸಮಂಜಸವಾದ ಸಂಭಾವನೆಯನ್ನು ನೀಡುತ್ತದೆ. ಪ್ರಾರಂಭದಲ್ಲಿ ಸುಮಾರು 541 ವಾಹನಗಳು – 321 ಆಟೋ ರಿಕ್ಷಾಗಳು ಮತ್ತು 228 ಕಾರುಗಳು ಈ ಸಾಹಸೋದ್ಯಮದ ಭಾಗವಾಗಿದೆ.

"ನ್ಯಾಯಯುತ ಸಂಭಾವನೆ ಪಡೆಯುವ ವಿಷಯದಲ್ಲಿ ಇದು ನಮಗೆ ಹೊಸ ಆರಂಭವಾಗಿದೆ. ಆದರೆ ಸರ್ಕಾರವು ಕೇವಲ 8 ಪ್ರತಿಶತದಷ್ಟು ಸೇವಾ ಶುಲ್ಕವನ್ನು ನಿಗದಿಪಡಿಸಿದೆ, ಇದು ಚಾಲಕನಿಗೆ ಆಕರ್ಷಕವಾಗಿದೆ ಮತ್ತು ಗ್ರಾಹಕರಿಗೂ ಕೈಗೆಟಕುವಂತೆ ಮಾಡುತ್ತದೆ " ಎಂದು ಉಬರ್ ಮತ್ತು ಓಲಾಗೆ ಕಾರುಗಳನ್ನು ಓಡಿಸುತ್ತಿದ್ದ ಚಾಲಕ ಹೇಳುತ್ತಾರೆ.

ಇತರ ಆನ್‌ಲೈನ್ ಟ್ಯಾಕ್ಸಿಗಳು ವಿಧಿಸುವ ಶೇಕಡಾ 20–30 ಕ್ಕೆ ಹೋಲಿಸಿದರೆ 'ಕೇರಳ ಸವಾರಿ'ಯ ಸೇವಾ ಶುಲ್ಕ ಕಡಿಮೆ ಎಂದು ಸರ್ಕಾರ ಹೇಳಿದೆ. ಇದನ್ನು ಪ್ರಾರಂಭಿಸುವ ಮೊದಲು ಎಲ್ಲಾ ಕಾರ್ಮಿಕರಿಗೆ ತಂತ್ರಜ್ಞಾನ ಮತ್ತು ಸೇವಾ ಅಂಶಗಳ ಬಗ್ಗೆ ಸರಿಯಾದ ತರಬೇತಿ ನೀಡಲಾಗಿದೆ.



ರಾಜ್ಯ ಕಾರ್ಮಿಕ ಇಲಾಖೆಯ ಅಡಿಯಲ್ಲಿ ಮೋಟಾರು ಕಾರ್ಮಿಕರ ಕಲ್ಯಾಣ ಮಂಡಳಿಯು ಈ ಸಾಹಸವನ್ನು ಮುನ್ನಡೆಸುತ್ತಿದೆ, ಪಾಲಕ್ಕಾಡ್‌ನಲ್ಲಿರುವ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ಐಟಿಐ) ತಾಂತ್ರಿಕ ಅಂಶಗಳನ್ನು ನಿರ್ವಹಿಸುತ್ತಿದೆ. "ನಾವು ಮೊದಲ ದಿನದಿಂದಲೇ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆಗಳನ್ನು ಪಡೆಯುತ್ತಿದ್ದೇವೆ. ಅಸ್ತಿತ್ವದಲ್ಲಿರುವ ಆನ್‌ಲೈನ್ ಸೇವೆಗಳಿಗಿಂತ ಉತ್ತಮ ವೇತನವನ್ನು ಖಾತ್ರಿಪಡಿಸುವ ಮೂಲಕ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಲಕ್ಷಾಂತರ ಜನರ ಆರ್ಥಿಕ ಉನ್ನತಿ ರಾಜ್ಯ ಸರ್ಕಾರದ ಗುರಿಯಾಗಿದೆ" ಎಂದು ಕೇರಳ ಮೋಟಾರು ಸಾರಿಗೆ ಕಾರ್ಮಿಕರ ಕಲ್ಯಾಣ ನಿಧಿ ಮಂಡಳಿಯ ಸಜೀವ್ ಕುಮಾರ್ ವಿ ಹೇಳಿದರು. ಮೊದಲಿಗೆ ಇದು ತಿರುವನಂತಪುರದಲ್ಲಿ ಆರಂಭವಾಗಿದೆ. ಮುಂದೆ ಇದನ್ನು ಎರ್ನಾಕುಳಂ, ಕೊಹಿಕ್ಕೋಡ್, ಕೊಲ್ಲಂ, ಕಣ್ಣೂರು ಮತ್ತು ತ್ರಿಶೂರ್‌ಗೆ ವಿಸ್ತರಿಸಲಾಗುವುದು ಎನ್ನಲಾಗಿದೆ.

ಬಳ್ಳಾರಿ ಮೆಡಿಕಲ್ ಕಾಲೇಜು ಆಸ್ಪತ್ರೆ ದುರಂತ: ಆಳವಾದ ತನಿಖೆಗೆ ಮತ್ತು ಕಠಿಣ ಕ್ರಮ ಜರುಗಿಸಲು ಸಿಪಿಐ(ಎಂ) ಒತ್ತಾಯ

ವಿಜಯ ನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (VIMMS) ವಿದ್ಯುತ್ ಇಲ್ಲದ ಕಾರಣ ತುರ್ತು ಚಿಕಿತ್ಸಾ ವಿಭಾಗ ದಲ್ಲಿ ರೋಗಿಗಳು ಸಾವುನಪ್ಪಿರುವ ಘಟನೆ ಯನ್ನು ಆಳವಾದ ತನಿಖೆಗೆ ಒಳಪಡಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಬಳ್ಳಾರಿ ತಾಲೂಕು ಸಮಿತಿಯು ಸರಕಾರವನ್ನು ಆಗ್ರಹಿಸಿದೆ.

ಬಳ್ಳಾರಿ ನಗರದಲ್ಲಿರುವ ವಿಮ್ಸ್ ಗೆ ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ಮತ್ತು ಸುತ್ತ ಇರುವ ಮೂರು ನಾಲ್ಕು ಜಿಲ್ಲೆ ಗಳಿಂದಲೂ ನೂರಾರು ಸಾಮಾನ್ಯ ಬಡ ಕುಟುಂಬಗಳ ರೋಗಿಗಳು ವೈದ್ಯಕೀಯ ಚಿಕಿತ್ಸೆಗಾಗಿ ವಿಮ್ಸ್ ಗೆ ಬಂದು ಚಿಕತ್ಸೆ ಪಡೆಯುತ್ತಿದ್ದಾರೆ.

ಈ ಬುಧವಾರ ದಿನ 5 ಗಂಟೆಗಳಿಗೂ ಹೆಚ್ಚು ಸಮಯ ವಿದ್ಯುತ್ ಸರಬರಾಜು ನಿಂತಿದೆ ಮತ್ತು ಅಲ್ಲಿರುವ ಹಳೆಯ ವಿದ್ಯುತ್ ಜನರೇಟರ್ ಕಾರ್ಯ ನಿರ್ವಹಿಸದ ಕಾರಣ ತುರ್ತು ವಿಭಾಗದಲ್ಲಿ ವೆಂಟಿಲೇಟರ್ ಮೇಲೆ ಇರುವ ಮೂರು ರೋಗಿಗಳುಗೆ ಆಕ್ಸಿಜನ್ ಸರಬರಾಜು ಆಗದೇ ಮರಣ ಹೊಂದಿದ್ದಾರೆ ಎಂದು ಆರೋಪ ಕೇಳಿ ಬರುತ್ತಿದೆ.

ಆದರೆ ವಿಮ್ಸ್ ನ ನಿರ್ದೇಶಕರು ಅವರು ಕಾಯಿಲೆಗಳಿಂದ ಮರಣ ಹೊಂದಿದ್ದಾರೆ ಎಂದು ದುರ್ಘಟನೆಯನ್ನು ಮುಚ್ಚಿ ಹಾಕಲು ಪ್ರಯತ್ನ ಪಡುತ್ತಿದ್ದಾರೆ.

ಗಿಟಛ ನ ಕಟ್ಟಡ ಹಳೆಯ ದಾಗಿದ್ದು ದುರಸ್ಥಿ ಮಾಡಲು ಮುಂದಾಗುಬೇಕು ಮತ್ತು ವಿದ್ಯುತ್ ಜನರೇಟರ್ ಗಳು ಹಳೆಯವಾಗಿರುವುದರಿಂದ ಸರಿ ಯಾಗಿ ಕೆಲಸ ಮಾಡದೇ ಇದ್ದ ಕಾರಣ ಈ ದುರಂತ ನಡೆದಿದೆ. ಅಧಿಕಾರಿ ಗಳ ಬೇಜಾಬ್ದಾರಿ ಯಿಂದ ಸೂಕ್ತವಾಗಿ ಕಾರ್ಯ ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲ ವಾಗಿದೆ. ಇದಕ್ಕೆ ಕಾರಣರಾದ ಎಲ್ಲರ ಮೇಲೆ ಕೂಡಲೇ ಕಠಿಣ ಕ್ರಮವನ್ನು ಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇವೆ. ಈ ಕುರಿತು ಜಿಲ್ಲಾಡಳಿತದ ಹೊಣೆಗಾರಿಕೆ ಇರುವ ಮಾನ್ಯ ಜಿಲ್ಲಾಧಿಕಾರಿಗಳು ಕೂಡಲೇ ಮುಂದಾಗ ಬೇಕೆಂದು ಸಿಪಿಎಂ ಒತ್ತಾಯಿಸಿದೆ.

ಈ ಘಟನೆ ಬಗ್ಗೆ ಬಿಗಿಯಾದ ಸೂಕ್ತ ತನಿಖೆ ನಡಸಿ ನಿರ್ಲಕ್ಷ ವಹಿಸಿರುವಂತಹ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಅಲ್ಲದೇ ಆಸ್ಪತ್ರೆಯ ಕಟ್ಟಡವನ್ನು ದುರಸ್ಥಿ ಮಾಡುವುದು ಮತ್ತು ಹೊಸ ವಿದ್ಯುತ್ ಜನರೇಟರ್ ಗಳನ್ನು ಕೂಡಲೇ ಖರೀದಿ ಮಾಡಲು ಕ್ರಮ ವಹಿಸಬೇಕೆಂದು ಒತ್ತಾಯಿಸಿದೆ.

ಕೂಡಲೇ ತುರ್ತು ಕ್ರಮ ವಹಿಸಿ ಹೊರ – ಒಳ ರೋಗಿಗಳಿಗೆ ಸುರಕ್ಷತೆ ನೀಡಬೇಕೆಂದು ಮನವಿ ಮಾಡಲಾಗಿದೆ. ಹಾಗೆಯೇ ಮರಣ ಹೊಂದಿರುವ ರೋಗಿಗಳ ಕುಟುಂಬಕ್ಕೆ ಇಪ್ಪತ್ತೈದು ಲಕ್ಷ ರೂ.ಗಳ ಪರಿಹಾರ ನೀಡಬೇಕು ಎಂದು ಅಗ್ರಹಿಸಿದೆ.

ಇಲ್ಲಿ ಉಸ್ತುವಾರಿ ಸಚಿವರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳ ಪಾತ್ರ ಬಹಳ ಮುಖ್ಯವಿದೆ. ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳದಿದ್ದರೆ ಸಿಪಿಎಂ ಪಕ್ಷ ಹೋರಾಟಕ್ಕೆ ಇಳಿಯುತ್ತದೆ ಎಂದು ಈ ಮೂಲಕ ಎಚ್ಚರಿಸಿದೆ.

ಮಂಗಳೂರಿನಲ್ಲಿ ಸಂತ ಮದರ್‌ತೆರೇಸಾರ 25ನೇ ಸಂಸ್ಮರಣಾ ದಿನ

ಬಹುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ, ಪ್ರಜಾಪ್ರಭುತ್ವ ಭಾರತದ ಸಂವಿಧಾನದ ಮೂಲ ಆಶಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶ ಎಚ್.ಎನ್.ನಾಗಮೋಹನ ದಾಸ್ ಹೇಳಿದ್ದಾರೆ.

ಅವರು ಸಪ್ಟೆಂಬರ್ 9 ರಂದು ಮಂಗಳೂರಿನಲ್ಲಿ ಸಂತ ಮದರ್ ತೆರೇಸಾರ 25ನೇ ಸಂಸ್ಮರಣೆ ದಿನದ ಪ್ರಯುಕ್ತ ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಈ ಮೌಲ್ಯಗಳಿಗೆ ಧಕ್ಕೆಯಾಗುವ ಘಟನೆಗಳು ದೇಶದಲ್ಲಿ ನಡೆಯುತ್ತಿವೆ. ಬದುಕಿಗೆ ಅಗತ್ಯವಾದ ವಿಷಯಗಳ ಬಗ್ಗೆ ಹೆಚ್ಚು ಚರ್ಚೆಗಳಾಗದೆ ಭಾವನಾತ್ಮಕ ವಿಚಾರಗಳ ಬಗ್ಗೆ ಚರ್ಚೆಗಳಾಗುತ್ತಿವೆ ಎಂದರು.

ಧರ್ಮದಲ್ಲಿ ಪ್ರಜಾಪ್ರಭುತ್ವದ ಮೌಲ್ಯ ಇಲ್ಲದೆ ಇದ್ದಾಗ ಮೂಲಭೂತವಾದ ಬೆಳೆಯುತ್ತದೆ. ಧರ್ಮದ ಜೊತೆ ರಾಜಕಾರಣ ಬೆರೆತುಕೊಂಡಾಗ ಕೋಮುವಾದ ಬೆಳೆಯುತ್ತದೆ. ಇದನ್ನು ಅರ್ಥ ಮಾಡಿಕೊಂಡಾಗ ಮಾತ್ರ ಸಂವಿಧಾನದಲ್ಲಿ ಪ್ರಸ್ತಾಪಿಸಲಾದ ಜಾತ್ಯಾತೀತ ಪದವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು ನ್ಯಾ.ನಾಗಮೋಹನದಾಸ್ ನುಡಿದರು.

ಇಂದು ಸುಶಿಕ್ಷಿತರ ಸಂಖ್ಯೆ ಹೆಚ್ಚಿದೆ. ಆದರೆ ಸಮಾಜದಲ್ಲಿ ನೈತಿಕ ಮೌಲ್ಯಗಳು ಬಹಳಷ್ಟು ಕೆಳಮಟ್ಟಕ್ಕೆ ಕುಸಿದಿವೆ. ಸಹಿಷ್ಣುತೆಯ ಜಾಗದಲ್ಲಿ ಅಸಹಿಷ್ಣುತೆ ದೇಶಾದ್ಯಂತ ವ್ಯಾಪಿಸಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಮದರ್ ತೆರೆಸಾ ಮನುಕುಲದ ಸೇವೆಗಾಗಿ ತಮ್ಮ ಸಮಸ್ತ ಬದುಕನ್ನು ಮುಡಿಪಾಗಿಟ್ಟವರು. ಇತರರ ನೋವುಗಳಿಗೆ ಕಷ್ಟಗಳಿಗೆ ಸ್ಪಂದಿಸುತ್ತಾ ಇತರರಿಗಾಗಿಯೇ ಬದುಕುವವರು ಸತ್ತರೂ ನಮ್ಮ ಜೊತೆ ಬದುಕಿರುತ್ತಾರೆ ಎಂದರು.

ಬಹುತ್ವ ಭಾರತದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಬಗ್ಗೆ ಮತ್ತು ಮಾನವೀಯ ಸೇವೆಗಳ ಸವಾಲುಗಳ ಬಗ್ಗೆ ಚಿಂತಕಿ ಪಲ್ಲವಿ ಇಡೂರು ವಿಷಯ ಮಂಡಿಸಿದರು. ಫಾ.ಜೆ.ಬಿ.ಸಲ್ಡಾನ ಮತ್ತು ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರತಿಕ್ರಿಯೆ ನೀಡಿದರು. ಸಂತ ಮದರ್ ತೆರೆಸಾ ವಿಚಾರ ವೇದಿಕೆಯ ಅಧ್ಯಕ್ಷ ರೋಯ್ ಕ್ಯಾಸ್ಟಲಿನೋ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮ ಸಂಯೋಜಕ ರೂಪೇಶ್ ಮಾಡ್ತಾ ಸ್ವಾಗತಿಸಿದರು. ಡಾ.ಕೃಷ್ಣಪ್ಪ ಕೊಂಚಾಡಿ ವಂದಿಸಿದರು. ಸುನಿಲ್ ಕುಮಾರ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು.

ಬೃಹತ್ ರಾಜಕೀಯ ಸಮಾವೇಶ ನಿಜ ಪರ್ಯಾಯ ರೂಪಿಸುವುದರತ್ತ......

ಪುಟ 5 ರಿಂದ

ಸರಕಾರದ ಭ್ರಷ್ಠಾಚಾರವು ಮುಗಿಲು ಮುಟ್ಟಿದೆ. ಸ್ವತಃ ರಾಜ್ಯದ ಗುತ್ತಿಗೆದಾರರ ಸಂಘವು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಗುತ್ತಿಗೆ ಕೆಲಸದಲ್ಲಿನ ಶೇ 40 ಲಂಚವನ್ನು ನಿಲ್ಲಿಸಲು ಬಹಿರಂಗವಾಗಿ ಮನವಿ ಮಾಡಿದೆ. ಇದರಿಂದಾಗಿ ಮತ್ತು ಗುತ್ತಿಗೆ ಕೆಲಸದಲ್ಲಿ ಹೂಡಿದ ಬಂಡವಾಳ ವಾಪಾಸು ಬಾರದೆ ಉಂಟಾದ ಸಾಲದ ಬಾಧೆಗೆ ರಾಜ್ಯದ ಇಬ್ಬರು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪ್ರಸಂಗದಿಂದ ಮಂತ್ರಿ ಈಶ್ವರಪ್ಪರವರನ್ನು ಮಂತ್ರಿ ಮಂಡಲದಿಂದ ಹೊರ ಹಾಕಲಾಗಿದೆ. ಎಸ್.ಐ. ಗಳ ನೇಮಕಾತಿ, ಕೆಪಿಎಸ್ ಸಿ ಪರೀಕ್ಷಾ ಫಲಿತಾಂಶದ ಭ್ರಷ್ಠಾಚಾರ ಮುಂತಾದ ಹಗರಣಗಳ ಸ್ಫೋಟ ರಾಜ್ಯದ ಮಾನವನ್ನು ಹರಾಜು ಮಾಡಿವೆ.

ಈ ಎಲ್ಲವೂ ರಾಜ್ಯದ ಜನತೆಯನ್ನು ಅಪಾರವಾಗಿ ಬಾಧಿಸಿವೆ. ಇವುಗಳ ಜೊತೆ ಕಳೆದ ಐದು ವರ್ಷಗಳಲ್ಲಿ ಒಂದು ಬಾರಿ ಬರಗಾಲ ಮತ್ತು ಮೂರು ಬಾರಿ ಅತೀವೃಷ್ಠಿ ಹಾಗೂ ಪ್ರವಾಹಗಳು, ಸುಮಾರು ಎರಡೂವರೆ ವರ್ಷಗಳ ಕಾಲ ಕೋವಿಡ್ ಗಳು ರಾಜ್ಯದ ಜನತೆಯನ್ನು ಬಾಧಿಸಿವೆ ಮತ್ತು ಅಗತ್ಯವಸ್ತುಗಳ ವ್ಯಾಪಕವಾದ ನಿರಂತರ ಬೆಲೆ ಏರಿಕೆಗಳು ಜನತೆಯ ಗಾಯದ ಮೇಲೆ ಬರೆಗಳನ್ನು ಎಳೆದಿವೆ.

ಇಂತಹ ದುರಿತ ಕಾಲದಲ್ಲಿ ವಿರೋಧ ಪಕ್ಷಗಳಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ತಮ್ಮ ಶಕ್ತಿ ಹಾಗೂ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ರಾಜ್ಯದ ಜನತೆಯ ರಕ್ಷಣೆಗೆ ನಿಲ್ಲದೇ, ಸರಕಾರದ ಅಸಂತೃಪ್ತಿ ತಾನಾಗಿಯೇ ತಮಗೆ ಲಾಭ ನೀಡಲಿವೆಯೆಂಬ ಲೆಕ್ಕಾಚಾರದಿಂದಲೇ ಜನತೆಯ ರಕ್ಷಣೆಗೆ ಮುಂದಾಗದಿರುವುದನ್ನು ಕಾಣುತ್ತಿದ್ದೇವೆ.

ಆದ್ದರಿಂದ, ಈ ಸಂದರ್ಭದಲ್ಲಿ ರಾಜ್ಯದ ಜನತೆಯ ನೈಜ ಪ್ರಶ್ನೆಗಳನ್ನು ನೇಪಥ್ಯಕ್ಕೆ ತಳ್ಳುವ ಕುತಂತ್ರವನ್ನು ಸೋಲಿಸಲು ಮತ್ತು ಜನರ ನೈಜ ಪ್ರಶ್ನೆಗಳನ್ನು ಮುನ್ನೆಲೆಗೆ ತರುವ ಮತ್ತು ಜನತೆಯ ಸಂಕಷ್ಠಗಳಿಗೆ ನೈಜ ಪರಿಹಾರದ ಕ್ರಮಗಳನ್ನು ಜನತೆಯ ಮುಂದಿಡುವ ಸದುದ್ದೇಶದಿಂದ ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಪಕ್ಷ ಬೃಹತ್ ರಾಜಕೀಯ ಸಮಾವೇಶವನ್ನು ಸಂಘಟಿಸಿದೆ.

ಮುಂಬರುವ ಚುನಾವಣೆಯಲ್ಲಿ ಜನತೆ ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕುವ ಪ್ರಧಾನ ಕರ್ತವ್ಯಗಳನ್ನು ನಿಭಾಯಿಸಬೇಕಾಗಿದೆ. ಅದೇ ರೀತಿ, ಕಾರ್ಪೊರೇಟ್ ಕಂಪನಿಗಳ ಲೂಟಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸ್ವತಂತ್ರ ಹಾಗೂ ಜಂಟಿ ಚಳುವಳಿಗಳನ್ನು ಬಲಗೊಳಿಸಿಕೊಳ್ಳ ಬೇಕಾಗಿದೆ.

ರಾಜ್ಯದಲ್ಲಿ ಶಾಂತಿ, ಕೋಮು ಸೌಹಾರ್ದತೆಯನ್ನು, ಸಂವಿಧಾನ ಬದ್ಧತೆಯನ್ನು ಕಾಪಾಡಿಕೊಳ್ಳುತ್ತಲೇ ವಿಧಾನ ಸಭೆಯಲ್ಲಿ ಜನ ಧ್ವನಿಯನ್ನು, ಜನ ಪರ್ಯಾಯಗಳನ್ನು ಸಮರ್ಥವಾಗಿ ಮೊಳಗಿಸಲು ಸಿಪಿಐ(ಎಂ) ಹಾಗೂ ಎಡ ಪಕ್ಷಗಳ ಕೆಲವರನ್ನಾದರೂ ಮತ್ತು ಜಾತ್ಯಾತೀತ, ಪ್ರಗತಿಪರ ಶಕ್ತಿಗಳನ್ನು ಆಯ್ಕೆ ಮಾಡುವ ಕರ್ತವ್ಯವನ್ನು ನಿಭಾಯಿಸಬೇಕಾಗಿದೆ.

ಸಿಪಿಐ(ಎಂ) ಪಕ್ಷವು ಜನತೆ ಈ ಕರ್ತವ್ಯ ಮೆರೆಯಲು ಅಗತ್ಯ ಹಕ್ಕೊತ್ತಾಯಗಳನ್ನು ಮತ್ತು ಪರಿಹಾರದ ಹಾದಿಯ ಕ್ರಮಗಳನ್ನು ಜನತೆಯ ಮುಂದಿಟ್ಟು ಎಡ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಜನತೆಯ ಜೊತೆ ಬೆರೆಯಲಿದೆ. ಈ ಪ್ರಕ್ರಿಯೆಯನ್ನು ರಾಜ್ಯದ ಎಲ್ಲಾ ಪ್ರಗತಿಪರ ಶಕ್ತಿಗಳು ಬೆಂಬಲಿಸುವುದು ಮತ್ತು ಬಲಗೊಳಿಸುವುದು ಅಗತ್ಯವಾಗಿದೆ.

ಪ್ರತಿಷ್ಠಿತ ಮ್ಯಾಗ್ಸೆಸೆ ಪುರಸ್ಕಾರವನ್ನು ಶೈಲಜಾ ಟೀಚರ್ ನಿರಾಕರಿಸಿರುವುದೇಕೆ?

ಕೇರಳದ ಮಾಜಿ ಆರೋಗ್ಯ ಮಂತ್ರಿ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಶೈಲಜಾ ಟೀಚರ್ ರವರಿಗೆ ಏಷ್ಯಾಖಂಡದ ಈ ಪ್ರತಿಷ್ಠಿತ ಪ್ರಶಸ್ತಿ ಬಂದಿರುವುದಕ್ಕಿಂತ ಹೆಚ್ಚಾಗಿ ಅದನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿದ ಅವರ ನಡೆಯೇ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿದೆ. ಕೆಲವು ಪತ್ರಿಕೆಗಳು ಇದು ಸಿಪಿಐ(ಎಂ)ನ ಎರಡನೇ "ಚಾರಿತ್ರಿಕ ಪ್ರಮಾದ" ಎನ್ನುವ ಮಟ್ಟಕ್ಕೆ ಹೋಗಿವೆ.

ಮಾಧ್ಯಮಗಳವರು ಆಗಲೇ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರನ್ನು ಈ ಬಗ್ಗೆ ಪ್ರಶ್ನಿಸಿದ್ದಾರೆ. ಅದಕ್ಕೆ ಉತ್ತರಿಸುತ್ತ ಯೆಚುರಿಯವರು ಶೈಲಜಾರವರು ಪ್ರಶಸ್ತಿ ನಿರಾಕರಿಸಲು ಮೂರು ಕಾರಣಗಳಿವೆ ಎಂದಿದ್ದಾರೆ- ಮೊದಲನೆಯದಾಗಿ, ಈ ಪ್ರಶಸ್ತಿ ನೀಡಿರುವುದು ಕೇರಳದ ಎಲ್‌ಡಿಎಫ್ ಸರಕಾರ ಕೊವಿಡ್ ಮಹಾಸೋಂಕಿನ ಸಮಯದಲ್ಲಿ ಆಹಾರ ಮೂಲರಚನೆಗಳನ್ನು ನಿರ್ವಹಿಸಿದ ರೀತಿಗಾಗಿ, ಇದು ಒಬ್ಬರು ವ್ಯಕ್ತಿಯ ಸಾಧನೆಯಲ್ಲ, ಸಾಮೂಹಿಕ ಸಾಧನೆ; ಎರಡನೆಯದಾಗಿ, ಈ ಪ್ರಶಸ್ತಿಯನ್ನು ಯಾವುದೇ ಸಕ್ರಿಯ ರಾಜಕೀಯ ಮುಖಂಡರಿಗೆ ಕೊಡಲಾಗುತ್ತಿಲ್ಲ, ಆದರೆ ಶೈಲಜಾ ಸಿಪಿಐ(ಎಂ)ನ ಅತ್ಯುನ್ನತ ಅಂಗವಾದ ಕೇಂದ್ರ ಸಮಿತಿಯ ಸದಸ್ಯರು ಮತ್ತು ಮೂರನೆಯದಾಗಿ ಮ್ಯಾಗ್ಸೆಸೆ ಫಿಲಿಪ್ಪೈನ್ಸ್ ದೇಶದಲ್ಲಿ ಕಮ್ಯುನಿಸ್ಟರನ್ನು ಕ್ರೂರವಾಗಿ ದಮನ ಮಾಡಿದ ಚರಿತ್ರೆ ಉಳ್ಳವರು.

ಮ್ಯಾಗ್ಸೆಸೆ ದಮನದ ಚರಿತ್ರೆ

ಇಲ್ಲಿ ಚರಿತ್ರೆಯ ಪ್ರಸ್ತಾಪ ಮಾಧ್ಯಮಗಳಲ್ಲೂ ಬಂದಿರುವುದರಿಂದ, ಸಹಜವಾಗಿ ಈ ಪ್ರಶಸ್ತಿಯ ಹಿನ್ನೆಲೆಯಲ್ಲಿರುವ ಚರಿತ್ರೆಯನ್ನು ನೆನಪಿಸಿಕೊಳ್ಳುವುದು ಅಗತ್ಯವಾಗಿದೆ.

ಇದು ನ್ಯೂಯಾರ್ಕಿನ 1957ರಲ್ಲಿ ನ್ಯೂಯಾರ್ಕಿನ ರಾಕ್‌ಫೆಲ್ಲರ್ ಬ್ರದರ್ಸ್ ಫಂಡ್ 1954–57ರ ಅವಧಿಯಲಿ ಫಿಲಿಪ್ಪೈನ್ಸ್ ಅಧ್ಯಕ್ಷರಾಗಿದ್ದ ರೆಮೊನ್ ಮ್ಯಾಗ್ಸೆಸೆ ನೆನಪಿನಲ್ಲಿ ಫಿಲಿಪ್ಪೈನ್ಸ್ ಸರಕಾರದ ಒಪ್ಪಿಗೆಯೊಂದಿಗೆ ಆರಂಭಿಸಿದ ಟ್ರಸ್ಟ್ ಕೊಡುವ ಪ್ರಶಸ್ತಿ.

ರಮೊನ್ ಮ್ಯಾಗ್ಸೆಸೆ 1950ರಲ್ಲಿ ಫಿಲಿಪ್ಪೈನ್ಸ್ ದೇಶದ ರಕ್ಷಣಾ ಕಾರ್ಯದರ್ಶಿಯಾಗಿದ್ದವರು ಮತ್ತು 1953ರಲ್ಲಿ ಅಲ್ಲಿಯ ಅಧ್ಯಕ್ಷರಾಗಿ ಚುನಾಯಿತರಾಗಿ 1957 ರಲ್ಲಿ ವಿಮಾನ ಅಪಘಾತದಲ್ಲಿ ನಿಧನರಾದರು. 1953ರಲ್ಲಿ ಅವರು ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದಾಗ ಅಮೆರಿಕಾದ ಟೈಮ್ ಪತ್ರಿಕೆ "ಹಲವು ರೀತಿಗಳಲ್ಲಿ.. ಮ್ಯಾಗ್ಸೆಸೆ ವಿಜಯ ಒಂದು ಅಮೆರಿಕನ್ ವಿಜಯ.. ರಮೊನ್ ಮ್ಯಾಗ್ಸೆಸೆ ಒಬ್ಬ ಅಮೆರಿಕಾದ ಹುಡುಗ ಎಂಬುದು ಗುಟ್ಟೇನಲ್ಲ" ಎಂದಿತ್ತು.

ಹೌದು, ಅದು ಎಲ್ಲರಿಗೂ ತಿಳಿದಿದ್ದ ಗುಟ್ಟು.

ಪೂರ್ವ ಏಷ್ಯಾದಲ್ಲಿ ಕಮ್ಯುನಿಸ್ಟ್ ಅಲೆ ಅಡಗಿಸಲು

ಎರಡನೇ ಮಹಾಯುದ್ಧದ ವೇಳೆಯಲ್ಲಿ ಮತ್ತು ನಂತರ ಫಿಲಿಪ್ಪೈನ್ಸ್ ಸೇರಿದಂತೆ ಪೂರ್ವ ಏಷ್ಯಾದಲ್ಲಿ ಒಂದು ಕಮ್ಯುನಿಸ್ಟ್ ಪರ ಅಲೆ ಎದ್ದು ಬಂದಿತ್ತು. ಇದು ಬಹುಪಾಲು ಜಪಾನೀ ಅತಿಕ್ರಮಣಕ್ಕೆ ಪ್ರತಿರೋಧವಾಗಿ ಆರಂಭವಾಗಿ ಮುಂದೆ ಸ್ಥಳೀಯ ಭೂಮಾಲಕರ ವಿರುದ್ಧ ಮತ್ತು ಅವರಿಗೆ ಬೆಂಬಲವಾಗಿ ನಿಂತ ಅಮೆರಿಕನ್ ಆಳರಸರ ವಿರುದ್ಧ ರೈತರ ಹೋರಾಟವಾಗಿ ಮಾರ್ಪಟ್ಟುದರ ಪರಿಣಾಮವಾಗಿತ್ತು.

ಫಿಲಿಪ್ಪೈನ್ಸ್ ನಲ್ಲಿ 1942ರಲ್ಲಿ ಆರಂಭವಾದ ಹುಕ್ಬಲಹಾಪ್ (ಅಂದರೆ ಜಪಾನೀಯರ ವಿರುದ್ಧ ಜನತಾ ಸೇನೆ) ಅಥವ ಸಂಕ್ಷಿಪ್ತವಾಗಿ ಹುಕ್ ಬಂಡಾಯ 1954ರಲ್ಲಿ ಮ್ಯಾಗ್ಸೆಸೆ ಅಧ್ಯಕ್ಷ ಹುದ್ದೆಯನ್ನು ವಹಿಸುವ ವೇಳೆಗೆ ಹತ್ತಿಕ್ಕಲ್ಪಟ್ಟಿತು. ಬಹುಪಾಲು ರೈತರೇ ಇದ್ದ ಈ ಜನತಾ ಸೇನೆಗೆ ನೇತೃತ್ವ ನೀಡುತ್ತಿದ್ದವರು ಕಮ್ಯುನಿಸ್ಟರು. ಈ ಪ್ರತಿರೋಧವನ್ನು ಹತ್ತಿಕ್ಕುವುದಕ್ಕಾಗಿಯೇ ನೇಮಿಸಲ್ಪಟ್ಟಿದ್ದ ಸಿಐಎ ಏಜೆಂಟ್ ಎಡ್ವರ್ಡ್ ಲಾನ್ಸ್‌ಡೇಲ್ ಈ ಕೆಲಸಕ್ಕೆ ಮ್ಯಾಗ್ಸೆಸೆಯವರನ್ನು ಆರಿಸಿಕೊಂಡವರು.

1950ರಲ್ಲಿ ಮ್ಯಾಗ್ಸೆಸೆಯವರನ್ನು ಅಮೆರಿಕನ್ ಒತ್ತಡಕ್ಕೆ ಒಳಗಾಗಿ ಆಗಿನ ಅಧ್ಯಕ್ಷ ಕ್ವಿರಿನೊ ರಾಷ್ಟ್ರೀಯ ರಕ್ಷಣಾ ಕಾರ್ಯದರ್ಶಿಯ ಹುದ್ದೆಗೆ ನೇಮಿಸಿದರು. ಮ್ಯಾಗ್ಸೆಸೆ ಅಮೆರಿಕನ್ ಆಳುವ ಮಂದಿಗಾಗಿ ತನ್ನ ದೇಶದ ರೈತರ ಬಂಡಾಯವನ್ನು ಹತ್ತಿಕ್ಕುವ ಕೆಲಸಕ್ಕೆ ಮುಂದಾದರು. ಇದಕ್ಕಾಗಿ ಅವರು ತನ್ನ ಪಡೆಗಳಿಗೆ ನೀಡಿದ ಕುಖ್ಯಾತ ಧ್ಯೇಯವಾಕ್ಯ ನಾಲ್ಕು 'ಎಫ್'ಗಳು- ಫೈಂಡ್ ದೆಮ್-ಫೂಲ್ ದೆಮ್-ಫೈಟ್ ದೆಮ್- ಫಿನಿಶ್ ದೆಮ್'. ಇಲ್ಲಿ ದೆಮ್ ಅಥವ ಅವರು ಎಂದರೆ ಹುಕ್ ಬಂಡಾಯಗಾರರು, ಮುಖ್ಯವಾಗಿ ನೇತೃತ್ವ ನೀಡುತ್ತಿದ್ದ ಕಮ್ಯುನಿಸ್ಟರು. 1951ರ ವೇಳೆಗಾಗಲೇ 1363 ಹುಕ್‌ಗಳನ್ನು ಸಾಯಿಸಲಾಯಿತು, ಇನ್ನೂ ಸಾವಿರಾರು ಮಂದಿಯನ್ನು ಜೈಲಿಗಟ್ಟಲಾಯಿತು, ಇಲ್ಲವೇ ದಾಖಲೆ ಸಿಗದಂತೆ ಕೊಂದು ಹಾಕಲಾಯಿತು ಎನ್ನಲಾಗಿದೆ. ಇಂತಹ ವ್ಯಕ್ತಿ ಪಾಶ್ಚಿಮಾತ್ಯ ಮಾಧ್ಯಮಗಳ ಮತ್ತು ಆಳುವ ವರ್ಗಗಳ ಕಣ್ಮಣಿಯಾದುದರಲ್ಲಿ ಆಶ್ಚರ್ಯವೇನು?

ಈ ಸಿಐಎ ಏಜೆಂಟ್ ಎಡ್ವರ್ಡ್ ಲಾನ್ಸ್‌ಡೇಲನನ್ನು ಮುಂದೆ 1960ರ ದಶಕದಲ್ಲಿ ವಿಯೆಟ್ನಾಂನಲ್ಲಿ ಅದೇ ಕೆಲಸ ಮಾಡಲು ಸೈಗಾನಿಗೆ ಕಳಿಸಲಾಯಿತು. ಆದರೆ ಅಲ್ಲಿ ಆತನಿಗೆ ಇನ್ನೊಬ್ಬ ಮ್ಯಾಗ್ಸೆಸೆ ಸಿಗಲಿಲ್ಲ ಎಂಬುದು ಈಗ ಚರಿತ್ರೆ.

ಈ ಚರಿತ್ರೆ ತಿಳಿದಿರುವವರಿಗೆ ಈಗ ಶೈಲಜಾ ಟೀಚರ್ ಆತನ ಹೆಸರಿನ ಪ್ರಶಸ್ತಿಯನ್ನು ನಿರಾಕರಿಸಿರುವ ಬಗ್ಗೆ ಆಶ್ಚರ್ಯವೇನೂ ಆಗಿಲ್ಲ.

ಒಂದು ವೇಳೆ ಶೈಲಜಾ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದರೆ ಏನಾಗುತ್ತಿತ್ತು?

ಮಾಧ್ಯಮಗಳಲ್ಲಿನ ಈ ಚರಿತ್ರೆ ತಿಳಿದಿದ್ದ ಮಂದಿ ಸಿಪಿಐ(ಎಂ) ಮೇಲೆ ಮುಗಿ ಬೀಳುತ್ತಿದ್ದರು ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ.ಆರ್. ರಾಮ್‌ಕುಮಾರ್. ಸಿಪಿಐ(ಎಂ) ಫಿಲಿಪ್ಪೈನ್ಸ್ ಕಮ್ಯುನಿಸ್ಟರ ನೆನಪಿಗೆ ಅಪಚಾರ, ವಿಶ್ವಾಸಘಾತ ಬಗೆದಿದೆ ಎಂದೆಲ್ಲಾ ಹೇಳುತ್ತಿದ್ದರು. ಮಲೆಯಾಳಂ ಪತ್ರಿಕೆಗಳವರು ಫಿಲಿಪ್ಪೈನ್ಸ್‌ಗೂ ಹೋಗಿ ಅಲ್ಲಿ ಆ ಕಮ್ಯುನಿಸ್ಟರ ಮೊಮಕ್ಕಳನ್ನು ಭೇಟಿ ಮಾಡಿ ಸರದರ್ಶನಗಳನ್ನೂ ಪ್ರಕಟಿಸುತ್ತಿದ್ದರು ಎನ್ನುತ್ತಾರೆ ಪ್ರೊ. ರಾಮ್ ಕುಮಾರ್.



ಹುಕ್ಬಲಹಾಪ್ ಬಂಡಾಯಗಾರರು



ಐಎ ಏಜೆಂಟ್ ಎಡ್ವರ್ಡ್ ಲಾನ್ಸ್‌ಡೇಲ್ ನೊಂದಿಗೆ ಮ್ಯಾಗ್ಸೆಸೆ

"ಚುನಾವಣೆ ಗೆಲ್ಲಲು ಸಂಘ ಪರಿವಾರದಿಂದ ದೇಶಾದ್ಯಂತ ಬಾಂಬ್ ಸ್ಫೋಟಗಳು" – ನಾಂದೇಡ್ ಕೋರ್ಟಿಗೆ ಮಾಜಿ ಆರೆಸ್ಸೆಸ್ಸಿಗ ಯಶವಂತ ಶಿಂಧೆ ಅಫಿಡವಿಟ್

ಮಹಾರಾಷ್ಟ್ರದ ಮಾಜೀ ಆರೆಸ್ಸೆಸ್ ಮುಖಂಡ ಯಶವಂತ ಶಿಂಧೆ ಆಗಸ್ಟ್ 29ರಂದು ನಾಂದೇಡ್ ಸೆಷನ್ಸ್ ಕೋರ್ಟಿನಲ್ಲಿ ಒಂದು ಸ್ಫೋಟಕ ಅಫಿಡವಿಟ್ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ. ಇದರ ಪ್ರಕಾರ ದೇಶಾದ್ಯಂತ 2000ದಿಂದ ನಡೆದಿರುವ ಹಲವು ಬಾಂಬ್ ಸ್ಫೋಟಗಳು ವಾಸ್ತವವಾಗಿ ಸಂಘ ಪರಿವಾರದ ಕೃತ್ಯಗಳು, ಅದರ ಹಿಂದಿದ್ದ ಉದ್ದೇಶ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲಲು ನೆರವಾಗುವುದು. 2014 ರವರೆಗೆ ಅದು ಯಶಸ್ವಿಯಾಗಲಿಲ್ಲ. ಆದರೆ ಬಾಂಬ್ ಸ್ಫೋಟ ನಡೆಸಲು ಯುವಜನರಿಗೆ ತರಬೇತಿ ನೀಡುವ ಶಿಬಿರಗಳು ಮುಂದುವರೆದವು, ಪರಿಣಾಮವಾಗಿ ದೇಶದಲ್ಲಿ ಹಲವು ಬಾಂಬ್ ಸ್ಫೋಟಗಳು ನಡೆದವು. ಅವಕ್ಕೆ ಪಕ್ಷಪಾತಿ ಪೋಲೀಸರು ಮತ್ತು ಮಾಧ್ಯಮಗಳ ನೆರವಿನಿಂದ ಮುಸ್ಲಿಮರನ್ನು ದೂಷಿಸಲಾಯಿತು. ಅಂತಿಮವಾಗಿ ಇವು 2014ರಲ್ಲಿ ಬಿಜೆಪಿಗೆ ಚುನಾವಣೆಗಳಲ್ಲಿ ನೆರವಾದವು ಎಂಬುದು ಅವರ ಅಫಿಡವಿಟ್‌ನಿಂದ ತಿಳಿದು ಬರುವ ಸಂಗತಿ.

16 ವರ್ಷಗಳ ಹಿಂದೆ ನಾಂದೇಡ್‌ನಲ್ಲಿ ಒಂದು ಸ್ಫೋಟದಲ್ಲಿ ಇಬ್ಬರು ಮೃತ ಪಟ್ಟರು. ಅವರು ಸಂಘ ಪರಿವಾರದ ಕಾರ್ಯಕರ್ತರು ಎನ್ನಲಾಗಿತ್ತು. ಈ ಸ್ಫೋಟದ ಕೇಸಿನಲ್ಲಿ ತನ್ನನ್ನು ಸಾಕ್ಷಿಯಾಗಿ ಸೇರಿಸಬೇಕು ಎಂದು ನ್ಯಾಯಾಲಯವನ್ನು ಯಶವಂತ ಶಿಂಧೆ ಕೇಳಿದ್ದಾರೆ ಎಂದು ತಿಳಿದು ಬಂದಿದೆ. ಅದು ಬಾಂಬ್ ತಯಾರಿಸುವಾಗ ನಡೆದ ಸ್ಫೋಟ, ಔರಂಗಾಬಾದ್ ಜಿಲ್ಲೆಯ ಒಂದು ಮಸೀದಿಯ ಮೇಲೆ ದಾಳಿ ಮಾಡಲು ಇದನ್ನು ತಯಾರಿಸಲಾಗುತ್ತಿತ್ತು ಎಂದು ಅಫಿಡದ್ವಿಟ್‌ನಲ್ಲಿ ಶಿಂಧೆ ಹೇಳಿದ್ದಾರಂತೆ,

ಇದು ತನಗೆ ತಿಳಿದಿತ್ತು, ಏಕೆಂದರೆ ಮೃತರಲ್ಲಿ ಒಬ್ಬರಾದ ಹಿಮಾಂಶು ಪಾನ್ಸೆ, ವಿಹೆಚ್‌ಪಿ ಕಾರ್ಯಕರ್ತ, ತನಗೆ ಬಹಳ ಕಾಲದಿಂದ ಪರಿಚಿತ, 1999ರಲ್ಲಿ ಒಬ್ಬ ಹಿರಿಯ ಆರೆಸ್ಸೆಸ್ ಮುಖಂಡ ಇಂದ್ರೇಶ್ ಕುಮಾರ್ ನಿರ್ದೇಶನದಂತೆ ಹಿಮಾಂಶು ಮತ್ತು ಆತನ 7 ಮಿತ್ರರನ್ನು ಜಮ್ಮುಗೆ ತರಬೇತಿ ಶಿಬಿರಕ್ಕೆ ಕರೆದೊಯ್ದಿದ್ದರಂತೆ. ಅಲ್ಲಿ ಭಾರತೀಯ ಸೇನೆಯ ಸೈನಿಕರಿಂದ ಅವರಿಗೆ ಆಧುನಿಕ ಶಸ್ತ್ರಾಸ್ತ್ರಗಳಲ್ಲಿ ತರಬೇತಿ ನೀಡಲಾಯಿತಂತೆ.

ನಾಲ್ಕು ವರ್ಷಗಳ ನಂತರ ಪಾನ್ಸೆ ಮತ್ತು ತಾನು ಪುಣೆಯ ಸಿಂಹಗಢದಲ್ಲಿ ಬಾಂಬ್ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದಾಗಿಯೂ, ಅದರ ಮುಖ್ಯ ಸಂಘಟಕ ಮಿಲಿಂದ್ ಪರಾಡೆ ವಿಹೆಚ್‌ಪಿಯ "ರಾಷ್ಟ್ರೀಯ ಸಂಘಟಕರು" ಎಂದು ಶಿಂಧೆ ಹೇಳಿದ್ದಾರೆ. ಅಲ್ಲಿ ಮುಖ್ಯ ತರಬೇತಿಗಾರರಾಗಿದ್ದ 'ಮಿಥುನ್ ಚಕ್ರವರ್ತಿ'(ನಿಜ ಹೆಸರು ರವಿ ದೇವ್ ಆನಂದ್) ಈಗ ವಿಹೆಚ್‌ಪಿಯ ಉತ್ತರಾಖಂಡ ಖಂಡ ಘಟಕದ ಮುಖ್ಯಸ್ಥರು. ಆ ತರಬೇತಿ ಶಿಬಿರದಲ್ಲಿ ಏನಾಯ್ತು ಎಂದು ಶಿಂಧೆ ತನ್ನ ಅಪಿಡವಿಟ್‌ನಲ್ಲಿ ಹೇಳಿದ್ದಾರೆ.



ಈ ಸ್ಫೋಟಗಳನ್ನು ನಡೆಸಬೇಡ ಎಂದು ತಾನು ಪಾನ್ಸೆಗೆ ಹೇಳಿದ್ದೆ, ಆದರೆ ಆತ ನಂತರ ಮರಾಠವಾಡ ಜಿಲ್ಲೆಯಲ್ಲಿ ಮೂರು ಸ್ಫೋಟಗಳಲ್ಲಿ ಭಾಗವಹಿಸಿದ್ದ, ಔರಂಗಾಬಾದ್‌ನಲ್ಲಿ ಸ್ಫೋಟಕ್ಕೆ ಸಿದ್ಧವಾಗುತ್ತಿದ್ದಾಗ 2006ರಲ್ಲಿ ಪ್ರಾಣ ಕಳಕೊಂಡ ಎನ್ನುತ್ತಾರೆ ಶಿಂಧೆ.

ಇದರ ತನಿಖೆಯನ್ನು ಮೊದಲಿಗೆ ಮಹಾರಾಷ್ಟ್ರ ಪೋಲಿಸ್‌ನ ಭಯೋತ್ಪಾದನೆ-ನಿರೋಧಕ ತಂಡ(ಎಟಿಎಸ್)ಗೆ ವಹಿಸಲಾಗಿತ್ತು. ನಂತರ 2013ರಲ್ಲಿ ಸಿಬಿಐಗೆ ವಹಿಸಲಾಯಿತು, ಅದು ಇದೊಂದು ಆಕಸ್ಮಿಕ ಘಟನೆ ಎಂದಿದೆ. ಆದರೆ ಶಿಂಧೆ ಇದನ್ನು ಒಪ್ಪುತ್ತಿಲ್ಲ. ಮರಾಠವಾಡ ಪ್ರದೇಶದ ಪರ್ಭಾನಿಯಲ್ಲಿ 2003ರಲ್ಲಿ ಮತ್ತು 2004ರಲ್ಲಿ ಜಾಲ್ನಾದಲ್ಲಿ ನಡೆದ ಸ್ಫೋಟಗಳು ಮಾತ್ರವಲ್ಲ, 2007ರಲ್ಲಿ ನಡೆದ ಸಮಝೌತ ಎಕ್ಸ್‌ಪ್ರೆಸ್ ಸ್ಫೋಟ ಮತ್ತು 2008ರ ಮಾಲೆಗಾಂವ್ ಸ್ಫೋಟ ಕೂಡ ಇದೇ ಪಿತೂರಿಯ ಪುಟ 15 ಕ್ಕೆ

ಬಿಹಾರದ ಬೆಳವಣಿಗೆಗಳ ನಂತರ ಹಿಂದುತ್ವ ಕೋಮುವಾದದ ವಿರುದ್ಧ ಅತ್ಯಂತ ವಿಶಾಲ ಅಣಿನೆರಿಕೆಯ ಪ್ರಯತ್ನ ಆರಂಭವಾಗಿದೆ-ಯೆಚುರಿ

ಬಿಹಾರದಲ್ಲಿನ ಬೆಳವಣಿಗೆಗಳು, ಸರ್ಕಾರದ ಬದಲಾವಣೆ ಮತ್ತು ಮಹಾಗಠಬಂಧನ್ ಸರ್ಕಾರ ಅಧಿಕಾರ ವಹಿಸಿಕೊಳ್ಳುವದರೊಂದಿಗೆ, ಪ್ರತಿಪಕ್ಷಗಳ ನಡುವೆ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳನ್ನು ಹೆಚ್ಚು ವಿಶಾಲವಾಗಿ ಜತೆಗೂಡಿಸುವ ಚಟುವಟಿಕೆಗಳು ಆರಂಭವಾಗಿವೆ. ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ದೇಶದ ಆರ್ಥಿಕ ಸಾರ್ವಭೌಮತೆಗೆ ಬಂದಿರುವ ಸವಾಲುಗಳನ್ನು ಎತ್ತಿಕೊಳ್ಳುವ ಪ್ರಕ್ರಿಯೆಗೆ ಹೊಸ ಆವೇಗ ಸಿಕ್ಕಿದೆ. ಹಿಂದುತ್ವ ಕೋಮುವಾದದ ಅಜೆಂಡಾವನ್ನು ಹಿಮ್ಮೆಟ್ಟಿಸುವಲ್ಲಿ ಈ ಪ್ರಯತ್ನಗಳಲ್ಲಿ ಕೈಜೋಡಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧರಿಸಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಅವರು ನವದೆಹಲಿಯಲ್ಲಿ ಸಪ್ಟಂಬರ್ 16ರಂದು ಪೊಲಿಟ್‌ಬುರೊ ಸಭೆಯ ನಂತರ ಸಭೆಯ ನಿರ್ಧಾರಗಳನ್ನು ಕುರಿತಂತೆ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತಾಡುತ್ತಿದ್ದರು. ಈ ಪ್ರಕ್ರಿಯೆ ಮುಂದುವರೆಯುತ್ತದೆ, ಮತ್ತು ವಿವಿಧ ರಾಜ್ಯಗಳಲ್ಲಿ ಇದುವರೆಗೆ ನಡೆದಂತೆ ಆಯಾಯ ರಾಜ್ಯಗಳ ಪ್ರಭಾವೀ ಶಕ್ತಿಗಳ ನೇತೃತ್ವದಲ್ಲಿ ಸ್ಪಷ್ಟ ರೂಪ ಪಡೆಯುತ್ತದೆ ಎಂದು ಅವರು ಹೇಳಿದರು.

ಆರ್ಥಿಕ ರಂಗದಲ್ಲಿ, ಭಾರತ ಈಗ ಸ್ಥಗಿತತೆ-ಹಣದುಬ್ಬರದ ಸ್ಥಿತಿಯಿಂದ ಆರ್ಥಿಕ ಹಿಂಜರಿತದತ್ತ ಜಾರುತ್ತಿದೆ, ಇದು ನಿರುದ್ಯೋಗವನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ, ದುಡಿಯುವ ಜನಗಳ ಬದುಕನ್ನು ಇನ್ನಷ್ಟು ದುರ್ಭರಗೊಳಿಸುತ್ತದೆ, ಆದ್ದರಿಂದ ಇದರ ವಿರುದ್ಧ ಸಿಪಿಐ(ಎಂ) ಈಗಾಗಲೇ ಪ್ರಚಾರಾಂದೋಲವನ್ನು ಆರಂಭಿಸಿದೆ, ಕಾರ್ಮಿಕರು, ರೈತರು, ಕೃಷಿಕೂಲಿಕಾರರೂ ಹೋರಾಟದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ ಎಂದು ಯೆಚುರಿ ಹೇಳಿದರು.

ಈ ವರ್ಷ ಸಪ್ಟಂಬರ್ 17ರಂದು ಹೈದರಾಬಾದಿನಲ್ಲಿ ನಿಜಾಮನ ಆಳ್ವಿಕೆಯಿಂದ ವಿಮೋಚನೆಯ ದಿನಾಚರಣೆ ನಡೆಸುವುದಾಗಿ ಬಿಜೆಪಿ ಹೇಳಿದೆ. ವಿಚಿತ್ರವೆಂದರೆ ಅದೇ ವೇಳೆಗೆ ನಿಜಾಮನಂತೆಯೇ ಭಾರತವನ್ನು ಸೇರಲು ನಿರಾಕರಿಸಿದ ಜಮ್ಮು ಮತ್ತು ಕಾಶ್ಮೀರದ ದೊರೆ ರಾಜಾ ಹರಿಸಿಂಗ್‌ನ ಜನ್ಮದಿನವನ್ನು ಸಾರ್ವಜನಿಕ ರಜಾ ದಿನವಾಗಿ ಮಾಡುವುದಾಗಿಯೂ ಘೋಷಿಸಲಾಗಿದೆ. ಕೋಮುವಾದಿ ಧ್ರುವೀಕರಣದ ಮತ್ತು ಚರಿತ್ರೆಯ ಪುನರ್ಲೇಖನದ ಇದಕ್ಕಿಂತ ಹೆಚ್ಚು ಲಜ್ಜೆಗೆಟ್ಟ ವರ್ತನೆ ಬೇರೊಂದಿಲ್ಲ ಎಂದ ಸೀತಾರಾಂ ಯೆಚುರಿ, ಈ ಹಿನ್ನೆಲೆಯಲ್ಲಿ ತೆಲಂಗಾಣದಲ್ಲಿ 1946-51ರ ಅವಧಿಯಲ್ಲಿ ನಡೆದ ಸಶಸ್ತ್ರ ರೈತ ಹೋರಾಟದ ನಿಜವಾದ ಭವ್ಯ ಇತಿಹಾಸವನ್ನು ಈ ವರ್ಷ ದೇಶಾದ್ಯಂತ ನೆನಪಿಸಿಕೊಳ್ಳಲು ಸಿಪಿಐ(ಎಂ) ನಿರ್ಧರಿಸಿದೆ ಎಂದು ಅವರು ಹೇಳಿದರು.

ಸಭೆಯ ನಂತರ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಕಟಿಸಿರುವ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ.

ಹಿಂದುತ್ವ ಕೋಮುವಾದವನ್ನು ಸೋಲಿಸಲು ಜಾತ್ಯತೀತ ಶಕ್ತಿಗಳ ಅತ್ಯಂತ ವ್ಯಾಪಕ ಅಣಿನೆರಿಕೆ

ಪಕ್ಷವು ತನ್ನ ಸ್ವತಂತ್ರ ಶಕ್ತಿಯನ್ನು ಅಭಿವೃದ್ಧಿಪಡಿಸಲು, ಎಡ ಐಕ್ಯತೆಯನ್ನು ಬಲಪಡಿಸಲು ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬೆಸೆಯಲು ಪಕ್ಷವು ಕೆಲಸ ಮಾಡುತ್ತದೆ ಎಂದು ಪೊಲಿಟ್ ಬ್ಯೂರೋ ನಿರ್ಧರಿಸಿದೆ. ಭಾರತೀಯ ಸಂವಿಧಾನದ ರಕ್ಷಣೆಯಲ್ಲಿ, ಪ್ರಜಾಪ್ರಭುತ್ವ; ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಜನರ ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಯಲ್ಲಿ ಹಾಗೂ ಮತ್ತು ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡುವಲ್ಲಿ ಜಾತ್ಯತೀತ ಪ್ರಜಾಪ್ರಭುತ್ವವಾದೀ ಪಕ್ಷಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳಲ್ಲಿ ಸಿಪಿಐ(ಎಂ) ಜತೆಗೂಡುತ್ತದೆ.

ಆರ್ಥಿಕ ಇಳಿಜಾರು

ಮೋದಿ ಸರ್ಕಾರದ ಪ್ರಚಾರದ ಅಬ್ಬರದ ಹೊರತಾಗಿಯೂ, ಭಾರತದ ಆರ್ಥಿಕತೆಯು ಇಳಿಜಾರಿನಲ್ಲಿದೆ. ಅಂತರಾಷ್ಟ್ರೀಯ ರೇಟಿಂಗ್ ಸಂಸ್ಥೆ ಫಿಚ್ ಹಣಕಾಸು ವರ್ಷ 23 ರಲ್ಲಿ ಭಾರತದ ಆರ್ಥಿಕ ಬೆಳವಣಿಗೆಯ ಮುನ್ಸೂಚನೆಯನ್ನು 7.8 ರಿಂದ 7 ಶೇಕಡಾಕ್ಕೆ ಕಡಿತಗೊಳಿಸಿದೆ. 2020, 2021 ಮತ್ತು 2022 ರಲ್ಲಿ ಭಾರತದ ವಾರ್ಷಿಕ ಬೆಳವಣಿಗೆಯು ನಿಜ ಲೆಕ್ಕಾಚಾರದಲ್ಲಿ ಕೇವಲ 0.8 ಪ್ರತಿಶತ ಎಂದು ವಿಶ್ವಬ್ಯಾಂಕ್ ನೀಡಿರುವ ದತ್ತಾಂಶ ತೋರಿಸುತ್ತದೆ.

ಏರುತ್ತಿರುವ ಆಹಾರದ ಬೆಲೆಗಳ ಕಾರಣದಿಂದ ಹಣದುಬ್ಬರದ ನಾಗಾಲೋಟ ಸತತ 8 ನೇ ತಿಂಗಳಲ್ಲಿ ರಿಝರ್ವ್ ಬ್ಯಾಂಕ್ ಸೂಚಿಸಿರುವ ಮೇಲ್ಮಿತಿಯಾದ 6 ಶೇಕಡಾವನ್ನು ಮೀರಿದೆ. ಆಗಸ್ಟ್ ನಲ್ಲಿ ಚಿಲ್ಲರೆ ಹಣದುಬ್ಬರ ಶೇ.7ಕ್ಕೆ ಏರಿಕೆಯಾಗಿದೆ. ಆಹಾರ ಬೆಲೆ ಏರಿಕೆ ಶೇ.7.62 ದಾಟಿದೆ. ಗ್ರಾಮೀಣ ಭಾರತದಲ್ಲಿ ಹಣದುಬ್ಬರವು ಶೇಕಡಾ 7.15 ತಲುಪುವುದರೊಂದಿಗೆ ಪರಿಸ್ಥಿತಿಯು ಇನ್ನೂ ಕೆಟ್ಟದಾಗಿದೆ.

ಅದೇ ಸಮಯದಲ್ಲಿ, ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯು ಜೂನ್‌ನಲ್ಲಿ ಶೇ.12.7 ರಿಂದ ಜುಲೈನಲ್ಲಿ ಶೇ. 2.4 ಕ್ಕೆ ಇಳಿದಿದೆ. ಗ್ರಾಹಕ ಬಹುಬಳಿಕೆ ವಸ್ತುಗಳ ಉತ್ಪಾದನೆಯು ಜೂನ್‌ಗಿಂತ



ಶೇ. 3ರಷ್ಟು ಕಡಿಮೆಯಾಗಿದೆ.

ಇದರ ಪರಿಣಾಮವಾಗಿ ನಿರುದ್ಯೋಗದ ಬೆಳವಣಿಗೆಯು ದೇಶದಲ್ಲಿ ಶೋಚನೀಯ ಉದ್ಯೋಗ ಪರಿಸ್ಥಿತಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈಗಾಗಲೇ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) 2021 ರಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಆತ್ಮಹತ್ಯೆಗಳು ದಿನಗೂಲಿ ಕಾರ್ಮಿಕರದ್ದು ಎಂದು ತೋರಿಸಿದೆ.

ಸೆಪ್ಟೆಂಬರ್ ಪ್ರಚಾರಾಂದೋಲನ

ಜನರ ಜೀವನೋಪಾಯದ ಮೇಲೆ ಹೇರಲಾಗುತ್ತಿರುವ ಹೊರೆಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಹಕ್ಕುಗಳು, ಜಾತ್ಯತೀತತೆ ಮತ್ತು ಭಾರತೀಯ ಸಂವಿಧಾನವನ್ನು ಕಾಪಾಡಿಕೊಳ್ಳಲು ಸೆಪ್ಟೆಂಬರ್ 14-24 ರವರೆಗೆ ಅಖಿಲ ಭಾರತ ಪ್ರಚಾರಾಂದೋಲನಕ್ಕೆ ಕೇಂದ್ರ ಸಮಿತಿ ಕರೆ ನೀಡಿದೆ. ಅದು ರಾಜ್ಯ ಮಟ್ಟದ ಸಾರ್ವಜನಿಕ ಸಭೆಗಳು ಮತ್ತು ರ್‍ಯಾಲಿಗಳೊಂದಿಗೆ ಪೂರ್ಣಗೊಳ್ಳುತ್ತದೆ.

ಶ್ರೀಮಂತರಿಗೆ ತೆರಿಗೆ ರಿಯಾಯತಿಗಳನ್ನು ಮತ್ತು ಬಂಟರಿಗೆ ಮಹಾ ಸಾಲಮನ್ನಾಗಳನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಉದ್ಯೋಗ ಸೃಷ್ಟಿಸುವ ಕೆಲಸಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಲು ಈ ಸಂಪನ್ಮೂಲಗಳನ್ನು ನಿಯೋಜಿಸಬೇಕು ಎಂದು ಪೊಲಿಟ್‌ಬ್ಯೂರೋ ಒತ್ತಾಯಿಸುತ್ತದೆ.

ಮಹಿಳೆಯರ ಮೇಲಿನ ದೌರ್ಜನ್ಯ

2021 ರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಮಾಣ ಶೇಕಡಾ 15 ಕ್ಕಿಂತಲೂ ಹೆಚ್ಚಿನ ದೊಡ್ಡ ಏರಿಕೆಯನ್ನು ಕಂಡಿರುವುದನ್ನು ಪೊಲಿಟ್ ಬ್ಯೂರೋ ಕಳವಳದಿಂದ ಗಮನಿಸಿದೆ, ಆದರೆ ಶಿಕ್ಷೆಗೊಳಗಾದವರ ಪ್ರಮಾಣ ಕೆಳಮಟ್ಟದಲ್ಲೇ ಇದೆ. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಇಬ್ಬರು ದಲಿತ ಅಪ್ರಾಪ್ತ ವಯಸ್ಸಿನವರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆಯ ಭೀಕರ ಪ್ರಕರಣವು ಆ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಕುಸಿದಿರುವುದರ ಪ್ರತಿಬಿಂಬವಾಗಿದೆ.

ಹೈದರಾಬಾದ್ - ಬಿಜೆಪಿ ಮತ್ತೆ ಇತಿಹಾಸವನ್ನು ತಿರುಚುತ್ತಿದೆ

ಸೆಪ್ಟೆಂಬರ್ 17, 1948 ರಂದು ಹೈದರಾಬಾದ್ ನಿಜಾಮ್ ಶರಣಾದರು ಮತ್ತು ಹಿಂದಿದ್ದ ಸಂಸ್ಥಾನವು ಭಾರತೀಯ ಒಕ್ಕೂಟದ ಭಾಗವಾಯಿತು. ಬಿಜೆಪಿಯು ಈ ದಿನವನ್ನು ಮತ್ತು ಇಡೀ ವರ್ಷವನ್ನು ತನ್ನ 'ವಿಮೋಚನಾ' ದಿನದ ಕಥನದೊಂದಿಗೆ ಆಚರಿಸುವುದಾಗಿ ಘೋಷಿಸಿದೆ. ಇದು ಮುಸ್ಲಿಂ ಆಡಳಿತದಿಂದ 'ವಿಮೋಚನೆ' ಎಂದು ಪ್ರತಿಪಾದಿಸುವ ಮೂಲಕ ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸುವ ಮತ್ತು ಈ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವಕವಾಗಿ ಇತಿಹಾಸವನ್ನು ತಿರುಚುವುದು ಮತ್ತು ಪುನಃ ಬರೆಯುವ ಗುರಿಯನ್ನು ಅದು ಹೊಂದಿದೆ ಎಂಬುದು ಸ್ಪಷ್ಟ.

ನಿಜಾಮರ ಆಳ್ವಿಕೆಯು 1946 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಅದರ ಕ್ರೂರ ದಬ್ಬಾಳಿಕೆಯ ಭೂಮಾಲಿಕತ್ವದ ವಿರುದ್ಧ ಪ್ರಾರಂಭಿಸಿದ ಸಶಸ್ತ್ರ ಹೋರಾಟದ ನಂತರ ಅಸಮರ್ಥನೀಯಗೊಂಡಿತು. ಇದು ನಿಜಾಮರ ನಿರಂಕುಶ ಆಡಳಿತವನ್ನು ಗಣನೀಯವಾಗಿ ದುರ್ಬಲಗೊಳಿಸಿತು ಮತ್ತು ಸೆಪ್ಟೆಂಬರ್ 13, 1948 ರಂದು ಪ್ರಾರಂಭವಾದ ಪೊಲೀಸ್ ಕಾರ್ಯಾಚರಣೆ ಅದು ಸೆಪ್ಟೆಂಬರ್ 17, 1948 ರಂದು ಶರಣಾಗುವಂತೆ ಮಾಡಿದ ಕೊನೆಯ ಹುಲ್ಲುಗರಿಕೆಯಾಗಿ ಪರಿಣಮಿಸಿತು.

ಆರ್‌ಎಸ್‌ಎಸ್ ಈ ತಥಾಕಥಿತ 'ವಿಮೋಚನೆ' ತನ್ನ ಸಾಧನೆ ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದವಾಗಿದೆ. ಮಹಾತ್ಮಾ ಗಾಂಧಿಯವರ ಹತ್ಯೆಯ ನಂತರ, ಸರ್ದಾರ್ ಪಟೇಲ್ ಆರ್‌ಎಸ್‌ಎಸ್‌ನ್ನು ನಿಷೇಧಿಸಿದರು. ನಿಷೇಧವು ಫೆಬ್ರವರಿ 4, 1948 ರಿಂದ ಜುಲೈ 11, 1949 ರವರೆಗೆ ಇತ್ತು. ನಿಜಾಮ ಶರಣಾಗತನಾಗುವಂತೆ ಬಲವಂಪಡಿಸುವುದರಲ್ಲಿ ಯಾವುದೇ ಪಾತ್ರವಿದೆ ಎಂಬ ಬಿಜೆಪಿಯ ದಾವೆ ಹಾಸ್ಯಾಸ್ಪದವಾಗಿದೆ.

ಸಿಪಿಐ(ಎಂ) ಈ ದಿನವನ್ನು ಸಶಸ್ತ್ರ ಹೋರಾಟದ ಭವ್ಯ ಇತಿಹಾಸವನ್ನು, ಅದರ ಅಸಂಖ್ಯಾತ ಹುತಾತ್ಮರನ್ನು ಮತ್ತು ಲಕ್ಷಾಂತರ ರೈತರನ್ನು ಊಳಿಗಮಾನ್ಯ ದಾಸ್ಯದಿಂದ ವಿಮೋಚನೆಗೊಳಿಸಿರುವುದನ್ನು ಸ್ಮರಿಸುತ್ತ ಆಚರಿಸುತ್ತದೆ. ಎರಡನೆಯ ಮಹಾಯುದ್ಧದ ನಂತರದ ಭಾರತದ ವಿವಿಧ ಭಾಗಗಳಲ್ಲಿ ಸಂಭವಿಸಿದ ರೈತಉತ್ಥಾಂತಿಯ ಜೊತೆಗೆ, ಈ ಐತಿಹಾಸಿಕ ಸಶಸ್ತ್ರ ಹೋರಾಟವು ಸ್ವತಂತ್ರ ಭಾರತದಲ್ಲಿ ಭೂಸುಧಾರಣೆಯ ಪ್ರಶ್ನೆಯನ್ನು ಕೇಂದ್ರ ಕಾರ್ಯಸೂಚಿಗೆ ತಂದಿತು.

ಕೇಂದ್ರ ಸಮಿತಿ ಸಭೆ

ಅಕ್ಟೋಬರ್ 29-31, 2022 ರಂದು ದೆಹಲಿಯಲ್ಲಿ ಕೇಂದ್ರ ಸಮಿತಿಯ ಸಭೆಯನ್ನು ಕರೆಯಲಾಗುವುದು.

ತಪ್ಪಿತಸ್ಥ ಬಿಜೆಪಿ ಮಹಿಳಾ ಮೋರ್ಚಾದ ಮುಖಂಡೆಯನ್ನು ಶಿಕ್ಷಿಸಿ, ಮನೆಗೆಲಸದವರಿಗೆ ಸಮಗ್ರ ಕಾನೂನನ್ನು ತನ್ನಿ-ಸಿಐಟಿಯು

ಹಲವಾರು ವರ್ಷಗಳಿಂದ ತನ್ನ ಮನೆಗೆಲಸದ ಮಹಿಳೆಗೆ ಚಿತ್ರಹಿಂಸೆ ನೀಡಿದ ಜಾರ್ಖಂಡ್‌ನ ಬಿಜೆಪಿ ನಾಯಕಿ ಸೀಮಾ ಪಾತ್ರಾಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಸಿಐಟಿಯು ಆಗ್ರಹಿಸಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗವು ಈ ವಿಷಯವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಳ್ಳಬೇಕು ಮತ್ತು ಬುಡಕಟ್ಟು ಮನೆಕೆಲಸಗಾರ್ತಿ ಸುನೀತಾಗೆ ನ್ಯಾಯ ಸಿಗುವಂತೆ ಖಾತ್ರಿಪಡಿಸಬೇಕು ಎಂದು ಸಿಐಟಿಯು ಒತ್ತಾಯಿಸಿದೆ. ಆಕೆಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡಬೇಕು ಮತ್ತು ಸಾಧ್ಯವಾದಷ್ಟು ಹೆಚ್ಚಿನ ಪರಿಹಾರವನ್ನು ನೀಡಬೇಕು. ಆಕೆಗೆ ಪುನರ್ವಸತಿ ಕಲ್ಪಿಸಲು ಕ್ರಮಕೈಗೊಳ್ಳಬೇಕು ಎಂದೂ ಅದು ಆಗ್ರಹಿಸಿದೆ.

ಸುನೀತಾಳೊಂದಿಗೆ ಅಮಾನವೀಯ ವರ್ತನೆಯ ಬಗ್ಗೆ ಆಘಾತಕಾರಿ ವಿವರಗಳು ಹೊರಬಿದ್ದಿವೆ. ಪಾತ್ರಾ ಅವರು ಬಿಜೆಪಿ ಮಹಿಳಾ ಮೋರ್ಚಾದ ರಾಷ್ಟ್ರೀಯ ಸಮಿತಿಯ ಸದಸ್ಯರಾಗಿದ್ದಾರೆ ಮತ್ತು ಬೇಟಿ ಬಚಾವೋ ಬೇಟಿ ಪಢಾವೋ ಅಭಿಯಾನದ ರಾಜ್ಯ ಸಂಚಾಲಕರಾಗಿದ್ದಾರೆ ಎಂಬ ಅಂಶವು ಮಹಿಳೆಯರ ಹಕ್ಕುಗಳಿಗೆ ಬಿಜೆಪಿಯದ್ದು ಬಾಯಿಪಚಾರದ ಮಾತುಗಳಷ್ಟೇ ಎಂಬುದನ್ನು ತೋರಿಸುತ್ತದೆ. ಮಾಜಿ ಐಎಎಸ್ ಅಧಿಕಾರಿಯೊಬ್ಬರ ಮನೆಯಲ್ಲಿ ಇದು ನಡೆದಿರುವುದು ಭಾರತದ ಸಂವಿಧಾನವನ್ನು ಎತ್ತಿಹಿಡಿಯಲು ಪ್ರಮಾಣ ವಚನ ಸ್ವೀಕರಿಸುವವರು ಕಾರ್ಮಿಕರನ್ನು ಎಷ್ಟು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕೂಡ ತೋರಿಸುತ್ತದೆ. ಪಾತ್ರಾರನ್ನು ಬಂಧಿಸಲು ಪೊಲೀಸರು ಒಂದು ವಾರ ಸಮಯ ತೆಗೆದುಕೊಂಡಿರುವುದು ಅಚ್ಚರಿ ಮೂಡಿಸಿದೆ ಎಂದು ಸಿಐಟಿಯು ಹೇಳಿದೆ.

ದೇಶದಲ್ಲಿ ದುಡಿಯುವ ಮಹಿಳೆಯರ ದೊಡ್ಡ ವಿಭಾಗಗಳಲ್ಲಿ ಒಂದಾಗಿರುವ, ಆದರೆ ಯಾವುದೇ ಮಾನ್ಯತೆ ಮತ್ತು ಹಕ್ಕುಗಳಿಲ್ಲದ ಮನೆಗೆಲಸದ ಕಾರ್ಮಿಕರಿಗೆ ರಕ್ಷಣಾತ್ಮಕ ಕಾನೂನನ್ನು ಸರ್ಕಾರ ಜಾರಿಗೆ ತರುವ ಅಗತ್ಯವನ್ನು ಈ ಪ್ರಕರಣವು ಮತ್ತೊಮ್ಮೆ ಎತ್ತಿ ತೋರಿಸುತ್ತದೆ. ಬಹುಪಾಲು 'ಲಿವ್ ಇನ್'(ಕೆಲಸ ಮಾಡುವ ಮನೆಗಳಲ್ಲೇ ವಾಸಿಸುವ) ಕೆಲಸಗಾರರು ಬುಡಕಟ್ಟು ಸಮುದಾಯದಿಂದ ಬಂದವರು ಮತ್ತು ತೀವ್ರ ಶೋಷಣೆಗೆ ಒಳಗಾಗುತ್ತಾರೆ; ಕೆಲವರು ಮಾನವ ಕಳ್ಳಸಾಗಾಣಿಕೆಗೆ ಬಲಿಯಾಗಿದ್ದಾರೆ. ಮನೆಗೆಲಸದವರ ಹಕ್ಕುಗಳು ಮತ್ತು ಅವರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಗೆ ತರುವ ಅಗತ್ಯವನ್ನು ಒತ್ತಿಹೇಳುವ ಐಎಲ್‌ಒ ಅಧಿನಿರ್ಣಯ 189 ಅನ್ನು ಅನುಮೋದಿಸಲು ಬಿಜೆಪಿ ಸರ್ಕಾರ ನಿರಾಕರಿಸಿದೆ. ಕಾರ್ಮಿಕ ಸಂಘಗಳು ಮತ್ತು ಸರ್ಕಾರದಿಂದ ಹಲವಾರು ಕರಡು ಕಾನೂನುಗಳು ಮತ್ತು ನೀತಿಗಳನ್ನು ರಚಿಸಲಾಗಿದೆ ಮತ್ತು ಚರ್ಚಿಸಲಾಗಿದೆ. ಆದರೆ ಮನೆಕೆಲಸಗಾರರಿಗೆ ಕನಿಷ್ಠ ವೇತನ ಮತ್ತು ಯೋಗ್ಯ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳಲು ಬಿಜೆಪಿ ಸರ್ಕಾರವು ಹಿಂದೇಟು ಹಾಕುತ್ತಿರುವ ಕಾರಣ ಇವುಗಳು ಕಾಗದದಲ್ಲಿ ಉಳಿದಿವೆ.

ಅಧಿಕಾರದಲ್ಲಿರುವ ಬಹುತೇಕರು ಪಾತ್ರಾ ಅವರ ಮನಸ್ಥಿತಿಯನ್ನೇ ಹೊಂದಿದ್ದಾರೆ ಎಂಬುದು ಗೊತ್ತಿಲ್ಲದಿರುವ ಸಂಗತಿಯೇನಲ್ಲ ಎಂದಿರುವ ಸಿಐಟಿಯು, ಕಾರ್ಮಿಕ ವರ್ಗವು ಸುನೀತಾ ಅವರ ಬೆಂಬಲಕ್ಕೆ ನಿಲ್ಲಬೇಕು ಮತ್ತು ಮತ್ತು ಗೃಹ ಕಾರ್ಮಿಕರಿಗೆ ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಮತ್ತು ಘನತೆಯನ್ನು ಒದಗಿಸುವ ಸಮಗ್ರ ಕಾನೂನಿಗೆ ಆಗ್ರಹಿಸಬೇಕು ಎಂದು ಕರೆ ನೀಡಿದೆ.

ಏಪ್ರಿಲ್-ಜೂನ್ 2022ರ ಜಿಡಿಪಿ ಅಂದಾಜು: ಸಾಧನೆಯೂ ಅಲ್ಲ, ಸಂಭ್ರಮಿಸುವಂತದ್ದೂ ಅಲ್ಲ



ಕೊರೊನಾ ನಂತರದ "ಸಾಮಾನ್ಯ" ವರ್ಷವೆಂದು ಪರಿಗಣಿಸಬಹುದಾದ 2022-23 ರ ಮೊದಲ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ಅಂದಾಜನ್ನು ಕೊರೊನಾ-ಪೂರ್ವದ ಕೊನೆಯ "ಸಾಮಾನ್ಯ" ವರ್ಷ 2019-20ರೊಂದಿಗೆ ಹೋಲಿಕೆ ಮಾಡುವುದೇ ಸರಿಯಾದ ಕ್ರಮ. ಈ ಹೋಲಿಕೆಯ ಪ್ರಕಾರ, ಜಿಡಿಪಿಯಲ್ಲಿ ಹೆಚ್ಚಳ ಕೇವಲ ಶೇ.2.8ರಷ್ಟು. ಅದೂ ಮೂರು ವರ್ಷಗಳ ನಂತರ; ಅಂದರೆ ಅರ್ಥವ್ಯವಸ್ಥೆಯು ಅಲ್ಲೇ ನಿಂತಿದೆ. ಆದ್ದರಿಂದ, ಈ ಜಿಡಿಪಿ ದರ ಹೆಚ್ಚಳ ಅಧಿಕೃತ ಅರ್ಥಶಾಸ್ತ್ರಜ್ಞರು ಹೇಳುವಂತೆ, ಸಾಧನೆಯೂ ಅಲ್ಲ, ಅದು ಸಂಭ್ರಮಿಸುವಂತದ್ದೂ ಅಲ್ಲ. ಆರ್ಥಿಕ ಸ್ಥಗಿತತೆಯ ಪ್ರವೃತ್ತಿ ಕೊರೊನಾ ಮುನ್ನವೇ ಇತ್ತು. ಈಗ, ಅದರ ಜೊತೆಗೆ ವ್ಯಾಪಾರ ಕೊರತೆ ಮತ್ತು ಚಾಲ್ತಿ ಖಾತೆ ಕೊರತೆಗಳೂ ಸೇರಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದು ಬಿಕ್ಕಟ್ಟು ಅರ್ಥವ್ಯವಸ್ಥೆಯನ್ನು ಆವರಿಸಿದೆ. ದಿನೇ ದಿನೇ ಅದರ ವ್ಯಾಪ್ತಿ ಹೆಚ್ಚುತ್ತಿದೆ. ಮತ್ತು ನವ-ಉದಾರವಾದದಲ್ಲಿ ಅದಕ್ಕೆ ಪರಿಹಾರವಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಆಗಸ್ಟ್ 31 ರಂದು ಸರ್ಕಾರ ಬಿಡುಗಡೆ ಮಾಡಿದ ಈ ವರ್ಷದ ಏಪ್ರಿಲ್-ಜೂನ್ ತ್ರೈಮಾಸಿಕದ ಜಿಡಿಪಿ ಅಂದಾಜುಗಳು ಭಾರತದ ಅರ್ಥವ್ಯವಸ್ಥೆಯ ಬಗ್ಗೆ ಒಂದು ನಿರಾಶಾದಾಯಕ ದೃಶ್ಯವನ್ನು ಚಿತ್ರಿಸುತ್ತವೆ. ಇಂದಿನ ಬೆಲೆಗಳ ಪ್ರಕಾರವಾಗಿ ಹಿಂದಿನ ವರ್ಷದ ಮೊದಲ ತ್ರೈಮಾಸಿಕದ ಜಿಡಿಪಿಗಿಂತ ಶೇ. 13.5ರ ಹೆಚ್ಚಳವನ್ನು ತೋರಿಸುವ ಕಾರಣದಿಂದ ಮತ್ತು ಈ ಶೇ. 13.5ರ ಹೆಚ್ಚಳವು ಒಂದು ಮೆಚ್ಚುಗೆಯ ಸಾಧನೆಯಾಗಿ ತೋರುತ್ತಿರುವುದರಿಂದ, ಅಧಿಕೃತ ವಕ್ತಾರರು ಅದನ್ನು ಹಾಡಿ ಹೊಗಳಿದ್ದಾರೆ. ಆದರೆ, ಅರ್ಥವ್ಯವಸ್ಥೆಯು ಒಳಗಾಗಿರುವ ಪರಿಸ್ಥಿತಿಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಅದು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಕೊರೊನಾ ಕಾರಣದ ಲಾಕ್‌ಡೌನ್‌ನಿಂದಾಗಿ 2020-21ರಲ್ಲಿ ಆರ್ಥಿಕ ಚಟುವಟಿಕೆಗಳೂ ತೀವ್ರವಾಗಿ ಕುಗ್ಗಿದ್ದವು. ಭಾರತದಲ್ಲಿ ಹೇರಿದ ಲಾಕ್‌ಡೌನ್ ಬಹಳ ಕಠಿಣವಾಗಿದ್ದ ಪರಿಣಾಮವಾಗಿ ಪಾತಾಳಕ್ಕಿಳಿದಿದ್ದ ಅರ್ಥವ್ಯವಸ್ಥೆಯ ಚೇತರಿಕೆಯು 2021-22 ರಲ್ಲಿ ಅಪೂರ್ಣವಾಗಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು. ಈ ಅಪೂರ್ಣ ಚೇತರಿಕೆಯ ಹಿನ್ನೆಲೆಯಲ್ಲಿ, 2022-23ರ ಮೊದಲ ತ್ರೈಮಾಸಿಕದ ಜಿಡಿಪಿಯ ಅಂಕಿಅಂಶಗಳು ಅರ್ಥವ್ಯವಸ್ಥೆಯು ತನ್ನ ಹಿಂದಿನ ಸಾಧನೆಯ ಮಟ್ಟಕ್ಕೆ ಮರಳುವ ಸಾಮರ್ಥ್ಯ ಹೊಂದಿದೆಯೇ ಎಂಬುದನ್ನು ತಿಳಿಸುವ ಕಾರಣದಿಂದಾಗಿ ಮಹತ್ವ ಪಡೆಯುತ್ತವೆ. ಕೊರೊನಾ ಹಾವಳಿಯ ಪರಿಣಾಮಗಳಿಂದ ಪೂರ್ಣವಾಗಿ ಹೊರಬರಲಾಗಿದೆ ಎನ್ನಲಾಗದಿದ್ದರೂ, 2022-23 ವರ್ಷವನ್ನು ಕೊರೊನಾ ನಂತರದ "ಸಾಮಾನ್ಯ" ವರ್ಷವೆಂದು ಪರಿಗಣಿಸಬಹುದಾದಷ್ಟು ಮಟ್ಟಿಗೆ ಅದರ ಹಾವಳಿ ಕಡಿಮೆಯಾಗಿದೆ. ಆದ್ದರಿಂದ, ಜಿಡಿಪಿಯ ಈ ವರ್ಷದ ಬೆಳವಣಿಗೆಯನ್ನು ಸಾಂಕ್ರಾಮಿಕದ ಪರಿಣಾಮಗಳಿಂದ ಕೂಡಿದ್ದ 2021-22 ಅಥವಾ 2020-21 ಇವೆರಡೂ ವರ್ಷಗಳೊಂದಿಗೆ ಹೋಲಿಸುವುದು ಸಮಂಜಸವಲ್ಲ. ಹಾಗಾಗಿ, ಈ ವರ್ಷದ ಜಿಡಿಪಿಯನ್ನು ಸಾಂಕ್ರಾಮಿಕ ಪೂರ್ವದ 2019-20ರ ಕೊನೆಯ "ಸಾಮಾನ್ಯ" ವರ್ಷದೊಂದಿಗೆ ಹೋಲಿಕೆ ಮಾಡುವುದೇ ಸರಿಯಾದ ಕ್ರಮವಾಗುತ್ತದೆ.

2019-20ರ ಮೊದಲ ತ್ರೈಮಾಸಿಕ ಜಿಡಿಪಿಯ ಮೌಲ್ಯವು 35.85 ಲಕ್ಷ ಕೋಟಿ ರೂ.ಗಳಷ್ಟಿತ್ತು. 2022-23ರ ಮೊದಲ ತ್ರೈಮಾಸಿಕದ ಜಿಡಿಪಿಯ ಮೌಲ್ಯವನ್ನು 36.85 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಈ ಹೋಲಿಕೆಯ ಪ್ರಕಾರ, ಜಿಡಿಪಿಯಲ್ಲಿ ಕೇವಲ ಶೇ.2.8ರಷ್ಟು ಹೆಚ್ಚಳ ಕಂಡುಬರುತ್ತದೆ. ಅಂದರೆ, ಮೂರು ವರ್ಷಗಳ ನಂತರ, ಸಾಂಕ್ರಾಮಿಕದ ಹಾವಳಿ ಇಲ್ಲವೇ ಇಲ್ಲ ಎಂದು ಹೇಳಬಹುದಾದ ಸಮಯದಲ್ಲಿ, ಅರ್ಥವ್ಯವಸ್ಥೆಯು ಅಲ್ಲೇ ನಿಂತಿದೆ. ಈ ಪರಿಸ್ಥಿತಿಗೆ ಇನ್ನು ಮುಂದೆ ಸಾಂಕ್ರಾಮಿಕದ ನೆಪ ಒಡ್ಡಲಾಗದು. ಅಧಿಕೃತ ಅರ್ಥಶಾಸ್ತ್ರಜ್ಞರು ಜಿಡಿಪಿಯು ಕೊನೆಯ ಪಕ್ಷ 2019-20ರ ಮೊದಲ ತ್ರೈಮಾಸಿಕದ ಜಿಡಿಪಿಯನ್ನು ದಾಟಿದೆ ಎಂದಿದ್ದಾರೆ. ಆದರೆ ಈ ನಡುವೆ ಮೂರು ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಜನಸಂಖ್ಯೆ ಹೆಚ್ಚಿದೆ ಮತ್ತು ಬಂಡವಾಳ ಸಂಗ್ರಹ ವಿಸ್ತಾರಗೊಂಡಿದೆ. ಆದ್ದರಿಂದ, ಮೂರು ವರ್ಷಗಳ ಹಿಂದಿನ ಜಿಡಿಪಿಯನ್ನು ದಾಟಿರುವುದು ಸಾಧನೆಯೂ ಅಲ್ಲ ಮತ್ತು ಅದು ಸಂಭ್ರಮಿಸುವಂತದ್ದೂ ಅಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಜಿಡಿಪಿಯ ಈ ಪರಿಯ ಬೆಳವಣಿಗೆಯು ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ಅಂಶವನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಾಂಕ್ರಾಮಿಕ-ಪೂರ್ವ "ಸಾಮಾನ್ಯ" ಮತ್ತು ಸಾಂಕ್ರಾಮಿಕ-ನಂತರದ "ಸಾಮಾನ್ಯ" ಪರಿಸ್ಥಿತಿಗಳ ನಡುವೆ, ತಲಾ ಬಂಡವಾಳದ ದಾಸ್ತಾನು ವಿಸ್ತರಿಸಿದ್ದರೂ ಸಹ ತಲಾ ಜಿಡಿಪಿಯು ಕುಸಿದಿದೆ.

ಕಳವಳಕಾರಿ ಆರ್ಥಿಕ ಸ್ಥಗಿತತೆ

2019-20ರ ವರ್ಷವೂ ಸಹ ಭಾರತದ ಅರ್ಥವ್ಯವಸ್ಥೆಯ ದೃಷ್ಟಿಯಲ್ಲಿ ಅಷ್ಟೇನೂ ಉತ್ತಮವಾಗಿರಲಿಲ್ಲ ಎಂಬುದನ್ನೂ ಸಹ ನೆನಪಿಸಿಕೊಳ್ಳಬೇಕಾಗುತ್ತದೆ. ವಾಸ್ತವವಾಗಿ, 2019-20ರ ಮೊದಲ ತ್ರೈಮಾಸಿಕ ಜಿಡಿಪಿಯು 2018-19ರ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ ಕೇವಲ ಶೇ. 5ರಷ್ಟು ವೃದ್ಧಿಯಾಗಿತ್ತು. 2017-18ರ ಇದೇ ಅವಧಿಯಲ್ಲಿ ಶೇ. 8ರಷ್ಟು ವೃದ್ಧಿಯಾಗಿತ್ತು. ಹಾಗಾಗಿ, 2018-19ರ ಶೇ. 5ರ ಅಲ್ಪ ಹೆಚ್ಚಳವು ಆ ಸಮಯದಲ್ಲೇ ಅಧಿಕೃತ ಅರ್ಥಶಾಸ್ತ್ರಜ್ಞರಲ್ಲಿ ಸಾಕಷ್ಟು ಕಳವಳ ಉಂಟುಮಾಡಿತ್ತು. ಅಂದರೆ, ಅರ್ಥವ್ಯವಸ್ಥೆಯು 2019-20ರಲ್ಲೇ ಸ್ಥಗಿತಗೊಂಡಿತ್ತು. ಆ ಪರಿಸ್ಥಿತಿಯಲ್ಲಿ ಅಪ್ಪಳಿಸಿದ ಸಾಂಕ್ರಾಮಿಕವು ಅರ್ಥವ್ಯವಸ್ಥೆಯನ್ನು ಹಾನಿಗೊಳಪಡಿಸಿತು. ಈಗ ಅದು ಇನ್ನೂ ಹೆಚ್ಚಿನ ಹಾನಿಗೊಳಗಾಗಿದೆ. ಈ ನಡುವೆ, ಆರ್ಥಿಕ ಸಂಕಷ್ಟಗಳು ಕೊರೊನಾದಿಂದಾಗಿ ಸಂಭವಿಸಿದವು; ಅದಕ್ಕೂ ಮೊದಲು ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು ಎಂಬ ಒಂದು ತಪ್ಪು ಕಲ್ಪನೆಯನ್ನು ಹರಡಲಾಗಿತ್ತು. ಆದರೆ, ಇದ್ದಕ್ಕಿದ್ದಂತೆ ಎರಗಿದ ಸಾಂಕ್ರಾಮಿಕವು ಮರೆಯಾದ ಸಾಕಷ್ಟು ಸಮಯದ ನಂತರವೂ, ಅಧಿಕೃತ ವಕ್ತಾರರ ಆಶಾವಾದದ ಗಾಳಿಮಾತುಗಳನ್ನು ಹುಸಿಗೊಳಿಸಿ, ಅರ್ಥವ್ಯವಸ್ಥೆಯು ಅಲ್ಲೇ ನಿಂತಿದೆ. ಅರ್ಥವ್ಯವಸ್ಥೆಯ ಈ ಸ್ಥಗಿತತೆಯು ನಿಜಕ್ಕೂ ಕಳವಳಕಾರಿಯಾಗಿದೆ. ಏಕೆಂದರೆ, ಭಾರತದಲ್ಲಿ ನವ-ಉದಾರವಾದವು ತನ್ನ ಒಳ್ಳೆಯ ದಿನಗಳು ಎಂದು ಮೆರೆಯುತ್ತಿದ್ದ ವರ್ಷಗಳಲ್ಲಿ ಜಿಡಿಪಿಯು ಉನ್ನತವಾಗಿ ಬೆಳೆಯುತ್ತಿದ್ದರೂ ಸಹ ದುಡಿಯುವ ಜನರು ಸಂಕಷ್ಟಗಳಿಗೆ ತಳ್ಳಲ್ಪಟ್ಟಿದ್ದರು. ಆದ್ದರಿಂದ, ಅರ್ಥವ್ಯವಸ್ಥೆಯು ಸ್ಥಗಿತಕ್ಕೊಳಗಾಗಿರುವಾಗ ದುಡಿಯುವ ಜನರು ಇನ್ನೂ ಹೆಚ್ಚಿನ ಸಂಕಷ್ಟಗಳಿಗೆ ಒಳಗಾಗುತ್ತಾರೆ.

ಈ ಸ್ಥಗಿತತೆಯ ಮೂಲ ಕಾರಣವೆಂದರೆ, ಜನರ ಕೊಳ್ಳುವ ಶಕ್ತಿ ಕುಸಿತವಾಗಿರುವ ಅಂಶವೇ. ಈ ಕುಸಿತವು ನವ-ಉದಾರವಾದದ ಅಡಿಯಲ್ಲಿ ಆದಾಯಗಳ ಅಸಮತೆಗಳು ಹೆಚ್ಚುವ ಕಾರಣದಿಂದ ಸಂಭವಿಸುತ್ತದೆ ಮತ್ತು ಅದು ಇರುವ ಸ್ಥಿತಿಯಲ್ಲೇ ಉಳಿಯುತ್ತದೆ ಅಥವಾ ಕುಸಿಯುತ್ತದೆ. ಈ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಉದಾಹರಣೆಯಾಗಿ ಹೇಳುವುದಾದರೆ, 2019-20 ಮತ್ತು 2022-23ರ ಮೊದಲ ತ್ರೈಮಾಸಿಕಗಳ ನಡುವೆ ಖಾಸಗಿ ಬಳಕೆಯ ವೆಚ್ಚಗಳ ಹೆಚ್ಚಳವು ಜಿಡಿಪಿಯ ಬೆಳವಣಿಗೆಯ ದರಕ್ಕಿಂತಲೂ ಹೆಚ್ಚಿಗೆ ಇದೆ. ಅವರ ಕೊಳ್ಳುವ ಶಕ್ತಿಯ ಕೊರತೆಯಿಂದಾಗಿ ದುಡಿಯುವ ಜನರ ಬಳಕೆ ಕುಗ್ಗಿದೆ, ನಿಜ. ಆದರೆ, ಶ್ರೀಮಂತರು ಮತ್ತು ಅನುಕೂಲಸ್ಥರು ಸಾಂಕ್ರಾಮಿಕದ ಅವಧಿಯಲ್ಲಿ ತಡೆಹಿಡಿದಿದ್ದ ಬಳಕೆಯು ಈಗ ಇದ್ದಕ್ಕಿದ್ದಂತೆ ವೃದ್ಧಿಸಿದೆ. ಹಾಗಾಗಿ ಖಾಸಗಿ ಬಳಕೆಯ ಒಟ್ಟು ವೆಚ್ಚಗಳು ದೊಡ್ಡದಾಗಿ ಕಾಣುತ್ತವೆ. ಆದರೂ, ಜಿಡಿಪಿಯ ಸ್ಥಗಿತತೆಗೆ ತಕ್ಷಣದ ಕಾರಣ ಬೇರೆಡೆಯಲ್ಲಿದೆ: ಹೆಚ್ಚಿನ ಮಟ್ಟದ ಒಟ್ಟಾರೆ ಬೇಡಿಕೆಯನ್ನು ಮತ್ತು ಅದರಿಂದಾಗಿ ಜಿಡಿಪಿಯ ಹೆಚ್ಚಳವನ್ನು ಎರಡು ಅಧಿಕ ಅಂಶಗಳು ತಡೆಯುತ್ತವೆ. ಅವುಗಳೆಂದರೆ: ಸರ್ಕಾರದ ಬಳಕೆ ವೆಚ್ಚಗಳ ಸ್ಥಗಿತತೆ, ಮತ್ತು, ವಿದೇಶ ವ್ಯಾಪಾರ ಕೊರತೆಯ ಹೆಚ್ಚಳ, ಅಂದರೆ, ರಫ್ತುಗಳಿಗಿಂತ ಆಮದುಗಳ ಹೆಚ್ಚಳ.


2011-12ರ ಬೆಲೆಗಳ ಮಟ್ಟದಲ್ಲಿ ಖಾಸಗಿ ಬಳಕೆಯ ವೆಚ್ಚಗಳು 2019-20ರ ಮೊದಲ ತ್ರೈಮಾಸಿಕ ಮತ್ತು 2022-23ರ ಮೊದಲ ತ್ರೈಮಾಸಿಕದ ನಡುವೆ 19.74 ಲಕ್ಷ ಕೋಟಿ ರೂ.ಗಳಿಂದ 22.08 ಲಕ್ಷ ಕೋಟಿ ರೂ.ಗಳಿಗೆ ಏರಿದ ಸಮಯದಲ್ಲಿ, ಸ್ಥಿರ ಬಂಡವಾಳದ ಒಟ್ಟು ಒದಗುವಿಕೆಯು 11.66 ಲಕ್ಷ ಕೋಟಿ ರೂ.ಗಳಿಂದ 12.78 ಲಕ್ಷ ಕೋಟಿ ರೂ.ಗಳಿಗೆ ಏರಿದ ಸಮಯದಲ್ಲಿ, ಸರ್ಕಾರದ ಬಳಕೆ ವೆಚ್ಚಗಳು 4.21 ಲಕ್ಷ ಕೋಟಿ ರೂ.ಗಳಿಂದ 4.14ಲಕ್ಷ ಕೋಟಿ ರೂ.ಗಳಿಗೆ ಇಳಿಕೆಯಾಗಿವೆ. ಅದೇ ಸಮಯದಲ್ಲಿ ರಫ್ತುಗಳಿಗಿಂತ ಆಮದುಗಳ ಆಧಿಕ್ಯವು 1.62 ಲಕ್ಷ ಕೋಟಿ ರೂ.ಗಳಿಂದ 2.98 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ವ್ಯಾಪಾರ ಕೊರತೆ ಮತ್ತು ಜಿಡಿಪಿಯ ಅನುಪಾತವು (ಈ ಎರಡೂ ಮೊತ್ತಗಳನ್ನು ಪ್ರಸ್ತುತ ಬೆಲೆಗಳಲ್ಲಿ ಲೆಕ್ಕಹಾಕಲಾಗಿದೆ)2019-20ರ ಮೊದಲ ತ್ರೈಮಾಸಿಕದ ಶೇ.4 ರಿಂದ 2022-23ರ ಮೊದಲ ತ್ರೈಮಾಸಿಕದಲ್ಲಿ ಶೇ. 5.3ಕ್ಕೆ ಏರಿಕೆಯಾಗಿದೆ. ವ್ಯಾಪಾರ ಕೊರತೆ ಮತ್ತು ಜಿಡಿಪಿಯ ಅನುಪಾತವು ಒಂದು ವೇಳೆ 2019-20ರ ಮೊದಲ ತ್ರೈಮಾಸಿಕದ ಮಟ್ಟವನ್ನೇ 2022-23ರ ಮೊದಲ ತ್ರೈಮಾಸಿಕದವರೆಗೂ ಕಾಪಾಡಿಕೊಂಡಿದ್ದರೆ, ಈ ಎರಡು ತ್ರೈಮಾಸಿಕಗಳ ನಡುವಿನ ಜಿಡಿಪಿ ಬೆಳವಣಿಗೆ ದರವು ಈಗ ಘಟಿಸಿದ ಶೇ. 2.8ರ ಕೆಳ ಮಟ್ಟದ ಬದಲಾಗಿ ಶೇ. 4.1ರ ಉನ್ನತ ಮಟ್ಟದಲ್ಲಿರುತ್ತಿತ್ತು.

ಉಲ್ಬಣಗೊಳಿಸಿದ ಎರಡು ಅಂಶಗಳು

ಈ ರೀತಿಯಲ್ಲಿ, ಬೆಳೆಯುತ್ತಿರುವ ಆದಾಯಗಳ ಅಸಮಾನತೆಗಳ ಮೂಲ ಸಮಸ್ಯೆಗಿಂತ ಹೆಚ್ಚಾಗಿ, ಅರ್ಥವ್ಯವಸ್ಥೆಯ ಸ್ಥಗಿತತೆಯನ್ನು ಉಲ್ಬಣಗೊಳಿಸಿದ ತಕ್ಷಣದ ಎರಡು ಅಧಿಕ ಅಂಶಗಳೆಂದರೆ: ಮೊದಲನೆಯದು, ಸರ್ಕಾರದ ಬಳಕೆಯ (ಹೂಡಿಕೆಯೇತರ) ವೆಚ್ಚಗಳನ್ನು ತಗ್ಗಿಸಿದ ವಿತ್ತೀಯ ಸಂಪ್ರದಾಯಶರಣತೆ; ಮತ್ತು, ಎರಡನೆಯದು, ಒಟ್ಟು ವೆಚ್ಚಗಳಲ್ಲಿ ಹೆಚ್ಚಿನ ಪ್ರಮಾಣವು ಆಮದುಗಳ ರೂಪದಲ್ಲಿ ವಿದೇಶಗಳಿಗೆ "ಸೋರಿಕೆ"ಯಾದ ಅಂಶ. ವಿತ್ತೀಯ ಸಂಪ್ರದಾಯಶರಣತೆ ಮತ್ತು ಅಡೆ ತಡೆ ಇಲ್ಲದ ಮುಕ್ತ ಆಮದುಗಳು, ಇವೆರಡೂ ಬೆಳೆಯುತ್ತಿರುವ ಆದಾಯ ಅಸಮಾನತೆಗಳ ಮೂಲ ಸಮಸ್ಯೆಯ ಹಾಗೆ ನವ-ಉದಾರವಾದಿ ಆಳ್ವಿಕೆಯ ಲಕ್ಷಣಗಳೇ. ಬೆಳೆಯುತ್ತಿರುವ ಆದಾಯಗಳ ಅಸಮಾನತೆಗಳು ಅದರಲ್ಲಿ ನೆಲಸಿರುವ ಪ್ರವೃತ್ತಿಯೇ ಆಗಿರುವ ಕಾರಣದಿಂದಾಗಿ ನವ-ಉದಾರವಾದವು ಅರ್ಥವ್ಯವಸ್ಥೆಯ ದೀರ್ಘಕಾಲೀನ ಸ್ಥಗಿತತೆಗೆ ಆಧಾರಭೂತವಾಗಿದೆ ಮಾತ್ರವಲ್ಲ, ಅದರ ಸ್ಥಗಿತತೆಯನ್ನು ಉಲ್ಬಣಗೊಳಿಸಿದ ಎರಡು ಅಧಿಕ ಅಂಶಗಳನ್ನೂ ಒಳಗೊಂಡಿದೆ. ಅದಕ್ಕಿಂತಲೂ ಮುಖ್ಯವಾದ ಅಂಶವೆಂದರೆ, ಈ ಸ್ಥಗಿತತೆಯು ಮುಂಬರುವ ದಿನಗಳಲ್ಲಿ ಕನಿಷ್ಠ ಎರಡು ಕಾರಣಗಳಿಂದಾಗಿ ಮತ್ತಷ್ಟು ಹದಗೆಡಲಿದೆ.

ಮೊದಲನೆಯ ಕಾರಣವು, ಅರ್ಥವ್ಯವಸ್ಥೆಯ ಸ್ಥಗಿತತೆ ಹೀಗೆಯೇ ಮುಂದುವರೆದರೆ, ಬಂಡವಾಳ ಹೂಡಿಕೆಯು ಈಗಿರುವ ಮಟ್ಟದಲ್ಲೂ ಉಳಿಯುವುದಿಲ್ಲ ಎಂಬುದಕ್ಕೆ ಸಂಬಂಧಿಸುತ್ತದೆ. ಏಕೆಂದರೆ, 2019-20 ಮತ್ತು 2022-23ರ ನಡುವಿನ ಮೂರು ವರ್ಷಗಳ ಅವಧಿಯಲ್ಲಿ, ಹೇಳಿಕೊಳ್ಳುವಂಥಹ

ಪುಟ 15 ಕ್ಕೆ



ಚಿಲಿಯ ಜನ ಅತ್ಯಂತ ಪ್ರಗತಿಪರ ಸಂವಿಧಾನವನ್ನು ಏಕೆ ತಿರಸ್ಕರಿಸಿದರು?

ಜಗತ್ತಿನಲ್ಲಿಯೇ ಅತ್ಯಂತ ಪ್ರಜಾಸತ್ತಾತ್ಮಕವಾಗಿ ರಚಿಸಲಾದ ಅತ್ಯಂತ ಪ್ರಗತಿಪರ ಜನಪರ ಸಂವಿಧಾನವನ್ನು ಚಿಲಿಯ ಜನತೆ ತಿರಸ್ಕರಿಸಿದ್ದು ಅದೂ ಭಾರೀ ಪ್ರಮಾಣದಲ್ಲಿ ಜಗತ್ತಿನಾದ್ಯಂತ ಆಶ್ಚರ್ಯ ಮತ್ತು ತೀವ್ರ ಆತಂಕಗಳನ್ನು ಉಂಟುಮಾಡಿದೆ. ಇದಕ್ಕೆ ಕಾರಣಗಳೇನು ಎಂದು ವ್ಯಾಪಕ ಚರ್ಚೆ, ವಿಶ್ಲೇಷಣೆಗಳು ನಡೆಯುತ್ತಿವೆ. ಈ ಕುರಿತು ಒಂದು ವಿಶ್ಲೇಷಣೆ

ಜಗದ ಸುತ್ತ

ವಸಂತರಾಜ ಎನ್.ಕೆ.

ಸೆಪ್ಟೆಂಬರ್ 4 ರಂದು ನಡೆದ ಜನಮತ ಸಂಗ್ರಹದಲ್ಲಿ ಚಿಲಿಯ ಜನರು ಜುಲೈ 4 ರಂದು ಅಂತಿಮಗೊಳಿಸಲಾದ ಹೊಸ ಕರಡು ಸಂವಿಧಾನವನ್ನು ಭಾರೀ ಬಹುಮತದಿಂದ ತಿರಸ್ಕರಿಸಿದ್ದಾರೆ. ಸುಮಾರು ಶೇ.80 ಮತದಾರರು ಮತ ಚಲಾಯಿಸಿದ್ದು, ಮತದಾನ ಮಾಡಿದವರಲ್ಲಿ ಶೇ. 62ರಷ್ಟು ಅಂದರೆ ಸುಮಾರು 80 ಲಕ್ಷ ಜನ "ತಿರಸ್ಕರಿಸಿದ್ದೇನೆ" ಆಯ್ಕೆಗೆ ಮತ ಚಲಾಯಿಸಿದ್ದಾರೆ. ಶೇ.38ರಷ್ಟು ಅಂದರೆ ಸುಮಾರು 49 ಲಕ್ಷ ಜನ 'ಅನುಮೋದಿಸಿದ್ದೇನೆ' ಆಯ್ಕೆ ಮಾಡಿಕೊಂಡಿದ್ದಾರೆ. ಜಗತ್ತಿನಲ್ಲಿಯೇ ಅತ್ಯಂತ ಪ್ರಜಾಸತ್ತಾತ್ಮಕವಾಗಿ ರಚಿಸಲಾದ ಅತ್ಯಂತ ಪ್ರಗತಿಪರ ಜನಪರ ಸಂವಿಧಾನವನ್ನು ಚಿಲಿಯ ಜನತೆ ತಿರಸ್ಕರಿಸಿದ್ದು ಅದೂ ಇಷ್ಟು ಭಾರೀ ಪ್ರಮಾಣದಲ್ಲಿ ಜಗತ್ತಿನಾದ್ಯಂತ ಆಶ್ಚರ್ಯ ಮತ್ತು ತೀವ್ರ ಆತಂಕಗಳನ್ನು ಉಂಟುಮಾಡಿದೆ. ಇದಕ್ಕೆ ಕಾರಣಗಳೇನು ಎಂದು ವ್ಯಾಪಕ ಚರ್ಚೆ, ವಿಶ್ಲೇಷಣೆಗಳು ನಡೆಯುತ್ತಿವೆ.

ಹೊಸ ಸಂವಿಧಾನ ರಚಿಸುವ ಪ್ರಕ್ರಿಯೆ ಅಕ್ಟೋಬರ್ 2019ರಲ್ಲಿ ನಡೆದ ಯುವಜನ ಮತ್ತು ಕಾರ್ಮಿಕರ ಅಭೂತಪೂರ್ವ ಪ್ರತಿಭಟನಾ ಪ್ರದರ್ಶನಗಳು ಮತ್ತು ದಂಗೆಯಿಂದ ಆರಂಭವಾಗಿತ್ತು. ಪ್ರತಿಭಟನೆಗಳು ಆರಂಭವಾಗಿದ್ದು ಮೆಟ್ರೊ ಬೆಲೆಏರಿಕೆಯ ವಿರುದ್ಧವಾಗಿ, ಆದರೆ ತೀವ್ರ ಅಸಮಾನತೆ, ಖಾಸಗೀಕರಣ ಮತ್ತು ಮಿತವ್ಯಯದ ಹೆಸರಲ್ಲಿ ಆರ್ಥಿಕ ಸಂಕಷ್ಟಗಳ ಹೊರೆ ಹಾಗೂ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ಜನರಿಗೆ ನಿಲುಕದೆ ಹೋಗುವುದರ ವಿರುದ್ಧವಾಗಿ ಬೃಹದಾಕಾರವಾಗಿ ಬೆಳೆದು ಹಲವು ತಿಂಗಳುಗಳ ಕಾಲ ನಡೆಯಿತು. ಇದರ ಭಾಗವಾಗಿ, ಜನರ ಮೇಲೆ ಸಂಕಟಗಳನ್ನು ಹೇರುವ ನೀತಿಗಳ ಮೂಲ ಆಧಾರವಾಗಿದ್ದ ಮಿಲಿಟರಿ ಸರ್ವಾಧಿಕಾರಿ ಪಿನೊಶೆ 1980ರಲ್ಲಿ ರೂಪಿಸಿದ ಸಂವಿಧಾನದ ವಿರುದ್ಧ ಆಕ್ರೋಶ ಮೂಡಿದ್ದು ಸಂವಿಧಾನವನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂದು ತೀವ್ರ ಒತ್ತಡ ಬಂದಿತ್ತು.

ಈ ಒತ್ತಡಕ್ಕೆ ಮಣಿದು ಆಗಿನ ಶತಕೋಟ್ಯಾಧಿಪತಿ ಅಧ್ಯಕ್ಷ ಈ ಕುರಿತು ಜನಮತಸಂಗ್ರಹ ಏರ್ಪಡಿಸಲು ಒಪ್ಪಿದ್ದ. ಆ ಪ್ರಕಾರ ಅಕ್ಟೋಬರ್ 25, 2020 ರಂದು ಜನಮತಸಂಗ್ರಹ ನಡೆದು ಶೇ.75ಕ್ಕೂ ಹೆಚ್ಚು ಜನ ಸಂವಿಧಾನವನ್ನು ಬದಲಾಯಿಸಬೇಕು ಮತ್ತು ಅದಕ್ಕಾಗಿ ಚುನಾಯಿತ ಸಂವಿಧಾನ ಕಮಿಶನ್ ರಚಿಸಬೇಕೆಂಬುದನ್ನು ಬೆಂಬಲಿಸಿದರು. ಮೇ 2021ರಲ್ಲಿ ಸಂವಿಧಾನ ಕಮಿಶನ್ ಗೆ ಚುನಾವಣೆ ನಡೆದು ಸಭೆಯ ರಚನೆಯಾಗಿ ಜುಲೈ 4, 2021ರಿಂದ ಕೆಲಸ ಪ್ರಾರಂಭಿಸಿತ್ತು. ಡಿಸೆಂಬರ್ 2021ರಲ್ಲಿ ಚುನಾವಣೆ ನಡೆದು ಎಡಪಂಥೀಯ ಯುವ ಅಧ್ಯಕ್ಷರ ಆಯ್ಕೆಯಾಗಿ ಎಡ–ನಡುಪಂಥೀಯ ಸರಕಾರ ಅಧಿಕಾರಕ್ಕೆ ಬಂದಿತ್ತು. ಹೊಸ ಸಂವಿಧಾನಕ್ಕೆ 15 ಸಾವಿರ ಜನರ ಸಹಿ ಇರುವ ಎಲ್ಲ ಕರಡು ಪ್ರಸ್ತಾವಗಳನ್ನು ಸಲ್ಲಿಸಲು ಅವಕಾಶವಿತ್ತು ಮತ್ತು ಅದರ ವ್ಯಾಪಕ ಬಳಕೆಯೂ ಆಯಿತು. ಸಂವಿಧಾನ ರಚನೆಯ ಪ್ರಕ್ರಿಯೆಯೇ ವ್ಯಾಪಕ ಉತ್ಸಾಹ, ಆಸಕ್ತಿ ಮತ್ತು ಪಾಲುಗೊಳ್ಳುವಿಕೆಯನ್ನು ಉಂಟು ಮಾಡಿತ್ತು.



ಜುಲೈ 4, 2022 ರಂದು ಅಂತಿಮಗೊಳಿಸಿದ ಸಂವಿಧಾನವನ್ನು ಸರಕಾರಕ್ಕೆ ಸಲ್ಲಿಸಲಾಯಿತು. ಅದನ್ನು ಸರಕಾರ ಅಂಗೀಕರಿಸಿ ಸೆಪ್ಟೆಂಬರ್ 4, 2022 ರಂದು ಜನಮತಸಂಗ್ರಹವನ್ನು ಏರ್ಪಡಿಸಿತ್ತು. ಹೊಸ ಕರಡು ಸಂವಿಧಾನವನ್ನು 'ಅನುಮೋದಿಸುತ್ತೇನೆ' ಆಯ್ಕೆಗೆ ಬೆಂಬಲವಾಗಿ ಎಡ–ನಡುಪಂಥೀಯ ರಾಜಕೀಯ ಪಕ್ಷಗಳು/ಶಕ್ತಿಗಳು ಮತ್ತು 'ತಿರಸ್ಕರಿಸುತ್ತೇನೆ' ಆಯ್ಕೆಗೆ ಬೆಂಬಲವಾಗಿ ಬಲಪಂಥೀಯ ರಾಜಕೀಯ ಪಕ್ಷಗಳು/ಶಕ್ತಿಗಳು ತೀವ್ರ ಪ್ರಚಾರಾಂದೋಲನ ನಡೆಸಿದ್ದವು. ಇದರ ಭಾಗವಾಗಿ ಹೊಸ ಕರಡು ಸಂವಿಧಾನ ಚಿಲಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹೆಚ್ಚು ಮಾರಾಟವಾದ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಡೌನ್ ಲೋಡ್ ಮಾಡಿಕೊಳ್ಳಲಾದ ಪುಸ್ತಕವಾಗಿತ್ತು.

ಸಂವಿಧಾನದಲ್ಲಿ ಏನಿದೆ?

ಸಂವಿಧಾನ ಹಲವು ರಾಜಕೀಯ, ಸಾಮಾಜಿಕ ಆರ್ಥಿಕ ಹಕ್ಕುಗಳನ್ನು ಜನತೆಗೆ ನೀಡಿತ್ತು. ಪ್ರಜಾಪ್ರಭುತ್ವ, ಸಮಾನತೆ, ಸಾಮಾಜಿಕ ನ್ಯಾಯದ ಜಾರಿಯಲ್ಲಿ ತೀವ್ರ ಸುಧಾರಣೆಗಳನ್ನು ತರುವ ಹಲವು ಜನಪರ ಪ್ರಗತಿಪರ ನಿಲುವುಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿತ್ತು. ಸಂವಿಧಾನದ ಕೆಲವು ಪ್ರಮುಖ ಅಂಶಗಳು ಹೀಗಿವೆ :

* ಸುಮಾರು ಶೇ.13 ರಷ್ಟು ಇರುವ ಆದಿವಾಸಿಗಳಿಗೆ ಸ್ವಯಮಾಡಳಿತದ ಹಕ್ಕು
* ಶಿಕ್ಷಣ, ಆರೋಗ್ಯ ಸೇವೆ, ಮನೆಗಳು ಮತ್ತು ಪಿಂಚಣಿ ನಾಗರಿಕರ ಹಕ್ಕು. ಇದನ್ನು ಒದಗಿಸುವುದು ಸರಕಾರದ ಪ್ರಾಥಮಿಕ ಜವಾಬ್ದಾರಿ.
* ಕೆಳಸದನಕ್ಕೆ ಹೆಚ್ಚಿನ ಅಧಿಕಾರ, ಮೇಲ್ಸದನದ ಅಧಿಕಾರ ಕಡಿತ
* ಎಲ್ಲ ಸರಕಾರಿ ಸಂಸ್ಥೆಗಳು ಮತ್ತು ಏಜೆನ್ಸಿಗಳಲ್ಲಿ ಪದಾಧಿಕಾರಿಗಳು ಮತ್ತು ಅಧಿಕಾರಿಗಳಲ್ಲಿ ಕನಿಷ್ಠ ಶೇ.50 ಮಹಿಳೆಯರಿರಬೇಕು
* ಮಹಿಳೆಯರ ಲೈಂಗಿಕ ಮತ್ತು ಗರ್ಭಧಾರಣೆಯ ಪೂರ್ಣ ಸ್ವಾತಂತ್ರ್ಯಕ್ಕೆ ಮಾನ್ಯತೆ. ಗರ್ಭಪಾತದ ನಿಷೇಧ ಮತ್ತು ದಂಡ ವಿಧಿಸುವುದಕ್ಕೆ ಕತ್ತರಿ
* ದೇಶದ ಎಲ್ಲ ಪ್ರಾಕೃತಿಕ ಸಂಪತ್ತು (ಜಲಮೂಲಗಳು, ಗಣಿಗಳು ಇತ್ಯಾದಿ) ಪ್ರಭುತ್ವದ ಸ್ವತ್ತು ಮತ್ತು ಅದರ ನಿರ್ವಹಣೆ, ಸಂರಕ್ಷಣೆ ಪ್ರಭುತ್ವದ ಕರ್ತವ್ಯ. ಸ್ಪಷ್ಟ ಸಾರ್ವಜನಿಕ ಹಿತಾಸಕ್ತಿ ಇದ್ದರೆ ಮಾತ್ರ ಅದರ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಬಹುದು.
* ಪರಿಸರ ಸಂರಕ್ಷಣೆ, ಪರಿಸರ ತಾಳಿಕೊಳ್ಳಬಹುದಾದ ಅಭಿವೃದ್ಧಿ, ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅದರ ಅನ್ವಯ, ಹವಾಮಾನ ಬದಲಾವಣೆ ಪರಿಹಾರ ಕ್ರಮಗಳು – ಇವು ಪ್ರಭುತ್ವದ ಜವಾಬ್ದಾರಿ. ಪ್ರಕೃತಿಗೂ ಅದರದೇ ಆದ ಹಕ್ಕುಗಳಿವೆ.
* ಬೌದ್ಧಿಕ ಹಕ್ಕುಗಳಿಗೆ ಮಾನ್ಯತೆಯಿಲ್ಲ

ಈ ಪ್ರಗತಿಪರ ಜನಪರ ಸಂವಿಧಾನದ ಕರಡು ಅಂತರರಾಷ್ಟ್ರೀಯ ಗಮನ ಸೆಳೆದಿತ್ತು. ಅದು ವಿಜ್ಞಾನ ಮತ್ತು ಪರಿಸರ ತಾಳಿಕೊಳ್ಳಬಹುದಾದ ಅಭಿವೃದ್ಧಿಗೆ ಕೊಟ್ಟಿರುವ ಒತ್ತನ್ನು ಪ್ರಸಿದ್ಧ ಪ್ರತಿಷ್ಠಿತ ವಿಜ್ಞಾನ ಪತ್ರಿಕೆ 'ನೇಚರ್' ಲೇಖನವೊಂದರಲ್ಲಿ 'ವಿಜ್ಞಾನದಲ್ಲಿ ಮಿಂದ ಸಂವಿಧಾನ' ಎಂದು ಹೊಗಳಿತ್ತು. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಮಿಶನ್ "ಜನ ಪಾಲುಗೊಳ್ಳುವ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳನ್ನು ಅಗಾಧವಾಗಿ ವಿಸ್ತರಿಸಿದ ಸಂವಿಧಾನ' ಎಂದು ಬಣ್ಣಿಸಿತ್ತು. ಅದರ ಕರಡು ಪ್ರಸ್ತಾವಗಳ ತಯಾರಿಯಲ್ಲಿ ಸಹಾಯ ನೀಡಿತ್ತು.



ಸಂವಿಧಾನದ ತಿರಸ್ಕಾರಕ್ಕೆ ಕಾರಣವಾದ ಅಂಶಗಳು

ಇಂತಹ ಜನಪರ ಪ್ರಗತಿಪರ ಸಂವಿಧಾನದ ಕರಡನ್ನು ಚಿಲಿಯ ಜನ ಯಾಕೆ ತಿರಸ್ಕರಿಸಿದರು ? ಇದಕ್ಕೆ ಹಲವು ಕಾರಣಗಳನ್ನು ಕೊಡಲಾಗಿದೆ. ಅವುಗಳಲ್ಲಿ ಪ್ರಮುಖವಾದ ಕೆಲವು ಹೀಗಿವೆ:

* ಗಣಿಗಳು ಇತ್ಯಾದಿ ಪ್ರಾಕೃತಿಕ ಸಂಪತ್ತುಗಳ ಖಾಸಗೀಕರಣದ ನಿಷೇಧ, ಬೌದ್ಧಿಕ ಹಕ್ಕುಗಳಿಗೆ ಅಮಾನ್ಯತೆ ಇತ್ಯಾದಿ ಸಂವಿಧಾನದ ಕಲಮುಗಳು, ದೇಶೀಯ ಮತ್ತು ಬಹುರಾಷ್ಟ್ರೀಯ ಕಾರ್ಪೊರೆಟ್ ಗಳನ್ನು ಆತಂಕಕ್ಕೀಡು ಮಾಡಿದ್ದವು. ಆದ್ದರಿಂದ ಅವು ಬಲಪಂಥೀಯ ಶಕ್ತಿಗಳ ಜತೆ ಸೇರಿ ತಮ್ಮ ಮಾಧ್ಯಮ ಬಲ ಮತ್ತು ಸಾಮಾಜಿಕ ಮಾಧ್ಯಮ ಬಳಸಿ ತೀವ್ರ ಅಪಪ್ರಚಾರ ಮಾಡಿದವು. ಹೊಸ ಸಂವಿಧಾನದ ವಿರುದ್ಧ ಹಲವು ಸುಳ್ಳು ವದಂತಿಗಳನ್ನು ಹರಡಲಾಯಿತು. ಮನೆಗಳು ಮತ್ತು ಪಿಂಚಣಿ ನಾಗರಿಕರ ಹಕ್ಕು ಮತ್ತು ಅದನ್ನು ಒದಗಿಸುವುದು ಪ್ರಭುತ್ವದ ಜವಾಬ್ದಾರಿ ಎಂಬುದನ್ನು ತಿರುಚಿ ಮನೆ, ಪೆನ್ಶನ್ ಗಳನ್ನು ಸರಕಾರ ಕಿತ್ತುಕೊಳ್ಳುತ್ತದೆ ಎಂದು ಪ್ರಚಾರ ಮಾಡಲಾಯಿತು. ಆದಿವಾಸಿಗಳಿಗೆ ಸ್ವಾಯತ್ತತೆಯನ್ನು ತಿರುಚಿ ಆದಿವಾಸಿಗಳಿಗೆ ಪ್ರತ್ಯೇಕ ದೇಶವಾಗುವ ಹಕ್ಕುಗಳನ್ನು ಕೊಟ್ಟು ದೇಶ ಒಡೆಯಲು ಪ್ರಯತ್ನ ನಡೆದಿದೆ ಎಂದು ಆತಂಕ ಹುಟ್ಟಿಸಲಾಯಿತು. ಗರ್ಭಪಾತದ ಹಕ್ಕನ್ನು ತಿರುಚಿ 9 ತಿಂಗಳವರೆಗೂ ಗರ್ಭಪಾತಕ್ಕೆ ಅವಕಾಶವಿರುತ್ತದೆ ಎಂದು ಹೇಳುತ್ತಾ ಕ್ಯಾಥೊಲಿಕ್ ಧಾರ್ಮಿಕ ನಂಬಿಕೆಗಳನ್ನು ಕೆರಳಿಸಲಾಯಿತು. ಒಂದು ಸಮೀಕ್ಷೆಯ ಪ್ರಕಾರ ಸಂವಿಧಾನ 'ತಿರಸ್ಕಾರ' ಆಯ್ಕೆ ಮಾಡಿದವರಲ್ಲಿ ಶೇ. 52 ರಷ್ಟು ಜನ ಈ ಅಪಪ್ರಚಾರಗಳಲ್ಲಿ ಒಂದಕ್ಕೆ ಬಲಿಯಾದರು.
* ಈ ಅಪಪ್ರಚಾರವನ್ನು ಸಂವಿಧಾನ ಕಮಿಶನ್ ಆಗಲಿ ಸಂವಿಧಾನದ ಪರವಾಗಿದ್ದ ನಡು–ಎಡಪಂಥೀಯ ಶಕ್ತಿಗಳು ಪರಿಣಾಮಕಾರಿಯಾಗಿ ಎದುರಿಸಲಿಲ್ಲ, ಸಂವಿಧಾನದ ಜನಮತಸಂಗ್ರಹದ ಕುರಿತ ಪ್ರಚಾರಕ್ಕೆ 'ತಿರಸ್ಕಾರ' ಗುಂಪು 'ಅನುಮೋದನೆ' ಗುಂಪಿಗಿಂತ 4 ಪಟ್ಟು ಖರ್ಚು ಮಾಡಿತು.
* ಸಂವಿಧಾನದ ಕುರಿತು ವಾಗ್ವಾದಕ್ಕಿಂತ ಎಡ–ನಡುಪಂಥೀಯ ಸರಕಾರದ ಆರ್ಥಿಕ ವೈಫಲ್ಯಗಳು ಕೆಲವು ಜನವಿಭಾಗಗಳಿಗೆ ಮಹತ್ವದ ವಿಷಯವಾಗಿತ್ತು. ಚಿಲಿಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು ಈಗ ಶೇ.14ರಷ್ಟು ಬೆಲೆಏರಿಕೆ–ಹಣದುಬ್ಬರ ಉಂಟಾಗಿದ್ದು, ಇದು 28 ವರ್ಷಗಳಲ್ಲಿ ಅತಿ ಹೆಚ್ಚು ಎಂದು ದಾಖಲಾಗಿದೆ. ಈ ಕುರಿತು ಸರಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳದ್ದು ಅವರನ್ನು ಕೆರಳಿಸಿತ್ತು. ಈ ಜನವಿಭಾಗಗಳು ಸರಕಾರದ ಆರ್ಥಿಕ ವೈಫಲ್ಯಗಳ ವಿರುದ್ಧ ಪ್ರತಿಭಟನೆ ದಾಖಲಿಸಲು ಜನಮತಸಂಗ್ರಹವನ್ನು ಬಳಸಿಕೊಂಡವು. ಸಂವಿಧಾನ 'ಅನುಮೋದನೆ' ಗುಂಪು ಸಾಮಾಜಿಕ ರಾಜಕೀಯ ಹಕ್ಕುಗಳ ಕುರಿತು ಒತ್ತು ಕೊಟ್ಟಿದ್ದವು. ಸಂವಿಧಾನದ ಕಲಮುಗಳ ಆರ್ಥಿಕ ಪರಿಣಾಮಗಳ ಕುರಿತು ಒತ್ತು ಕೊಟ್ಟಿರಲಿಲ್ಲ.
* ಜನಮತಸಂಗ್ರಹದ ಕುರಿತು ಸರಕಾರ ತೆಗೆದುಕೊಂಡ ಕೆಲವು ಕ್ರಮಗಳು ಸಹ ಹೊಸ ಸಂವಿಧಾನಕ್ಕೆ 'ಸ್ವಯಂ–ಗೋಲು' ಆದವು. ಜನಮತಸಂಗ್ರಹಕ್ಕೆ ಮತದಾನವನ್ನು ➚

ಕಡ್ಡಾಯ ಮಾಡಿದ್ದು ಇಂತಹ ಒಂದು ಕ್ರಮ, ಚಿಲಿಯಲ್ಲಿ ಪಾರ್ಲಿಮೆಂಟರಿ ಚುನಾವಣೆಗಳಿಗೆ ಹಿಂದೆ ಕಡ್ಡಾಯ ಮತದಾನದ ನಿಯಮವಿದ್ದು ಇತ್ತೀಚೆಗೆ ಅದನ್ನು ತೆಗೆದು ಹಾಕಲಾಗಿತ್ತು. ದೂರಗಾಮಿ ಪರಿಣಾಮ ಬೀರುವ ಸಂವಿಧಾನದ ಕುರಿತ ಜನಮತಸಂಗ್ರಹದಲ್ಲಿ ಎಲ್ಲ ನಾಗರಿಕರು ಅಭಿಪ್ರಾಯ ವ್ಯಕ್ತಪಡಿಸುವಂತೆ ಕಡ್ಡಾಯ ಮಾಡುವುದು ಸೈದ್ಧಾಂತಿಕವಾಗಿ ಸರಿಯಾದರೂ ವಾಸ್ತವಿಕ ಸ್ಥಿತಿಯಲ್ಲಿ ಸರಿಯಾದ ರಾಜಕೀಯ ನಿಲುವು ಆಗಿರಲಿಲ್ಲ. ಕಳೆದ ಅಧ್ಯಕ್ಷೀಯ/ಪಾರ್ಲಿಮೆಂಟರಿ ಹಾಗು ಜನಮತಸಂಗ್ರಹದ ಮತದಾನದ ವಿಶ್ಲೇಷಣೆ ಮಾಡಿದರೆ ಆಳುವ ಎಡ-ನಡುಪಂಥೀಯ ರಂಗದ ಮತಗಳು 46 ಲಕ್ಷ ಇದ್ದಿದ್ದು ಸಂವಿಧಾನದ ಅನುಮೋದನೆಗೆ ಮತಗಳು 48 ಲಕ್ಷಕ್ಕೆ ಏರಿದ್ದವು ಅಂದರೆ 2 ಲಕ್ಷ ಜಾಸ್ತಿಯಾಗಿದ್ದವು. ಆದರೆ ವಿರೋಧಿ ರಂಗದ ಮತಗಳು 37 ಲಕ್ಷ ಇದ್ದಿದ್ದು ಸಂವಿಧಾನದ ತಿರಸ್ಕಾರಕ್ಕೆ ಮತಗಳು 79 ಲಕ್ಷಕ್ಕೇರಿದವು. ಅಂದರೆ ಕಡ್ಡಾಯ ಮತದಾನದ ಫಲವಾಗಿ 83 ಲಕ್ಷದಿಂದ 127 ಲಕ್ಷಕ್ಕೆ ಏರಿದಾಗ ಹೆಚ್ಚಿದ 44 ಲಕ್ಷ ಮತಗಳಲ್ಲಿ ಬಹುಭಾಗ ಸಂವಿಧಾನ 'ತಿರಸ್ಕಾರ' ಪರವಾಗಿ ಬಿದ್ದಿದ್ದವು. ಏಕೆಂದರೆ ಸಾಮಾನ್ಯವಾಗಿ ಮತದಾನವನ್ನೇ ಮಾಡದ ಇವರು ಯಾವುದೇ ರಾಜಕೀಯ ನಿಲುವು ಹೊಂದಿರುವವರಲ್ಲ. ರಾಜಕೀಯ ವ್ಯವಸ್ಥೆಯ 'ಹೊರಗಿರುವವರು'. ಸಂವಿಧಾನದ ಕುರಿತು ಏನನ್ನೂ ಅರಿಯದವರು. ಇವರಲ್ಲಿ ಹಲವರು ಅಪಪ್ರಚಾರಕ್ಕೆ ಸುಲಭವಾಗಿ ಗುರಿಯಾದರು. ಇಲ್ಲವೇ ಆರ್ಥಿಕ ವೈಫಲ್ಯದಿಂದ ರೇಗಿ ಮತದಾನ ಮಾಡಿದರು.

* ಅದೇ ರೀತಿ ಸಂವಿಧಾನ ಕಮಿಶನ್ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಲ್ಲದೆ ಸ್ವತಂತ್ರರು ತಮ್ಮದೇ ಪಟ್ಟಿ ಮಾಡಿಕೊಳ್ಳಬಹುದು ಎಂಬ ನಿಯಮ 'ಸಾಮಾಜಿಕ ಚಳುವಳಿಗಳ ಪ್ರತಿನಿಧಿಗಳು ಅವರ ಬಲಕ್ಕಿಂತ ಹೆಚ್ಚು ಪಾಲು ಪ್ರಾತಿನಿಧ್ಯ ಪಡೆಯುವಂತಾಯಿತು. ಹಲವು ರಾಜಕೀಯ ಪಕ್ಷಗಳಿಗೆ ಇದರಿಂದ ಪ್ರಾತಿನಿಧ್ಯ ಸಿಗಲಿಲ್ಲ. ಯಾವುದೇ ರಾಜಕೀಯ ಅನುಭವವಿಲ್ಲದ 'ಸಾಮಾಜಿಕ ಚಳುವಳಿ ಗಳ ಪ್ರತಿನಿಧಿಗಳು ಕಮಿಶನ್ ಸಭೆಗಳಲ್ಲಿ ಅತ್ಯಂತ ಬೇಜವಾಬ್ದಾರಿಯಿಂದ ನಡೆದುಕೊಂಡರು. ಕೆಲವು ಸೀಮಿತ ಅಜೆಂಡಾ ಇರುವ ಇವರು ತಮ್ಮ ಅಭಿಪ್ರಾಯಗಳಿಗೆ ಅಂಟಿಕೊಂಡು ಹಲವು ವಿಷಯಗಳ ಕುರಿತು ಸಹಮತಕ್ಕೆ ಬರುವುದಕ್ಕೆ ಅಡ್ಡಿಯಾದರು. ಅವರ ಬೇಜವಾಬ್ದಾರ ನಡವಳಿಕೆಗಳನ್ನು ಮಾಧ್ಯಮಗಳು ಬಲಪಂಥೀಯ ಶಕ್ತಿಗಳು ಸಂವಿಧಾನ ಪ್ರಕ್ರಿಯೆಯನ್ನೇ ದೂಷಿಸಲು ಬಳಸಿಕೊಂಡವು.
* ಸಂವಿಧಾನ ಕಮಿಶನ್ ಚುನಾವಣೆಯಲ್ಲಿ ಸ್ವತಂತ್ರರ ಪಟ್ಟಿಗೆ ಅವಕಾಶ ಹಲವು ನಡು, ನಡು-ಬಲಪಂಥೀಯ, ಬಲಪಂಥೀಯ ಧೋರಣೆಗಳಿಗೆ ಕಮಿಶನ್ ನಲ್ಲಿ ಪ್ರಾತಿನಿಧ್ಯ ಇಲ್ಲದಂತಾಯಿತು. ಇವುಗಳಿಗೆ ಪ್ರಾತಿನಿಧ್ಯ ಇದ್ದರೆ ಕಮಿಶನ್ ನ ಚರ್ಚೆಗಳಲ್ಲಿ ಭಾಗವಹಿಸಿ ಅದು ರೂಪಿಸಿದ ಸಂವಿಧಾನಕ್ಕೂ ಹೆಚ್ಚಿನ ಜನವಿಭಾಗಗಳ ಭಾಗವಹಿಸುವಿಕೆ ಇರುತ್ತಿತ್ತು. ಇದಕ್ಕೆ ಅವಕಾಶ ಇಲ್ಲವಾದ್ದರಿಂದ ಈ ಶಕ್ತಿಗಳು ಮೊದಲಿನಿಂದಲೇ ಹೊಸ ಸಂವಿಧಾನದ ವಿರುದ್ಧ ಅಪಪ್ರಚಾರ ಆರಂಭಿಸಿದವು.
* ಚಿಲಿಯ ಬಹುಸಂಖ್ಯಾತ ಕ್ಯಾಥೊಲಿಕರಲ್ಲಿ ಹಲವರಿಗೆ ಗರ್ಭಪಾತ ಧಾರ್ಮಿಕ ನಂಬಿಕೆಯ ವಿಷಯವಾಗಿತ್ತು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಹೊಸ ಇವಾಂಜಲಿಕ್ ಪಂಥಗಳು ವಿಶೇಷವಾಗಿ ಗರ್ಭಪಾತದ ಕುರಿತು ಇನ್ನಷ್ಟು ಉಗ್ರಮತ ವಹಿಸಿದವು. ಬಲಪಂಥೀಯ ಶಕ್ತಿಗಳು ಇವಾಂಜಲಿಕ್ ಪಂಥಗಳಲ್ಲಿ ವಿಶೇಷ ಪ್ರಚಾರ ಮಾಡಿ ಅವರನ್ನು ಸಂವಿಧಾನದ ವಿರುದ್ಧ ತಿರುಗಿಸಿದವು.

ಮುಂದೇನು?

ಮೇಲಿನ ಕಾರಣಗಳನ್ನು ಇನ್ನೊಂದು ರೀತಿಯಲ್ಲಿ ಪರಿಶೀಲಿಸಿದರೆ ಈ ಜನಮತಸಂಗ್ರಹ ಪಿನೋಶೆ ಸಂವಿಧಾನ ಬದಲಾವಣೆಗೆ ವಿರುದ್ಧವೆಂದಲ್ಲ. ಎಡ-ನಡು ಶಕ್ತಿ ಕುಂದಿ, ಬಲಪಂಥೀಯ ಶಕ್ತಿಗಳು ಬಲವಾಗಿವೆ ಎಂತಲೂ ಅಲ್ಲ. ಅವರಿಗೆ ಹೊಸ ಪ್ರಜಾಸತ್ತಾತ್ಮಕ ಪ್ರಗತಿಪರ ಹೊಸ ಸಂವಿಧಾನ ಬೇಕು. ಆದರೆ ಈ ಹೊಸ ಸಂವಿಧಾನದ ಕೆಲವು ಅಂಶಗಳು ಕೆಲವು ಜನವಿಭಾಗಗಳಿಗೆ ಅರ್ಥವಾಗಿಲ್ಲ ಅಥವಾ ಅವರನ್ನು ದಾರಿತಪ್ಪಿಸಲಾಗಿದೆ ಅಥವಾ ಅವರು ಈ ಬದಲಾವಣೆಗಳಿಗೆ ಸಿದ್ಧವಿಲ್ಲ ಅಥವಾ ಎಲ್ಲ ಬದಲಾವಣೆಗಳನ್ನು ಒಂದೇ ಏಟಿಗೆ ತರುವುದು ಬೇಡ ಅನ್ನುತ್ತಿದ್ದಾರೆ ಎಂದು ಗ್ರಹಿಸಬೇಕು. ಈ ಸಂವಿಧಾನವನ್ನು ಆಧಾರವಾಗಿಟ್ಟುಕೊಂಡು ಯಾವುದನ್ನು ಕೈಬಿಡಬೇಕು ಯಾವುದನ್ನು ಸೇರಿಸಬೇಕು ಎಂಬ ವ್ಯಾಪಕ ಸಹಮತಕ್ಕೆ ಸರಕಾರ ಪ್ರಯತ್ನಿಸಬೇಕಾಗಿದೆ.

ಅದನ್ನೇ ಚಿಲಿಯ ಎಡ-ನಡುಪಂಥೀಯ ಸರಕಾರ ಮಾಡಲು ಹೊರಟಿದೆ. ಅದು ರಾಜಕೀಯವಾಗಿ ಸವಾಲಿನ ಸಂಕೀರ್ಣವಾದ ಕೆಲಸ. ಇನ್ನೊಂದು ಸಂವಿಧಾನದ ಕರಡು ತಯಾರಿಸುವ ವಿಧಾನವನ್ನು ಪಾರ್ಲಿಮೆಂಟು ಅನುಮೋದಿಸಬೇಕು. ಅಲ್ಲಿ ಬಲಪಂಥೀಯರಿಗೆ ಸಾಕಷ್ಟು ಬಲವಿದೆ, ಅದೇ ಸಮಯದಲ್ಲಿ ಪಿನೋಶೆ ಸಂವಿಧಾನಕ್ಕೆ ಹಿಂದಕ್ಕೆ ಹೋಗುವುದೂ ಅವರಿಗೆ ಸಾಧ್ಯವಿಲ್ಲ. ಸರಕಾರ ಈ ಸವಾಲನ್ನು ಸ್ವೀಕರಿಸುತ್ತದೆ. ಈ ಜನಮತಸಂಗ್ರಹ ಬೆಳಕಿಗೆ ತಂದ ನ್ಯೂನತೆಗಳನ್ನು ಎಡ-ನಡುಪಂಥೀಯ ಶಕ್ತಿಗಳು ಅರಿತುಕೊಂಡು ಮುನ್ನಡೆಯುತ್ತವೆ ಎಂದು ಆಶಿಸಬಹುದು.

ಜಿ-20 ಕಾರ್ಮಿಕ ಸಚಿವರುಗಳ ಸಭೆಯಲ್ಲಿ ಕೇಂದ್ರ ಸಚಿವರ ಬೂಟಾಟಿಕೆ: ಸಿಐಟಿಯು ಖಂಡನೆ

ಕೋವಿಡ್ ಚೇತರಿಕೆಯ ನಂತರದ ಬಲವಾದ ಮತ್ತು ಚೈತನ್ಯಶೀಲ ಚೇತರಿಕೆಗೆ ಕಾರ್ಮಿಕರ ಉದ್ಯೋಗ ಪರಿಸ್ಥಿತಿಗಳನ್ನು ಬಲಪಡಿಸಬೇಕು ಎಂದು ಭಾರತದ ಕಾರ್ಮಿಕ ಮತ್ತು ಉದ್ಯೋಗ ಸಚಿವರು ಇಂಡೋನೇಸ್ಯಾದ ಬಾಲಿಯಲ್ಲಿ ನಡೆದಿರುವ ಜಿ - 20 ದೇಶಗಳ ಕಾರ್ಮಿಕ ಮತ್ತು ಉದ್ಯೋಗ ಮಂತ್ರಿಗಳ ಸಭೆಯಲ್ಲಿ ಹೇಳಿರುವುದಾಗಿ ವರದಿಯಾಗಿದೆ. ಇದು ಪ್ರಚಾರದ ಕಸರತ್ತು ಮಾತ್ರ, ವಾಸ್ತವವಾಗಿ ಭಾರತ ಸರ್ಕಾರವು ತದ್ವಿರುದ್ಧವಾಗಿಯೇ ಕೆಲಸ ಮಾಡುತ್ತಿದೆ ಎಂದು ಸಿಐಟಿಯು ಕಟುವಾಗಿ ಟೀಕಿಸಿದೆ. ಕೋವಿಡ್ ಲಾಕ್ ಡೌನ್ ಸಮಯದಲ್ಲಿಯೇ ಕಾರ್ಮಿಕ ಸಂಹಿತೆಗಳನ್ನು ತಂದು ಕಾರ್ಮಿಕರಿಗೆ ಈ ಎಲ್ಲಾ ವರ್ಷಗಳಿಂದ ಚಾಲ್ತಿಯಲ್ಲಿರುವ ಅಲ್ಪ-ಸ್ವಲ್ಪ ಉದ್ಯೋಗ ಪರಿಸ್ಥಿತಿಗಳನ್ನು ಕೂಡ ಅವರ ಸರಕಾರ ಧ್ವಂಸ ಮಾಡಿದೆ ಎಂದು ಹೇಳಿದೆ.

ಸಾಮಾಜಿಕ ಭದ್ರತಾ ಸಂಹಿತೆ ಎಂದು ಹೇಳಲಾಗಿರುವ ಸಂಹಿತೆಯಂತೂ ಪ್ರಾಯೋಗಿಕವಾಗಿ ಬೀಡಿ ಕಾರ್ಮಿಕರು ಮತ್ತು ಗಣಿ ಕಾರ್ಮಿಕರಿಗೆ ಚಾಲ್ತಿಯಲ್ಲಿದ್ದ ಸೆಸ್ ಆಧಾರಿತ ಸಾಮಾಜಿಕ ಭದ್ರತೆಯನ್ನು ಪೂರ್ವಭಾವಿಯಾಗಿ ನಾಶಪಡಿಸಿ ಈ ಕಾರ್ಮಿಕರನ್ನು ನಡುನೀರಿನಲ್ಲಿ ಕೈಬಿಟ್ಟಿದೆ. ಈ ಸಾಮಾಜಿಕ ಭದ್ರತಾ ಸಂಹಿತೆಯಿಂದ ಪ್ರಯೋಜನವಾಗಿರುವುದು ಮಾಲಕರಿಗೆ, ಏಕೆಂದರೆ ಕಾರ್ಮಿಕರ ದೊಡ್ಡ ವಿಭಾಗವು ನಿಜವಾಗಿಯದೀ ಸಂಹಿತೆಯಿಂದಾಗಿ ಸಾಮಾಜಿಕ ಭದ್ರತಾ ವ್ಯವಸ್ಥೆಯಿಂದ ಹೊರಗೇ ಉಳಿಯುತ್ತದೆ.

ಸಚಿವರ ಹೇಳಿಕೆಯು ಉದ್ಯೋಗ ಸೃಷ್ಟಿ, ಹೆಚ್ಚಿನ ಸಾಮಾಜಿಕ ರಕ್ಷಣೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗದ ಔಪಚಾರಿಕೀಕರಣಕ್ಕಾಗಿ ದೃಢವಾದ ನೀತಿಗಳನ್ನು ತರಬೇಕೆಂದು ಒತ್ತಿ ಹೇಳುತ್ತದೆ. ಆದರೆ ಅವರ ಸರ್ಕಾರವು ಉದ್ಯೋಗದ ಅವನತಿಗೆ ಪ್ರೋತ್ಸಾಹ ನೀಡುತ್ತ ತದ್ವಿರುದ್ಧವಾದುದನ್ನೇ ಮಾಡುತ್ತಿದೆ, ಅರ್ಥವ್ಯವಸ್ಥೆಯನ್ನು ಹೆಚ್ಚೆಚ್ಚು ಅನೌಪಚಾರಿಕಗೊಳಿಸಲಾಗುತ್ತದೆ, ಸಾಮಾಜಿಕ ಭದ್ರತೆಯನ್ನು ದುರ್ಬಲಗೊಳಿಸಲಾಗುತ್ತಿದೆ ಮತ್ತು ಈ ಸಮಸ್ತ ಅವನತಿಯ ಪ್ರಕ್ರಿಯೆಯನ್ನು ಕಾರ್ಮಿಕ ಸಂಹಿತೆಗಳ ಮೂಲಕ ಸಾಂಸ್ಥಿಕಗೊಳಿಸಲಾಗಿದೆ ಎಂದಿರುವ ಸಿಐಟಿಯು ಜಿ-20ರ ಸಭೆಯಲ್ಲಿ ಸಚಿವರ ಹೇಳಿಕೆ ಜನವಿರೋಧಿ ಸರ್ಕಾರದ ಬೂಟಾಟಿಕೆಯ ಸಾರ್ವಜನಿಕ ಪ್ರದರ್ಶನ ಎಂದು ಬಲವಾಗಿ ಟೀಕಿಸಿದೆ.

ಏಪ್ರಿಲ್-ಜೂನ್ 2022ರ ಜಿಡಿಪಿ ಅಂದಾಜು: ಸಾಧನೆಯೂ ಅಲ್ಲ, ಸಂಭ್ರಮಿಸುವಂತದ್ದೂ ಅಲ್ಲ

ಪುಟ 13 ರಿಂದ

ಮಟ್ಟದಲ್ಲಿ ಜಿಡಿಪಿಯ ಹೆಚ್ಚಳವಾಗಿಲ್ಲ. ಈಗಿರುವ ಮಟ್ಟದ ಉತ್ಪಾದನೆಗೆ 2019-20ರಲ್ಲಿ ಸ್ಥಾಪಿಸಿದ ಸಾಮರ್ಥ್ಯವೇ ಸಾಕಾಗುತ್ತದೆ. ಆದರೆ, ಈ ನಡುವೆ ಹೂಡಿಕೆ ಸಂಭವಿಸುತ್ತಲೇ ಇದೆ. ಹಳೆಯದಕ್ಕೆ ಬದಲಾಗಿ ಹೊಸ ತಂತ್ರಜ್ಞಾನದ ಅಳವಡಿಕೆಗಾಗಿ ಮತ್ತು ಹೊಸ ಹೊಸ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳಲು ಸಂಭವಿಸಿದ ಹೂಡಿಕೆಗಳನ್ನು ಹೊರತುಪಡಿಸಿದರೂ ಸಹ, ಒಂದಿಷ್ಟು ಪ್ರಮಾಣದ ಹೂಡಿಕೆ ಸಂಭವಿಸಿರಲೇಬೇಕು ಮತ್ತು ಅದರಿಂದಾಗಿ ವೃದ್ಧಿಸಿದ ಉತ್ಪಾದನಾ ಸಾಮರ್ಥ್ಯವು ಬಳಕೆಯಾಗದೆ ಉಳಿದೇ ಇರುತ್ತದೆ. ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜಿಡಿಪಿಯ ಸ್ಥಗಿತತೆಯ ಈ ಅವಧಿಯಲ್ಲಿ ಸಂಭವಿಸಿದ ಹೂಡಿಕೆಯು ಅರ್ಥವ್ಯವಸ್ಥೆಯಲ್ಲಿ ಬಳಕೆಯಾಗದೆ ಉಳಿದ ಉತ್ಪಾದನಾ ಸಾಮರ್ಥ್ಯದ ಮಟ್ಟವನ್ನು ಹೆಚ್ಚಿಸಿದೆ. ಈ ಹೆಚ್ಚಳದಿಂದಾಗಿ, ಮುಂಬರುವ ದಿನಗಳಲ್ಲಿ ಹೂಡಿಕೆಯು ಕುಸಿಯಲೇಬೇಕು. ಈ ಅಂಶವು ಒಟ್ಟಾರೆ ಬೇಡಿಕೆಯ ಇಳಿಕೆಗೆ ಕಾರಣವಾಗುತ್ತದೆ ಮತ್ತು ಅದರಿಂದಾಗಿ ಉತ್ಪಾದನೆಯ ಇಳಿಕೆಗೂ ಕಾರಣವಾಗುತ್ತದೆ.

ಎರಡನೇ ಕಾರಣವು ವ್ಯಾಪಾರ ಕೊರತೆಯಲ್ಲಿ ಸಂಭವಿಸುತ್ತಿರುವ ಹೆಚ್ಚಳಕ್ಕೆ ಸಂಬಂಧಿಸಿದೆ. ರಫ್ತುಗಳಿಗಿಂತ ಆಮದುಗಳ ಹೆಚ್ಚಳವು ಚಾಲ್ತಿ ಖಾತೆಯ ಕೊರತೆಯನ್ನು ವಿಸ್ತರಿಸುತ್ತದೆ. ಹಣಕಾಸು ಬಂಡವಾಳವು ಅಂಚಿನಲ್ಲಿರುವ ದೇಶಗಳಿಂದ ಮುಂದುವರೆದ ದೇಶಗಳಿಗೆ ಹರಿಯುತ್ತಿರುವ ಪರಿಸ್ಥಿತಿಯಲ್ಲಿ, ಹೆಚ್ಚುತ್ತಿರುವ ಚಾಲ್ತಿ ಖಾತೆ ಕೊರತೆಯನ್ನು ನಿಭಾಯಿಸುವುದು ಇನ್ನೂ ಹೆಚ್ಚು ಕಷ್ಟಕರವಾಗುತ್ತದೆ. ಈ ಪರಿಸ್ಥಿತಿಯು ರೂಪಾಯಿಯ ಮತ್ತಷ್ಟು ಅಪಮೌಲ್ಯಕ್ಕೆ ಕಾರಣವಾಗುತ್ತದೆ. ಅದರಿಂದಾಗಿ ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರ ಹೆಚ್ಚುತ್ತದೆ. ಹಣದುಬ್ಬರದ ವೇಗವನ್ನು ನಿಯಂತ್ರಿಸುವ ಒಂದು ನಿರೀಕ್ಷಿತ ಪ್ರತಿಕ್ರಿಯೆಯೆಂದರೆ ಸರ್ಕಾರದ ವೆಚ್ಚಗಳ ಕಡಿತ ಮತ್ತು ಬಡ್ಡಿ ದರಗಳ ಏರಿಕೆ. ಇದು ನಮ್ಮ ದೇಶದಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಸಂಭವಿಸುತ್ತಲೇ ಇದೆ. ಈ ಕ್ರಮಗಳು ಮೂಲಭೂತವಾಗಿ ಆರ್ಥಿಕ ಹಿಂಜರಿತದ ಕ್ರಮಗಳಾಗಿದ್ದು, ದುಡಿಯುವ ಜನರ ಚೌಕಾಶಿ ಶಕ್ತಿಯನ್ನು ಕಡಿಮೆ ಮಾಡುವಲ್ಲಿ ಪರಿಣಮಿಸುತ್ತವೆ. ದುಡಿಯುವ ಜನರನ್ನು ಸಂಕಷ್ಟಗಳಿಗೆ ಗುರಿಮಾಡುವ ಈ ಕ್ರಮಗಳ ಮೂಲಕವೇ ಹಣದುಬ್ಬರವನ್ನು ನಿಭಾಯಿಸಲಾಗುತ್ತದೆ.

ಅಶುಭಕರವಾದ ಹೊಸ ಬೆಳವಣಿಗೆ

ಈ ಸಂದರ್ಭದಲ್ಲಿ ಗಮನಿಸಬಹುದಾದ ಇನ್ನೂ ಒಂದು ಅಂಶವಿದೆ. ಚಾಲ್ತಿ ಖಾತೆ ಕೊರತೆ ಹೆಚ್ಚಾದಾಗ, ರೂಪಾಯಿಯ ಮತ್ತಷ್ಟು ಕುಸಿತವನ್ನು ವಿದೇಶಿ ಹೂಡಿಕೆದಾರರು ನಿರೀಕ್ಷಿಸುತ್ತಾರೆ. ಸ್ವಾರ್ಥ-ಸಾಧನೆಯ ಈ ನಿರೀಕ್ಷೆಯು ನಿಜಕ್ಕೂ ಬಂಡವಾಳದ ಹೊರಹರಿವಿಗೆ ಕಾರಣವಾಗುತ್ತದೆ. ಪರಿಣಾಮವಾಗಿ, ಹಣದುಬ್ಬರದ ವೇಗವರ್ಧನೆ ಮತ್ತು ಅದನ್ನು ನಿಯಂತ್ರಿಸಲು ಆರ್ಥಿಕ ಹಿಂಜರಿತದ ಅದೇ ಕ್ರಮಗಳು ತೆರೆದುಕೊಳ್ಳುತ್ತವೆ. ಆದ್ದರಿಂದ, ಅರ್ಥವ್ಯವಸ್ಥೆಯ ಸ್ಥಗಿತತೆಯು ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ಹೆಚ್ಚುತ್ತದೆ.

ಈ ವಿಷಮ ಪರಿಸ್ಥಿತಿಯಲ್ಲಿ ವ್ಯಾಪಾರ ಕೊರತೆಯ ಹೆಚ್ಚಳವು ಭಾರತದ ಅರ್ಥವ್ಯವಸ್ಥೆಗೆ ಅಶುಭಕರವಾದ ಒಂದು ಹೊಸ ಬೆಳವಣಿಗೆಯಾಗುತ್ತದೆ. ಅರ್ಥವ್ಯವಸ್ಥೆಯು ಸ್ಥಗಿತತೆಯತ್ತ ಸಾಗುವ ಪ್ರವೃತ್ತಿ ಕೊರೊನಾ ಹರಡುವ ಮುನ್ನವೇ ಇತ್ತು. ಆಗ, ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲೂ ಹಣದುಬ್ಬರ ಹೆಚ್ಚುತ್ತಿತ್ತು. ಈಗ, ಈ ಸಮಸ್ಯೆಗಳ ಜೊತೆಗೆ ವ್ಯಾಪಾರ ಕೊರತೆ ಮತ್ತು ಚಾಲ್ತಿ ಖಾತೆ ಕೊರತೆಗಳು ಸೇರಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದು ಬಿಕ್ಕಟ್ಟು ಅರ್ಥವ್ಯವಸ್ಥೆಯನ್ನು ಆವರಿಸಿದೆ. ದಿನೇ ದಿನೇ ಬಿಕ್ಕಟ್ಟಿನ ವ್ಯಾಪ್ತಿ ಹೆಚ್ಚುತ್ತಿದೆ. ಮತ್ತು ನವ-ಉದಾರವಾದದಲ್ಲಿ ಅದಕ್ಕೆ ಪರಿಹಾರವಿಲ್ಲ.

"ಚುನಾವಣೆ ಗೆಲ್ಲಲು ಸಂಘ ಪರಿವಾರದಿಂದ ದೇಶಾದ್ಯಂತ ಬಾಂಬ್ ಸ್ಫೋಟಗಳು"

ಪುಟ 11 ರಿಂದ

ಭಾಗ, ನಾಂದೇಡ್ ಸ್ಫೋಟ ಇದರ ಒಂದು ಸಣ್ಣ ಭಾಗವಷ್ಟೇ ಎಂದು ಆತ ಹೇಳುತ್ತಾರೆ. 2007ರಲ್ಲೇ ಹೈದರಾಬಾದ್ ಮಕ್ಕಾ ಮಸೀದಿ ಸ್ಫೋಟ ಮತ್ತು ಅಜ್ಮೇರ್ ಶರೀಫ್ ಸ್ಫೋಟ ಕೂಡ ನಡೆದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತಾನು 18 ವರ್ಷದವನಾಗಿದ್ದಾಗ ಆರೆಸ್ಸೆಸ್ ಕಾರ್ಯಕರ್ತನಾದೆ ಎಂದು ಈಗ 49 ವರ್ಷವಾಗಿರುವ ಯಶವಂತ ಶಿಂಧೆ ಹೇಳುತ್ತಾರೆ, ಅದರ ಪರಿವಾರವಾಗಿರುವ ವಿಹೆಚ್‌ಪಿ ಮತ್ತು ಭಜರಂಗ ದಲದಲ್ಲಿಯೂ ಕೆಲಸ ಮಾಡಿದ್ದಾರಂತೆ. ತಾನು ಆರೆಸ್ಸೆಸ್ ನ ಹಿರಿಯ ಮುಖಂಡರಿಗೆ ಈ ಪಿತೂರಿಗಳ ಬಗ್ಗೆ ಎಚ್ಚರಿಸುತ್ತ ಬಂದಿದ್ದೇನೆ, ಆದರೆ ಅವರು ಅದಕ್ಕೆ ಕಿವಿಗೊಟ್ಟಿಲ್ಲ, ಇದರಿಂದ ಈ ಚಟುವಟಿಕೆಗಳಿಗೆ ಅವರ ಪರೋಕ್ಷ ಬೆಂಬಲವೂ ಇದೆ ಎಂದು ತಮಗೆ ಅನಿಸಿದೆ ಎನ್ನುವ ಶಿಂಧೆ "ನಾನೀಗ ಈ ಎಲ್ಲ ಹಿಂದು ಸಂಘಟನೆಗಳಿಂದ ದೂರವಿರಬೇಕಾಗಿ ಬಂದಿದೆ. ಅವರು ಅಧಿಕಾರದಲ್ಲಿರಲು ದೇಶವನ್ನು ಧ್ರುವೀಕರಿಸುತ್ತಿದ್ದಾರೆ, ಆದ್ದರಿಂದ ಹೀಗೆ ಮಾಡಬೇಕೆಂದು ನಾನು ಯೋಚಿಸಿದೆ" ಎಂದು ಇಷ್ಟು ವರ್ಷಗಳ ನಂತರ ಈಗ ಈ ಅರ್ಜಿ ಹಾಕಲು ಕಾರಣವೇನು ಎಂದು ಕೇಳಿದಾಗ ಹೇಳಿದ್ದಾರೆ.

ನ್ಯಾಯಾಲಯ ಈ ಕುರಿತಂತೆ ಸಪ್ಟಂಬರ್ 22 ರೊಳಗೆ ಉತ್ತರಿಸಬೇಕು ಎಂದು ಸಿಬಿಐ ವಕೀಲರಿಗೆ ಮತ್ತು ಆರೋಪಿಗಳಿಗೆ ಸಮನ್ಸ್ ಕಳಿಸಿದೆ ಎಂದು ಯಶವಂತ ಶಿಂಧೆಯ ವಕೀಲರಾದ ಸಂಗಮೇಶ್ವರ ದೆಲ್ಮಾಡೆ ಹೇಳಿರುವುದಾಗಿ ವರದಿಯಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE September 19-25, 2022, 2022 Price: Rs. 10/- Date of Publication: 16 September 2022 RNI No. KARKAN /2006/17926 Posted on 19-09-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**